*Copies can be had from:*

**SATYA VANI - CHURCH OF CHRIST**

**P.O. Box 80**

**KAKINADA, A.P. 533001**

# ದೈವಿಕ ಸಭೆ

## THE CHURCH DIVINE

**(Kannada)**

**Louis Rushmore**





**Church of Christ**
P.O. Box 80, Kakinada, A.P. 533001

ದೈವಿಕ ಸಭೆ THE CHURCH DIVINE

# ದೈವಿಕ ಸಭೆ

# THE CHURCH DIVINE

(Kannada)



Louis Rushmore

# ದೈವಿಕ ಸಭೆ
# THE DIVINE CHURCH

*Author:*
**Louis Rushmore**

*Translator:*
**Bro. Ajith Kumar**

*Typing & Proof Reading*
**Bro. Rathnakar & Bro. Eshwar**
Cell : 82178 16550, 97394 08727
*e-mail: rathnakarcoc@gmail.com*

**World Literature Publications**

SATYA VANI P.O.BOX. 80, KAKINADA, A.P.-533 001

# ಪರಿಚಯ

ಕನ್ನಡ ಭಾಷೆಯಲ್ಲಿ ಮುದ್ರಣಗೊಂಡ ದೈವಿಕ ಸಭೆ ಎಂಬ ಚಿಕ್ಕ ಪುಸ್ತಕವನ್ನು ನಿಮ್ಮ ಕೈಯಲ್ಲಿ ಕೊಡುವದಕ್ಕೆ ನಾನು ತುಂಬ ಸಂತೋಷಿಸುತ್ತೇನೆ. ಹೊಸ ಒಡಂಬಡಿಕೆ ಸತ್ಯಗಳನ್ನು ಕನ್ನಡ ಭಾಷೆಯಲ್ಲಿ ಮುದ್ರಿಸುವದಕ್ಕೆ ನಾವು ಮಾಡುತ್ತಿರುವ ಚಿಕ್ಕ ಪ್ರಯತ್ನವಿದು.

ಸಭೆಯು ಕ್ರಿಸ್ತನದು, ದೇವರದು, ಕ್ರಿಸ್ತನ ಸಭೆ ಎಂಬ ಹೆಸರು, ಕ್ರೈಸ್ತರು ಎಂಬ ಹೆಸರು ದೈವಿಕವಾದದ್ದು. ಹೊಸ ಒಡಂಬಡಿಕೆಯಲ್ಲಿ ನಮಗೆ ಕಾಣಿಸುವ ಸಭೆ ಒಂದೇ ಒಂದು. ಅದು ಕ್ರಿಸ್ತನ ಸಭೆ. ಇದು ಮತಖಾಖೆಯಲ್ಲ (ಡಿನಾಮಿನೇಷನ್ ಅಲ್ಲ) ಕಳೆದ 20 ಶತಮಾನಗಳಿಂದಲೂ ಮತಶಾಖೆಗಳು ಹೊಸ ಒಡಂಬಡಿಕೆಯ ಸತ್ಯಗಳನ್ನು ಪ್ರಕಟಿಸದೆ ಅವರ ಸ್ವಂತ ಸಿದ್ಧಾಂತಗಳನ್ನು, ಮನುಷ್ಯರು ಕಲ್ಪಿಸಿದ ಆಚಾರಗಳನ್ನು ಕ್ರೈಸ್ತವ ಲೋಕಕ್ಕೆ ಪ್ರವೇಶ ಪಡಿಸಿದರು.

ದೈವಿಕ ಸಭೆ ಎಂಬ ಈ ಪುಸ್ತಕವು ದೇವರ ನಿತ್ಯ ಸಂಕಲ್ಪದಲ್ಲಿರುವ ಸಭೆಯನ್ನು, ಅದರ ಆರಾಧನೆ ಪದ್ದತಿ, ಬೋಧನೆ ಮುಂತಾದ ಸತ್ಯಗಳನ್ನು ನಿಮಗೆ ತಿಳಿಯಪಡಿಸುತ್ತದೆ. ಈ ಪುಸ್ತಕವನ್ನು ಕನ್ನಡ ಭಾಷೆಗೆ ಭಾಷಾಂತರಗೊಳಿಸಲು ಸಹಾಯ ಮಾಡಿದ ಸಹೋ॥ ಅಜೀತ್ ಕುಮಾರ್, ರತ್ನಕರ್, ಈಶ್ವರ ಅವರಿಗೆ ನನ್ನ ಹೃದಯ ಪೂರ್ವಕ ಧನ್ಯವಾದಗಳು.

**ಕಾಕಿನಾಡ**
ಜನವರಿ - 2018

**ಜಾಷುವಾ ಗೂಟಂ**
ಸತ್ಯವಾಣಿ.

| ವಿಷಯಗಳು | ಪುಟ ಸಂಖ್ಯೆ |
|---|---|


1. ಹೊಸ ಒಡಂಬಡಿಕೆ ಸಭೆಯು ದೈವಿಕ ವಾದದ್ದು 1
2. ಹೊಸ ಒಡಂಬಡಿಕೆ ಸಭೆಯ ಆರಂಭವು ದೈವಿಕ ದಾದದ್ದು 4
3. ಹೊಸ ಒಡಂಬಡಿಕೆ ಸಭೆಯ ನಿರ್ಮಾಣ ಪದ್ಧತಿ ದೈವಿಕವಾದದ್ದು 10
4. ಹೊಸ ಒಡಂಬಡಿಕೆ ಸಭೆಯ ಆರಾಧನೆ ದೈವಿಕ ವಾದದ್ದು 14
5. ಹೊಸ ಒಡಂಬಡಿಕೆ ಸಭೆಯು ಉಪದೇಶದಲ್ಲಿ ದೈವಿಕವಾದದ್ದು 20
6. ಹೊಸ ಒಡಂಬಡಿಕೆ ಸಭೆಯು ಐಕ್ಯತೆಯಲ್ಲಿ ದೈವಿಕವಾದದ್ದು 24
7. ಹೊಸ ಒಡಂಬಡಿಕೆ ಸಭೆಯು ಕಾರ್ಯದಲ್ಲಿ ದೈವಿಕ ವಾದದ್ದು 29
8. ಹೊಸ ಒಡಂಬಡಿಕೆ ಸಭೆಯು ದೀಕ್ಷಾಸ್ನಾನದಲ್ಲಿ ದೈವಿಕವಾದದ್ದು 34
9. ಹೊಸ ಒಡಂಬಡಿಕೆ ಸಭೆಯು ಕ್ರಮಶಿಕ್ಷಣದಲ್ಲಿ ದೈವಿಕ ವಾದದ್ದು 41
10. ಹೊಸ ಒಡಂಬಡಿಕೆ ಸಭೆಯು ದೈವತ್ವವನ್ನು ಕುರಿತಾದ ಬೋಧನೆಯಲ್ಲಿ ದೈವಿಕ ವಾದದ್ದು 47
11. ಹೊಸ ಒಡಂಬಡಿಕೆ ಸಭೆಯು ಸಹವಾಸ(ಅನ್ಯೋನ್ಯತೆ)ಯಲ್ಲಿ ದೈವಿಕ ವಾದದ್ದು 54
12. ಹೊಸ ಒಡಂಬಡಿಕೆ ಸಭೆಯು ಆತ್ಮದ ವಿಷಯದಲ್ಲಿ ದೈವಿಕವಾದದ್ದು 59
13. ಹೊಸ ಒಡಂಬಡಿಕೆ ಸಭೆಯು ಪ್ರೀತಿಯಲ್ಲಿ ದೈವಿಕವಾದದ್ದು 63




# 1. ಹೊಸ ಒಡಂಬಡಿಕೆ ಸಭೆಯು ದೈವಿಕವಾದದ್ದು

## (The New Testament Church is Divine in Nature)

ಕ್ರಿಸ್ತನು ಯಾವ ಸಭೆಯ ನಿಮಿತ್ತ ಮರಣ ಹೊಂದಿದನು(ಅ.ಕೃ.20:28; ಎಫೆಸ5:27) ಯಾವುದಕ್ಕೆ ಶಿರಸ್ಸು ಆಗಿದ್ದಾನೆ (ಎಫೆಸ 5:23). ಯಾವುದನ್ನು ಕುರಿತು ನಾವು ದೇವರ ಗ್ರಂಥದಲ್ಲಿ ಓದುತ್ತಿದ್ದೇವೋ, ಅದು ಬೈಬಲ್ ಸಂಬಂಧವಾದ ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿದೆ. ಈ ಹೆಸರುಗಳು ದೈವಿಕವಾದವುಗಳಾಗಿದ್ದು ಸದಾಕಾಲ ದೇವರನ್ನು, ಯೇಸು ಕ್ರಿಸ್ತನನ್ನು ಘನಪಡಿಸುತ್ತವೆ. (ಮತ್ತಾಯ 16:16, ಅ.ಕೃ2:47) ಅದೇ ರೀತಿಯಾಗಿ ಸಭೆಯಲ್ಲಿರುವ ಸದಸ್ಯರಿಗೂ ಹೊಸ ಒಡಂಬಡಿಕೆಯಲ್ಲಿ ದೈವಿಕ ಹೆಸರುಗಳು ಕೊಡಲ್ಪಟ್ಟಿವೆ. ಕರ್ತನ ಸಭೆಯ ಬಗ್ಗೆಯೂ, ಅದರ ಸದಸ್ಯರ ಬಗ್ಗೆಯೂ ದೈವಿಕ ಹೆಸರುಗಳನ್ನು ನಾವು ಬೈಬಲ್‌ನಲ್ಲಿ ತಿಳಿದುಕೊಂಡ ನಂತರ, ಇಂದಿನ ಆಧುನಿಕ ಸಭೆಯ ಹೆಸರುಗಳು, ಅವುಗಳ ಸದಸ್ಯರ ಹೆಸರುಗಳು ದೈವಿಕ ಅನುಮತಿ ಹೊಂದಿವೆಯೋ ಇಲ್ಲವೊ ಎಂದು ತಿಳಿದುಕೊಳ್ಳಬಹುದು.

### ಸಭೆಗೆ ಬೈಬಲ್ ಹೆಸರುಗಳು.

ನಿಜವಾಗಿ ಹೇಳಬೇಕಾದರೆ ದೇವರ ಸಭೆಗೆ ಒಂದು ಪ್ರತ್ಯೇಕ ಹೆಸರು ಇಲ್ಲ! ಆದರೆ ಬೈಬಲ್‌ನಲ್ಲಿ ಕಾಣಿಸುವ ದೇವರ ಸಭೆಯ ಹೆಸರುಗಳು ವರ್ಣನಾತ್ಮಕವಾದವುಗಳು. ಇವು ಸಭೆಯ ತತ್ವವನ್ನೂ, ದೇವರಿಗೂ, ಯೇಸುಕ್ರಿಸ್ತನಿಗೂ, ಅದಕ್ಕಿರುವ ಸಂಬಂಧವನ್ನು ವರ್ಣಿಸುತ್ತವೆ.

ಸಾಧಾರಣವಾಗಿ ಹೆಸರುಗಳು ಒಂದು ವಸ್ತುವನ್ನು, ವ್ಯಕ್ತಿಯನ್ನು, ಸಂಸ್ಥೆಯನ್ನು ಉಳಿದವುಗಳೊಂದಿಗೆ ಬೇರ್ಪಡಿಸಲು ಉಪಯೋಗಿಸಲಾಗುತ್ತದೆ. ಆದರೆ ಇರುವುದು ಒಂದೇ ಒಂದಾದರೆ ಅದನ್ನು ಬೇರ್ಪಡಿಸುವ ಬೇರೆ ಬೇರೆ ಹೆಸರುಗಳು ಅನವಶ್ಯಕ.

ಕ್ಯಾಥೋಲಿಕ್, ಸಭೆ, ಮತಶಾಖೆಗಳು ಉದ್ಭವಿಸುವುದಕ್ಕಿಂತ ಮುಂಚೆ, ಬೈಬಲ್‌ನಲ್ಲಿರುವ ವರ್ಣನಾತ್ಮಕವಾದ ಹೆಸರುಗಳು ಒಂದೇ ಒಂದು ಸಭೆಯನ್ನು ಸೂಚಿಸಿದವು. ಅದರಲ್ಲಿ ಗಲಿಬಿಲಿ ಏನೂ ಇಲ್ಲ. ಹೇಗೆಂದರೆ ಆಗ ಇದ್ದದ್ದು ಒಂದೆ ಒಂದು ಸಭೆ. ಆ ಹೆಸರುಗಳೆಲ್ಲವೂ ಅದರ ಸ್ಥಾಪಕನೊಂದಿಗೆ ಸಭೆಗಿರುವ

ಸಂಬಂಧವನ್ನು ಸೂಚಿಸುತ್ತಿದ್ದವು. ಆದರೆ ಈಗ ಸಾವಿರಾರು ಮತಶಾಖೆಗಳು ಉದ್ಭವಿಸಿರುವುದರಿಂದ ಅವುಗಳ ವಿವಿಧ ಹೆಸರುಗಳು ಒಂದಕ್ಕೊಂದು, ಬೈಬಲ್‌ನಲ್ಲಿರುವ ಸಭೆಗೂ ಅವುಗಳಿಗೂ ಇರುವ ವ್ಯತ್ಯಾಸವನ್ನು ಸೂಚಿಸುತ್ತಿವೆ.

ಆದ್ದರಿಂದ ಕರ್ತನ ಸಭೆಗೆ ಬೈಬಲ್‌ನಲ್ಲಿರುವ ಹೆಸರುಗಳು ಬ್ರಾಂಡ್ ಹೆಸರುಗಳು ಅಲ್ಲ. ಆದರೆ ಮತಶಾಖೆಗಳಿಗೆ ಅದರದರ ಪ್ರತ್ಯೇಕ ಬ್ರಾಂಡ್ ಹೆಸರುಗಳು ಇವೆ. ಕ್ರಿಸ್ತನು ತನ್ನ ಒಂದೇ ಒಂದು (ಏಕೈಕ) ಸಭೆಗಾಗಿ ಮರಣ ಹೊಂದಿದನು. ಆತನು ಒಂದೇ ಒಂದು ಸಭೆಯನ್ನು ಸ್ಥಾಪಿಸಿದನು. (ಮತ್ತಾಯ 16:16–18). ಮತಶಾಖೆ ಸಭೆಗಳಾದರೆ ಒಂದು ರೀತಿಯಾದ (ಬ್ರಾಂಡ್) ಮತಶಾಖೆಯೊಂದಿಗೆ ಬೇರೆಮಾಡುವ ಹೆಸರುಗಳನ್ನು ಹೊಂದಿವೆ. ಅವು ಬೈಬಲ್‌ನಲ್ಲಿರುವ ಏಕೈಕ ನಿಜ ಸಭೆಗೆ, ಹೊಸ ಒಡಂಬಡಿಕೆ ಕ್ರೈಸ್ತವ್ಯಕ್ಕೆ ಬೇರೆಯಾಗಿ ಇವೆ.

ಬೈಬಲ್‌ನಲ್ಲಿರುವ ದೇವರ ಸಭೆಯು ಕೆಳಗಿನ ಹೆಸರುಗಳೊಂದಿಗೆ ವರ್ಣಿಸಲ್ಪಟ್ಟಿದೆ. "ನನ್ನ ಸಭೆ" (ಮತ್ತಾಯ16:18),"ಸಭೆ" (ಅ.ಕೃ.8:1),"ದೇವರ ಸಭೆ" (1ಕೊರಿಂಥ1:2), "ಕ್ರಿಸ್ತನ ಸಭೆಗಳು" (ರೋಮಾ 16:16), "ಕ್ರಿಸ್ತನ ದೇಹ"(ಎಫೆಸ4:12), "ಜೀವಸ್ವರೂಪನಾದ ದೇವರ ಸಭೆ" (1ತಿಮೊಥೆ 3:15), "ದೇವರ ಆಲಯ" (1ಕೊರಿಂಥ 3:16), "ಕ್ರಿಸ್ತನ ಮದಲಗಿತ್ತಿ" (ಪ್ರಕ 22:17), "ತನ್ನ ಪ್ರಿಯಕುಮಾರನ ರಾಜ್ಯ" (ಕೊಲೆಸ್ಸಿ 1:13), "ದೇವರ ಮನೆ" (1ತಿಮೊತಿ 3:15). ಬೈಬಲ್‌ನಲ್ಲಿರುವ ಸಭೆ ದೈವಿಕ ಹೆಸರುಗಳನ್ನು ಧರಿಸುವುದು ಮುಖ್ಯವೇ ಆದರೂ, ಆ ಹೆಸರು ಧರಿಸುವುದೊಂದೇ ಕ್ರಿಸ್ತನ ಸಭೆಗೆ ಗುರುತು ಆಗುವುದಿಲ್ಲ.

## ಸಭೆಯ ಸದಸ್ಯರಿಗೆ ದೈವಿಕ ಹೆಸರುಗಳು

ದೇವರ ಪ್ರಜೆಗಳು ಎರಡು ಒಡಂಬಡಿಕೆಗಳಲ್ಲೂ ವಿವಿಧ ಹೆಸರುಗಳಿಂದ ವರ್ಣಿಸಲ್ಪಟ್ಟಿದ್ದಾರೆ. ಹಳೆಯ ಒಡಂಬಡಿಕೆಯಲ್ಲಿ ಬಳಸಿದ ಅನೇಕ ಪದಗಳು ಹೊಸ ಒಡಂಬಡಿಕೆಯಲ್ಲೂ ಕೂಡ ಉಪಯೋಗಿಸಲ್ಪಟ್ಟಿವೆ. ಆದರೆ ಹೊಸ ಒಡಂಬಡಿಕೆಯಲ್ಲಿ  ದೇವರ ಪ್ರಜೆಗಳಿಗೆ ಒಂದು ಪ್ರತ್ಯೇಕವಾದ ಹೊಸ ಹೆಸರು ಕೊಡಲ್ಪಟ್ಟಿದೆ.

ಎರಡು ಒಡಂಬಡಿಕೆಗಳಲ್ಲೂ ದೇವರ ಪ್ರಜೆಗಳಿಗೆ ಕೆಳಗಿನ ಹೆಸರುಗಳು



ಉಪಯೋಗಿಸಲ್ಪಟ್ಟಿವೆ. "ಅಂಗಗಳು" (1ಕೊರಿಂಥ 12:27), "ಶಿಷ್ಯರು" (ಅ.ಕೃ.6:1), "ದೇವಜನರು" (ಅ.ಕೃ.9:13; 1ಕೊರಿಂಥ 1:2), "ದೇವರ ಮಕ್ಕಳು" (ರೋಮ8:14).

ಹೊಸ ಒಡಂಬಡಿಕೆಯಲ್ಲಿ ದೇವರ ಪ್ರಜೆಗಳಿಗೆ ಕೊಡಲ್ಪಟ್ಟ ಮತ್ತೊಂದು ಹೆಸರು ಇದೆ. ಅದನ್ನು ಕುರಿತು ನೂರಾರು ಸಂವತ್ಸರಗಳಿಗಿಂತ ಮುಂಚೆಯೇ ಪ್ರವಾದಿಸಲ್ಪಟ್ಟಿದೆ. ಅನ್ಯಜನರು ದೇವರ ರಾಜ್ಯದೊಳಗೆ (ಸಭೆಯೊಳಗೆ) ಪ್ರವೇಶಿಸಲ್ಪಟ್ಟ ನಂತರ ದೇವರ ಪ್ರಜೆಗಳೆಲ್ಲರೂ ಈ ಹೊಸ ಹೆಸರಿನಿಂದ ಕರೆಯಲ್ಪಡುವರು ಎಂದು ಯೆಶಾಯನು ಪ್ರವಾದಿಸಿದನು. ಅದು ಯೆಹೋವನು ನಿಯಮಿಸಿದ ಹೊಸ ಹೆಸರು ಎಂದು ಆತನು ಹೇಳಿದನು. (ಯೆಶಾಯ 62:1–2; 56:5). ಕೊರ್ನೇಲ್ಯನು ಆತನ ಮನೆಯವರೂ ಸಭೆಯೊಂದಿಗೆ ಸೇರಿಸಲ್ಪಟ್ಟನಂತರ ಈ ಹೊಸ ಹೆಸರು ಇನ್ನೂ ಎರಡು ಸಾರಿ ಉಪಯೋಗಿಸಲ್ಪಟ್ಟಿದೆ. ಈ ಹೆಸರು ಒಬ್ಬ ವ್ಯಕ್ತಿಗೂ ತನ್ನ ವಿಮೋಚಕನಿಗೂ ಇರುವ ಸಂಬಂಧವನ್ನು ಪ್ರತ್ಯೇಕವಾಗಿ ವರ್ಣಿಸುತ್ತದೆ.

## ಮುಕ್ತಾಯ:

ಯುಕ್ತ ವಯಸ್ಸುಳ್ಳ ಪ್ರತಿಯೊಬ್ಬನೂ ಕ್ರೈಸ್ತವನಾಗಿ ಇರುವುದಕ್ಕೆ ಮಾತ್ರವೇ ಪ್ರಯತ್ನಿಸಬೇಕು. ಮತ್ತು ಕ್ರೈಸ್ತರೊಂದಿಗೆ ಮಾತ್ರ ಕ್ರಿಸ್ತನ ದೈವಿಕ ಸಭೆಯು ಒಂದಾಗಿದೆ ಎಂದು ತಿಳಿದುಕೊಳ್ಳಬೇಕು. ಮತಶಾಖೆಗಳಿಗೆ ಸಂಬಂಧಿಸಿದಂತೆ ಹೆಸರುಗಳು ಮನುಷ್ಯ ಕಲ್ಪಿತವಾದವುಗಳು. ಕ್ರೈಸ್ತರೆಂಬ ದೈವಿಕ ಹೆಸರನ್ನು ಅವು ಕೆಡಿಸುತ್ತವೆ. ಕ್ರೈಸ್ತರೆಂಬ ಹೆಸರು ಒಂದು ಬ್ರಾಂಡ್ ಹೆಸರು ಅಲ್ಲ.

# 2. ಹೊಸ ಒಡಂಬಡಿಕೆ ಸಭೆಯ ಆರಂಭವು ದೈವಿಕವಾದದ್ದು
## (The New Testament church is Divine in Origin)

ಯೇಸುಕ್ರಿಸ್ತನು ಶಿರಸ್ಸಾಗಿರುವ ಸಭೆಯು ದೈವಿಕ ಹೆಸರುಗಳನ್ನು ಧರಿಸುತ್ತದೆ. ಮತ್ತು ಅದರ ಆರಂಭವು ದೈವಿಕವಾದದ್ದು. ಅದರ ಆರಂಭವು ದೈವಿಕವಾದದ್ದು ಎನ್ನುವುದಕ್ಕೆ ಎರಡು ಕಾರಣಗಳಿವೆ. 1.ಸೃಷ್ಟಿ ಪ್ರಾರಂಭಕ್ಕೆ ಮೊದಲೇ ಸಭೆಯು ದೇವರ ಸಂಕಲ್ಪದಲ್ಲಿ ಇತ್ತು. 2.ದೇವರ ಸಂಕಲ್ಪದಿಂದಾಗಿ ಪರಲೋಕಾಧಿಕಾರದೊಂದಿಗೆ ಸಭೆಯು ಸ್ಥಾಪಿಸಲ್ಪಟ್ಟಿತು. ಕೆಳಗಡೆ ನೀಡಿರುವ ಉದಾಹರಣೆಗಳನ್ನು ಜಾಗ್ರತೆಯಿಂದ ಪರಿಶೀಲಿಸಿದರೆ, ಶ್ರದ್ಧೆಯುಳ್ಳ ವಿಧ್ಯಾರ್ಥಿ, ಬೈಬಲ್‌ನಲ್ಲಿರುವ ಸಭೆಯು ಯಾವುದೆಂದು ಗುರುತಿಸುತ್ತಾನೆ. ಇಂದಿನ ಲೋಕದಲ್ಲಿ ಮತ ಶಾಖೆಗಳ ಗಲಿಬಿಲಿ ಎಷ್ಟಿದ್ದರೂ ಗ್ರಂಥದಲ್ಲಿರುವ ಕ್ರಿಸ್ತನ ಸಭೆಯನ್ನು ಗುರುತಿಸಬಹುದು.

### ದೇವರ ಮನಸ್ಸಿನಲ್ಲಿ ಸಂಕಲ್ಪ:

ಯಹೂದ್ಯರು (ಇಸ್ರಾಯೇಲ್ಯರು) ಕ್ರಿಸ್ತನನ್ನು ತಮ್ಮ ಮೆಸ್ಸೀಯನೆಂದು ಒಪ್ಪಿಕೊಳ್ಳದೇ ಹೋಗಿದ್ದರಿಂದ, ದೇವರು ಅದಕ್ಕೆ ಬದಲಾಗಿ (ಅಂದರೆ ರಾಜ್ಯಕ್ಕೆ ಬದಲಾಗಿ) ಸಭೆಯನ್ನು ಸ್ಥಾಪಿಸಿದನೆಂದು ಅನೇಕರು ಬೋಧಿಸುತ್ತಾರೆ. ಆದರೆ ಅದು ಸತ್ಯವಲ್ಲ, ಸಭೆಯು, ರಾಜ್ಯವೂ ಎನ್ನುವ ಪದಗಳು ಒಂದಕ್ಕೊಂದು ಉಪಯೋಗಿಸಿದವುಗಳು ಎಂದು ಅರಿತುಕೊಳ್ಳದೇ (ಮತ್ತಾಯ 16:16–19), ರಾಜ್ಯಕ್ಕೆ ಬದಲಾಗಿ ಸಭೆಯು ಸ್ಥಾಪಿಸಲ್ಪಟ್ಟಿದೆ ಎಂದು ಅವರು ಭಾವಿಸುತ್ತಾರೆ. ಇದು ದೇವರಿಗೂ ಕ್ರಿಸ್ತನಿಗೂ, ಇರುವ ಸರ್ವಶಕ್ತಿಯನ್ನು ಮತ್ತು ಸರ್ವ ಜ್ಞಾನವನ್ನೂ ನಿರಾಕರಿಸುತ್ತದೆ.

ಸಭೆಯ ಮೂಲಕ ಮನುಷ್ಯನನ್ನು ಬಿಡುಗಡೆಗೊಳಿಸುವ ದೇವರ ಸಂಕಲ್ಪವನ್ನು ಕುರಿತು ಅಪೊಸ್ತಲನಾದ ಪೌಲನು ಎಫೆಸದವರಿಗೆ ವಿವರಿಸಿದ್ದಾನೆ. (ಎಫೆಸ 3:3–12). ದೇವರ ಸಂಕಲ್ಪವು ಇದುವರೆಗೆ ಗುಪ್ತವಾಗಿತ್ತು, ಅದು ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ. ಆದರೆ ಈಗ ಅದು ತನ್ನ ಪರಿಶುದ್ಧ ಅಪೊಸ್ತಲರಿಗೂ, ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಿತು.

ಈ ಮರ್ಮದಲ್ಲಿ ಅನ್ಯಜನರೂ ಕೂಡ ಸೇರುವುದು ಅಡಕವಾಗಿತ್ತು, “ಅದು



ಯಾವದೆಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ, ಒಂದೇ ದೇಹದೊಳಗಣ ಅಂಗಗಳೂ, ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ.” (ಎಫೆಸ 3:6). ಯೆಹೂದ್ಯರನ್ನೂ, ಉಳಿದ ಪ್ರಜೆಗಳನ್ನು ಗಮನಿಸದೇ ಹೋದರೂ ದೇವರ ಸಂಕಲ್ಪದಲ್ಲಿ ಯಹೂದ್ಯರೂ, ಅನ್ಯಜನರೂ ಕೂಡ ಸಮಾನವಾಗಿ ಸ್ವಾಸ್ಥ್ಯಹೊಂದುವರೆಂದು ಅನೇಕ ಪ್ರವಾದನೆಗಳು ಹೇಳಲ್ಪಟ್ಟಿವೆ. (ಆದಿ 12:3; 22:18 ;ಯೆಶಾಯ 62:2, ಯೋವೇಲ 3:1–2, ಲೂಕ 2:25–32).

ದೇವರ ಈ ಸಂಕಲ್ಪವು, ಅದರ ವಿವರಣೆ ಒಂದು ಮರ್ಮವೆಂದು ಹೇಳಲ್ಪಟ್ಟಿದೆ. ಅದೇ ಸುವಾರ್ತೆ. ಅದರ ಬಾಧ್ಯತೆ ಸಭೆಗೆ ಕೊಡಲ್ಪಟ್ಟಿದೆ, ಅಷ್ಟೇ ಅಲ್ಲದೆ ಸಭೆಯು ದೇವರ ನಿತ್ಯ ಸಂಕಲ್ಪವೆಂದು ತಿಳಿಸಲ್ಪಟ್ಟಿದೆ.

“ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭ ಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ, ಅಧಿಕಾರಿಗಳಿಗೂ, ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು ಉದ್ದೇಶಿಸಿದ್ದನು.” (ಎಫೆಸ 3:8–11). ತೀತ 3:1–5;1 ಪೇತ್ರ 1:18–21 ಕೂಡ ಮಾನವನ ವಿಮೋಚನಾರ್ಥವಾದ ದೇವರ ನಿತ್ಯ ಸಂಕಲ್ಪವನ್ನು ಕುರಿತು ತಿಳಿಸಲ್ಪಡುತ್ತಿವೆ. ಅದು ಸಭೆಯು ಸ್ಥಾಪನೆಯಾದ ನಂತರವೇ ಸಂಕ್ಷೀಪ್ತವಾಗಿ ಪ್ರಕಟಿಸಲ್ಪಟ್ಟಿದೆ.

ಸಭೆಯು ದೇವರ ಸಂಕಲ್ಪವೇ ಹೊರತು ಮನುಷ್ಯನ ಸಂಕಲ್ಪವಲ್ಲ. ಈ ಲೋಕ ಮನುಷ್ಯ ಸೃಷ್ಟಿಸಲ್ಪಡುವುದಕ್ಕೆ ಮೊದಲೇ, ದೇವರು ಸಭೆಯನ್ನು ಸ್ಥಾಪಿಸುವೆನೆಂದು ಸಂಕಲ್ಪಿಸಿಕೊಂಡಿದ್ದಾನೆ. ಕ್ರಿಸ್ತನು ಆ ಸಭೆಗೆ ಶಿರಸ್ಸಾಗಿಯೂ, ರಕ್ಷಕನಾಗಿಯೂ ಇರುವನು ಎಂದು ದೇವರು ನಿಶ್ಚಯಿಸಿದನು. (ಎಫೆಸ 5:23). ಪಾಪದಲ್ಲಿ ಬಿದ್ದುಹೋದ ಮನುಷ್ಯನನ್ನು ಸಭೆಯುಮೂಲಕ

ಬಿಡುಗಡೆಗೊಳಿಸಬೇಕೆಂಬುದು ದೇವರ ಒಂದು ಸಂಕಲ್ಪ. ಆದ್ದರಿಂದಲೇ ರಕ್ಷಿಸಲ್ಪಟ್ಟ ಅವರನ್ನು ಕರ್ತನು ತನ್ನ ಸಭೆಗೆ ಸೇರಿಸುವನು. (ಅ.ಕೃ.2:47). ಅದು ಕರ್ತನ ಸಭೆಯು, ರಕ್ಷಿಸಲ್ಪಟ್ಟವರ ಸಮೂಹವು.

**ದೇವರಿಂದ ಸ್ಥಾಪಿಸಲ್ಪಟ್ಟಿತು**

1 ನೀತ್ಯತ್ವದಲ್ಲಿಯೇ ದೇವರು ತನ್ನ ಮನಸ್ಸಿನೊಳಗೆ ಸಭೆಯನ್ನು ಸ್ಥಾಪಿಸುವುದು ಮಾತ್ರವಲ್ಲದೆ, ಅದನ್ನು ಭೂಮಿಯ ಮೇಲೆ ಸ್ಥಾಪಿಸಲು ಆತನು ಸರಿಯಾದ ಸಮಯವನ್ನು ಕೂಡ ಆರಿಸಿಕೊಂಡನು. ದೇವರ ಮನಸ್ಸಿನೊಳಗಿಂದ ಭೂಮಿಯ ಮೇಲೆ ಸಭೆಯು ಸ್ಥಾಪಿಸಲ್ಪಡುವುದನ್ನು ಗಮನಿಸಿದರೆ ಸಭೆಯೂ, ರಾಜ್ಯವೂ ಎನ್ನುವ ಪದಗಳು ಸರಿಸಮಾನವಾದವು. ಮತ್ತು ಆ ಒಂದು ಸಭೆಯನ್ನು ವರ್ಣಿಸಲು ಉಪಯೋಗಿಸಲ್ಪಟ್ಟ ಪದಗಳಾಗಿವೆ.

2. ಆದ್ದರಿಂದ ರಾಜ್ಯವನ್ನು ಕುರಿತ ಪ್ರವಾದನೆಗಳೆಲ್ಲವೂ ಸಭೆಗೆ ವರ್ತಿಸುತ್ತವೆ.

3· ಪ್ರವಾದನೆಗಳಲ್ಲಿರುವ ಸಭೆಯು ಆತ್ಮೀಯವಾದದ್ದು, ಭೌತಿಕವಾದದ್ದು ಅಲ್ಲ ಎಂದು ನಾವು ಗುರುತಿಸಿಕೊಳ್ಳಬಹುದು.

ಸಭೆಯು, ರಾಜ್ಯವೂ ಎಂಬ ಪದಗಳು ಪರ್ಯಾಯ ಪದಗಳು ಎನ್ನುವುದು ಕೆಲವರಿಗೆ ಗ್ರಹಿಕೆಯಾಗುವುದಿಲ್ಲ. ಅವರು ಭಕ್ತಿವಂತರೇ, ಆದರೂ ಗ್ರಹಿಸುವುದಿಲ್ಲ. ಆದರೆ ಇದಕ್ಕೆ ಸಂಬಂಧಿಸಿ ಬೈಬಲ್ ಲೇಖನಗಳನ್ನು ಜಾಗ್ರತೆಯಿಂದ ಓದಿದರೆ ಈ ವಾಸ್ತವವು ವಿವರವಾಗಿ ತಿಳಿಯುತ್ತದೆ. ಕರ್ತನ ಸಂಭಾಷಣೆಯಲ್ಲಿ ಸಭೆಯೂ, ರಾಜ್ಯವೂ ಎಂಬ ಪದಗಳು ಆತನು ಪರ್ಯಾಯ ಪದಗಳನ್ನಾಗಿ ಉಪಯೋಗಿಸಿದನು ಎಂದು ಗಮನಿಸಿ. (ಮತ್ತಾ 16:16–19). ಅಲ್ಲಿ ಯೇಸು ಪರಲೋಕ ರಾಜ್ಯದ ಬೀಗದ ಕೈಗಳನ್ನು ಪೇತ್ರನಿಗೆ ಕೊಡುವೆನೆಂದು ಹೇಳಿದನು. ಆ ಬೀಗದ ಕೈಗಳನ್ನು (ಬಿಡಿಸಲು–ಬಂಧಿಸಲು ಅಧಿಕಾರ), ಪೇತ್ರನು ತಾನು ಮಾಡಿದ ಮೊದಲ ಪ್ರಸಂಗದಲ್ಲಿ ಉಪಯೋಗಿಸಿದನು. (ಮತ್ತಾಯ 16:19, ಅ.ಕೃ.2ನೇ ಅಧ್ಯಾಯ). ಅಪೋಸ್ತಲರ ಕೃತ್ಯಗಳು ಎರಡನೆಯ ಅಧ್ಯಾಯವು ಸಭೆಯ ಆರಂಭವನ್ನು ನಮಗೆ ವರ್ಣಿಸುತ್ತದೆ. ಅಂದಿನಿಂದ ಎಲ್ಲಾ ಲೇಖನಗಳು ಸಭೆಯು ಸ್ಥಾಪಿಸಲ್ಪಡುತ್ತದೆ ಎಂದು ಹೇಳದೆ, ಸ್ಥಾಪಿಸಲ್ಪಟ್ಟಿದೆ ಎಂದು ಹೇಳುತ್ತಿವೆ. ಸಭೆಯ ದ್ವಾರಗಳನ್ನು ತೆರೆಯಲು ಪೇತ್ರನು ರಾಜ್ಯದ ಬೀಗದ



ಕೈಗಳನ್ನು ಉಪಯೋಗಿಸಿದನು, ಆದ್ದರಿಂದ ರಾಜ್ಯವೂ, ಸಭೆಯೂ ಒಂದೇ.

ನಂತರದಲ್ಲಿ ಯಾವ ಅಪೊಸ್ತಲನೂ ಸಭೆಗೂ ರಾಜ್ಯಕ್ಕೂ ಯಾವ ವ್ಯತ್ಯಾಸವನ್ನು ತೋರಿಸಿಲ್ಲ. ದೇವರ ಸಭೆಯಲ್ಲಿ ಇರುವ ಕ್ರೈಸ್ತರನ್ನು (1ಕೊರಿಂಥ 1:2), ಅಪೊಸ್ತಲನಾದ ಪೌಲನು ಪರಿಶುದ್ಧರು ಎಂದು ಕರೆದನು. ಕೊಲೊಸ್ಸೆಯಲ್ಲಿರುವ ಕ್ರೈಸ್ತರನ್ನು ರಾಜ್ಯದಲ್ಲಿ ಸಹೋದರರು ಎಂದು ಆತನು ಹೇಳಿದ್ದಾನೆ. (ಕೊಲೊಸ್ಸೆ 1:1,13). ಅಪೊಸ್ತಲನಾದ ಯೋಹಾನನೂ ಕೂಡ ನಾನು ರಾಜ್ಯದಲ್ಲಿ ಪಾಲುಗಾರನು ಎಂದು ಹೇಳಿದ್ದಾನೆ. (ಪ್ರಕ 1:9). ಇವರೆಲ್ಲರೂ ನಿಸ್ಸಂದೇಹವಾಗಿ ಹೊಸ ಒಡಂಬಡಿಕೆ ಸದಸ್ಯರು, ಆದರೂ ಅವರು ರಾಜ್ಯದಲ್ಲಿ ಸಹೋದರರು ಕೂಡ. ಅವರೆಲ್ಲರೂ ಒಂದೇ ಶರೀರದಲಿನ ಅಂಗಾಂಗಗಳು. (ಎಫೆಸ 4:4). ಅದು ಸಭೆಯು (ಎಫೆಸ 1:22,23) ದೇವರ ಆಲಯ (1ಕೊರಿಂಥ 3:16), ದೇವರ ಮಂದಿರ (1ತಿಮೊಥೆ 3:15) ರಾಜ್ಯವೂ (ಕೊಲೊಸ್ಸೆ 1:13) ಎಂದು ವಿವಿಧವಾಗಿ ಕರೆಯಲ್ಪಟ್ಟಿದೆ. ಪ್ರತಿ ವಿವರಣಾತ್ಮಕವಾದ ಹೆಸರು ಒಂದೇ ದೈವಿಕ ಸಭೆಯನ್ನು ನಮಗೆ ವರ್ಣಿಸುತ್ತವೆ.

ಸಭೆಯು, ರಾಜ್ಯವೂ ಎಂಬ ಪದಗಳು ಬೈಬಲ್ ಪ್ರಕಾರ ಪರ್ಯಾಯ ಪದಗಳು. ಆದ್ದರಿಂದ ರಾಜ್ಯವನ್ನು ಕುರಿತು ಹೇಳಲ್ಪಟ್ಟ ಪ್ರತಿ ಪ್ರವಾದನೆಯೂ ಸಭೆಯನ್ನು ಕುರಿತೇ ಹೇಲಲ್ಪಟ್ಟಿವೆ. ಪ್ರವಾದನೆಗಳ ಸಂಪೂರ್ಣ ನೆರವೇರಿಕೆಯನ್ನು ಹಿಡಿದು ಸಭೆಯು ಅಥವಾ ರಾಜ್ಯವು ಸ್ಥಾಪಿಸಲ್ಪಟ್ಟಿದೆ ಎಂದರೆ, ದೇವರ ಸಂಸ್ಥಾಪನೆಗೆ ಅವು ಎದುರಿಲ್ಲದ ಚಿಹ್ನೆಗಳಾಗಿವೆ. ಅಪೊಸ್ತಲರ ಕೃತ್ಯಗಳು ಎರಡನೇ ಅಧ್ಯಾಯದ ನಂತರದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳು ಮಾನವ ಕಲ್ಪಿತಗಳು. ಅವು ಪ್ರವಾದನೆಯ ಆಧಾರ ವಿಲ್ಲದವುಗಳು.

"ದೇವರ ಮಂದಿರ" (ಯೆಹೋವನ ಮಂದಿರ) ಯರೂಸಲೇಮ್ ಪಟ್ಟಣದಲ್ಲಿ ಸ್ಥಾಪಿಸಲ್ಪಡುತ್ತದೆ ಎಂದು ಯೆಶಾಯ 2:1–5; ಯೋವೇಲ 2:28–32; ಮೀಕ4:1–4 ಹೇಳುತ್ತಿವೆ. ಬಾಬೆಲ್ ಸಾಮ್ರಾಜ್ಯದಿಂದ ಹಿಡಿದು ನಾಲ್ಕನೆಯ ಮಹಾ ಸಾಮ್ರಾಜ್ಯದ ಕಾಲದಲ್ಲಿ ದೇವರು ತನ್ನ ರಾಜ್ಯವನ್ನು ಸ್ಥಾಪಿಸುವನು ಎಂದು ದಾನಿಯೇಲ 2:31–45 ಬೋಧಿಸುತ್ತದೆ. ರೋಮಾ ಸಾಮ್ರಾಜ್ಯವೆ ಆ ನಾಲ್ಕನೆಯ ಮಹಾ ಸಾಮ್ರಾಜ್ಯ ಎಂದು ಚರಿತ್ರೆಕಾರರು ಅಂಗೀಕರಿಸುತ್ತಾರೆ. ಕ್ರಿ.ಶ.33ನೇ ಸಂವತ್ಸರದಲ್ಲಿ ಯರೂಸಲೇಮಿನಲ್ಲಿ ಕ್ರಿಸ್ತನ ಸಭೆಯು

ಸ್ಥಾಪಿಸಲ್ಪಟ್ಟಿರುವುದು ಲೇಖನಗಳಲ್ಲಿ ಹೇಳಲ್ಪಟ್ಟ ಸ್ಥಳಕ್ಕೂ ಸಮಯಕ್ಕೂ ಸರಿಯಾಗಿ ಹೋಲಿಕೆಯಾಗುತ್ತಿದೆ. ತದನಂತರ ಯೇಸು ಕ್ರಿಸ್ತನು ತನ್ನ ಪರಿಚರ್ಯ (ಸುವಾರ್ತೆ ಸೇವೆಯ) ಕಾಲದಲ್ಲಿಯೇ ದೇವರ ರಾಜ್ಯವು ಅವರ ಜೀವಿತ ಕಾಲದಲ್ಲಿಯೇ ಸ್ಥಾಪಿಸಲ್ಪಡುವುದನ್ನು ನೋಡುತ್ತೀರಿ ಎಂದು ಅಲ್ಲಿನ ಪ್ರಜೆಗಳಿಗೆ ಹೇಳಿದನು. (ಮಾರ್ಕ 9:1). ಸಭೆಯನ್ನು ಕುರಿತು ಹೇಳಲ್ಪಟ್ಟ ಪ್ರವಾದನೆಗಳಿಗೆ, ಅದರ ಸ್ಥಾಪನೆಗೆ ಸರಿಸಮಾನವಾಗಿ ಕ್ರಿಸ್ತನು ಈ ಮಾತು ಹೇಳಿದ್ದಾನೆ.

ಮಾನವ ಕಲ್ಪಿತ ಸಭೆಗಳ ಹಾಗೆ ಆಗದೆ ಬೈಬಲ್ ನಲ್ಲಿರುವ ಸಭೆಗೆ ಕ್ರಿಸ್ತನು ಒಬ್ಬನೇ ನಿರ್ಮಾಣ ಕರ್ತನಾಗಿದ್ದಾನೆ. (ಅ.ಕೃ.20:28) ಬೆಟ್ಟದೊಳಗಿಂದ ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟದ್ದು ಕುರಿತ ಪ್ರವಾದನೆಯು ಹೇಳಲ್ಪಟ್ಟಿದೆ. (ದಾನಿಯೇಲ 2:45). ಅದು ಮತ್ತಾಯ 16:18ರಲ್ಲಿ ಯೇಸು ಹೇಳಿದ ಬಂಡೆಯಾಗಿದೆ. ಅದರ ಮೇಲೆ ಯೇಸು ತನ್ನ ಸಭೆಯನ್ನು ಕಟ್ಟುವೆನು ಎಂದು ವಾಗ್ದಾನ ಮಾಡಿದನು. ಯೇಸು ದೇವ ಕುಮಾರನೆಂಬ ಶ್ರೇಷ್ಠ ಸತ್ಯವೇ ಆ ಬಂಡೆಯಾಗಿದೆ. ಆ ಸಭೆಗೆ ಅಸ್ಥಿವಾರವು ಯೇಸುಕ್ರಿಸ್ತನೇ. (1ಕೊರಿಂಥ 3:11). ಜೀವವುಳ್ಳ ಕಲ್ಲಾಗಿರುವ ಯೇಸುಕ್ರಿಸ್ತನನ್ನು ಮನುಷ್ಯರು ನಿರಾಕರಿಸಿದರೂ ದೇವರು ಆತನನ್ನು ಮುಖ್ಯವಾದ ಮೂಲೆಗಲ್ಲನ್ನಾಗಿ ಏರ್ಪಡಿಸಿದನು. (1ಪೇತ್ರ 2:4–8; ಅ.ಕೃ. 4:11). ಆತನನ್ನು ಸಭೆಗೆ ಶಿರಸ್ಸನ್ನಾಗಿಯೂ ತನ್ನ ರಾಜ್ಯಕ್ಕೆ ರಾಜನನ್ನಾಗಿಯೂ ನೇಮಿಸಿದನು. (1ಕೊರಿಂಥ 15:25–28).

ಅಂದು ಯಹೂದ್ಯರು ಇಂದು ಕೆಲವರು ಹೇಳುವ ರೀತಿ ಯೇಸು ಒಂದು ಭೂ ಸಂಬಂಧವಾದ ರಾಜ್ಯವನ್ನು ಕಟ್ಟಲು ಬರಲಿಲ್ಲ. (ಯೋಹಾನ 6:15). ಸೈತಾನನು ಕೂಡ ಆತನಿಗೆ ಪ್ರಪಂಚದ ಎಲ್ಲಾ ರಾಜ್ಯಗಳನ್ನು ಕೊಡುವೆನೆಂದು ಹೇಳಿದನು, ಅದನು ಆತನು ನಿರಾಕರಿಸಿದನು. (ಮತ್ತಾಯ 4:8–10).

ಅಪೊಸ್ತಲರು ಪವಿತ್ರಾತ್ಮ ದೀಕ್ಷಾಸ್ನಾವನ್ನು ಹೊಂದುವವರೆಗೂ ಕೂಡ ಕ್ರಿಸ್ತನು ಸ್ಥಾಪಿಸುವ ರಾಜ್ಯವನ್ನು ಕುರಿತು ಆತನು ಮರಣ ಹೊಂದುವ ಮೊದಲೇ ಅಪಾರ್ಥ ಮಾಡಿಕೊಂಡಿದ್ದರು. (ಮತ್ತಾಯ 20:20–28; ಅ.ಕೃ.1:6–8). ತನ್ನ ರಾಜ್ಯದ ಆತ್ಮೀಯ ತತ್ವವನ್ನು ಕುರಿತು ಆತನು ಬೋಧಿಸಿದ್ದರಿಂದ ಆತನ ಶಿಷ್ಯರಲ್ಲಿ ಕೆಲವರು ಆತನ ಕೂಡ ಸಂಚಾರ ಮಾಡುವುದನ್ನು ಬಿಟ್ಟರು. ಆದರೆ ಅಪೊಸ್ತಲರು ಮಾತ್ರ ಆತನನ್ನು ಬಿಟ್ಟು ಹೋಗದೆ ಆತನ ಬಳಿಯಲ್ಲಿಯೆ ಇದ್ದರು.



ಜೆಕರ್ಯ 6:13ನ್ನು ಇಬ್ರಿಯ 7:14;8:1–4 ರೊಂದಿಗೆ ಹೋಲಿಸಿ ನೋಡಿದರೆ ಯೇಸು ಭೌತಿಕವಾಗಿ ಯೆರೂಸಲೇಮಿನಲ್ಲಿ ಸಿಂಹಾಸನದ ಮೇಲಿದ್ದು ಈಗಲಾದರೂ, ಭವಿಷ್ಯತ್ತಿನಲ್ಲಾದರೂ, ಯಾವಾಗಲೂ ಆಳುವುದಿಲ್ಲ ಎಂದು ಗ್ರಹಿಸಿಕೊಳ್ಳಬಹುದು. ಯೇಸು ಕ್ರಿಸ್ತನು ಸಿಂಹಾಸೀನನಾಗಿ ಯಾಜಕತ್ವ ಮಾಡುವನೆಂದು ಜೆಕರ್ಯ ಪ್ರವಾದಿಸಿದ್ದಾನೆ. ಆದರೆ "ಈತನು ಇನ್ನೂ ಭೂಮಿ ಮೇಲೆ ಇದ್ದದ್ದೇ ಆದರೆ ಯಾಜಕನಾಗಿರುತ್ತಿರಲಿಲ್ಲ" ಎಂದು ಇಬ್ರಿಯ 8:4 ರಲ್ಲಿ ಹೇಳುತ್ತಿದೆ.

## ಮುಕ್ತಾಯ:

ಮಾನುಷ್ಯ ಕಲ್ಪಿತ ಸಭೆಗಳು ಮರಣ ಹೊಂದುವವರಿಂದ ಸ್ಥಾಪಿಸಲ್ಪಟ್ಟಿವೆ. ಪವಿತ್ರಾತ್ಮ ದೇವರು ಅವುಗಳನ್ನು ಸ್ಥಾಪಿಸಲಿಲ್ಲ. ಕ್ರಿಸ್ತನು ಸಭೆಯನ್ನು ಸ್ಥಾಪಿಸಿದ ನಂತರ, ರೋಮಾ ಸಾಮ್ರಾಜ್ಯದ ಅವಧಿಯ ನಂತರ ಪ್ರವಾದಿಸಲ್ಪಡದ ಪಟ್ಟಣಗಳಲ್ಲಿ ಅವು ಸ್ಥಾಪಿಸಲ್ಪಟ್ಟವು. ಕರ್ತನು ಸಭೆಯನ್ನು ಕುರಿತು ಹೇಳಲ್ಪಟ್ಟ ಪ್ರವಾದನೆಗಳಿಗೆ ಭಿನ್ನವಾಗಿ ಮಾನವ ಮತಶಾಖೆಗಳು ಉದ್ಭವಿಸಿದವು. ಕ್ರೈಸ್ತರಿಗೆ, ಕ್ರಿಸ್ತನ ಸಭೆಗಳಿಗೆ ಇರುವ ಬೀಜವು ಹೊಸ ಒಡಂಬಡಿಕೆಯ ದೇವರ ವಾಕ್ಯ (ರೋಮಾ 16:16; ಲೂಕ 8:11). ದೇವರ ವಾಕ್ಯವಲ್ಲದೇ, ಬೇರೊಂದು ಮನುಷ್ಯರ ಹೃದಯಗಳಲ್ಲಿ ಬಿತ್ತಲ್ಪಟ್ಟಾಗ ವಾಕ್ಯದಲ್ಲಿ ಇಲ್ಲದ ಸಂಸ್ಥೆಗಳು ಉದ್ಭವಿಸುತ್ತವೆ. ಮತ್ತು ದೈವವಾಕ್ಯದಲ್ಲಿ ಮಾನವ ಸಿದ್ಧಾಂತಗಳನ್ನು ಬಿತ್ತಿದರೂ ಕೂಡ ಕಲುಷಿತ ಬೆಳೆ ಲಭಿಸಿತ್ತದೆ. ಇಂತಹವುಗಳನ್ನು ಕುರಿತು ಮಾತಾಡುತ್ತಾ "ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವವು" ಎಂದು ಯೇಸು ಹೇಳಿದನು. (ಮತ್ತಾಯ 15:13).

## 3. ಹೊಸ ಒಡಂಬಡಿಕೆ ಸಭೆಯ ನಿರ್ಮಾಣ ಪದ್ಧತಿ ದೈವಿಕವಾದದ್ದು
## (The New Testament Church is Divine in Organisation)

ಆಧುನಿಕ ಮಾನವ ಕಲ್ಪಿತ ಸಭೆಗಳ ಹಾಗೆ, ಹೊಸ ಒಡಂಬಡಿಕೆ ಸಭೆಗೆ ಅದರ ಸಿದ್ಧಾಂತವನ್ನು ಸರಬರಾಜು ಮಾಡುವ ಹೈಕಮಾಂಡ್ ಭೂಮಿಯ ಮೇಲೆ ಇಲ್ಲ. ಮಾನವ ಕಲ್ಪಿತ ಸಭೆಗಳಿಗಾದರೆ, ಈ ಹೈಕಮಾಂಡ್ ಸಿದ್ಧಾಂತ ವನ್ನು ತಯಾರಿಸಿ ಜನರಿಗೆ ತಿಳಿಸುತ್ತಾರೆ. ಕ್ರಿಸ್ತನ ಸಭೆಗೆ ಭೂಮಿಯ ಮೇಲೆ ಯಾವುದೇ ಕೇಂದ್ರಸ್ಥಾನವು ಇಲ್ಲ. ಅದರಲ್ಲಿ ಪೂಜಾರಿಗಳು, ಸಾಮಾನ್ಯರು ಎಂದು ವ್ಯತ್ಯಾಸವಿಲ್ಲ. ಪ್ರತಿ ಸ್ಥಾನಿಕ ಸಭೆಯು ಕ್ರಿಸ್ತನಲ್ಲಿ ಸ್ವತಂತ್ರತೆ ಪಡೆದು, ಸ್ವಯಂ ಪರಿಪಾಲನೆ ಪಡೆದುಕೊಂಡಿದೆ. ಸಿದ್ಧಾಂತ ಪರವಾಗಿ ಹೊಸ ಒಡಂಬಡಿಕೆ ಸಭೆಯು ಕೇವಲ ದೇವರ ವಾಕ್ಯದ ಪ್ರಕಾರವೇ ನಡೆದುಕೊಳ್ಳುತ್ತದೆ. ಅದನ್ನು ಸಭೆ ಹಿರಿಯರು, ಸಭಾ ಸೇವಕರು ಪರಿವೀಕ್ಷಣೆ ಮಾಡುತ್ತಾರೆ. ಬೋಧಕರು, ಉಪದೇಶಕರು ಅದರಲ್ಲಿ ಬೋಧಿಸುತ್ತಾರೆ. ಅದರ ಸದಸ್ಯರು ಅದಕ್ಕೆ ಕೈ ಜೋಡಿಸುತ್ತಾರೆ.

### ಪರಸಂಬಂಧವಾದ ಮುಖ್ಯ ಕೇಂದ್ರ

ಕ್ರಿಸ್ತನ ಸಭೆಗೆ ಶಿರಸ್ಸಾಗಿ ಯಾವ ಮನುಷ್ಯನಾಗಲಿ, ಮನುಷ್ಯರ ಗುಂಪಾಗಲಿ ಇಲ್ಲ. ಕರ್ತನ ಸಭೆಗೆ ಯೇಸುಕ್ರಿಸ್ತನೇ ಏಕೈಕ ಶಿರಸ್ಸು. ಯೇಸುಕ್ರಿಸ್ತನು ಇಹ ಪರ ಲೋಕಗಳಲ್ಲಿ ಸರ್ವಾಧಿಕಾರವನ್ನು ಹೊಂದಿದ್ದಾನೆ. (ಮತ್ತಾಯ 28:18). ಮತ್ತು ಶರೀರವೆಂಬ ಆತನ ಸಭೆಗೆ ಕ್ರಿಸ್ತನೇ ಶಿರಸ್ಸು (ಎಫೆಸ 1:22–23). ಯೇಸುಕ್ರಿಸ್ತನು ತನ್ನ ಸಿಂಹಾಸನವನ್ನು ಯಾರಿಗೂ ಒಪ್ಪಿಸಿಕೊಟ್ಟಿಲ್ಲ. ಆದರೆ ಚಕ್ರವರ್ತಿಯಾಗಿ ಅದನ್ನು ಪರಿಪಾಲಿಸುತ್ತಿದ್ದಾನೆ. (1ಕೊರಿಂಥ 15:24–28). ಭೂಮಿಯ ಮೇಲಿದ್ದುಕೊಂಡು ಅಲ್ಲ, ಪರಲೋಕದಲ್ಲಿದ್ದುಕೊಂಡೆ ಆತನು ಪರಿಪಾಲಿ ಸುತ್ತಿದ್ದಾನೆ. ಕರ್ತನು ತನ್ನ ಸಭೆಯ ಮೇಲೆ ಸರ್ವಾಧಿಕಾರವನ್ನು ಹೊಂದಿದ್ದಾನೆ. (ಎಫೆಸ 1:3; ಫಿಲಿಪ್ಪಿ 2:9–11;20–23; ಇಬ್ರಿಯ 8:1; ಅ.ಕೃ.7:55).

ಯೇಸುಕ್ರಿಸ್ತನ ಅಧಿಕಾರದ ವಿಸ್ತೀರ್ಣತೆ ಕೆಳಗಿನ ಲೇಖನಗಳಲ್ಲಿ ವಿವರಿಸಲ್ಪಟ್ಟಿದೆ. "ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬುದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗೆಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ



ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೇ ಬರುವ ಲೋಕದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು. ಆತನು ಸಮಸ್ತವನ್ನು ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ. ಎಲ್ಲವನ್ನೂ, ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:20–23)

### ಹೆಚ್ಚು ಜನ ಸಭೆ ಹಿರಿಯರು

ಹೊಸ ಒಡಂಬಡಿಕೆ ಕಾಲದಲ್ಲಿ ಪೂರ್ತಿಯಾಗಿ ನಿರ್ಮಾಣವಾದ ಪ್ರತಿ ಸ್ಥಾನಿಕ ಸಭೆಯಲ್ಲಿ ಇಬ್ಬರು ಇಲ್ಲವೇ ಅದಕ್ಕಿಂತ ಹೆಚ್ಚುಮಂದಿ ಸಭೆ ಹಿರಿಯರು ನೇಮಿಸಲ್ಪಡುತ್ತಿದ್ದರು (ಅ.ಕೃ.14:23; ತೀತ 1:5). ಒಂದೇ ಸಭೆಯಲ್ಲಿ ಹೆಚ್ಚುಮಂದಿ ಸಭೆಹಿರಿಯರು ಇರುವ ಹಾಗೆ ಲೇಖನಗಳು ಹೇಳುತ್ತಿವೆ. ಅವರು ನೇಮಿಸಲ್ಪಟ್ಟ ಸ್ಥಾನಿಕ ಸಭೆಗೆ ಸಭೆ ಹಿರಿಯರೇ ಹೊರತು ಬೇರೊಂದು ಸಭೆಗೆ ಅಲ್ಲ. ಸಭೆ ಹಿರಿಯರನ್ನಾಗಿ ನೇಮಿಸಲ್ಪಡುವುದು ಸುಲಭದ ಕೆಲಸವಲ್ಲ. ಹಿರಿಯರಾಗಿ ನೇಮಿಸಲ್ಪಡುವವರು ದೈವಿಕ ಅರ್ಹತೆಗಳನ್ನು ಹೊಂದಿರಬೇಕು. ಹಾಗಾದರೆ ಮಾತ್ರ ನೇಮಿಸಲ್ಪಡುತ್ತಿದ್ದರು (1ತಿಮೊಥೆ 3:1–7; ತೀತ 1:5–11). ಕ್ರಿಸ್ತನು ಯಾವ ಸಭೆಗೆ ಶಿರಸ್ಸೆಂದು ಗಮನಿಸಿ, ಸಭೆ ಹಿರಿಯರಿಗೆ ಇರಬೇಕಾದ ಅರ್ಹತೆಗಳು ಪರಿಶುದ್ಧ ಲೇಖನಗಳಲ್ಲಿವೆಯೆಂದು ಅವರು ತಿಳಿದು, ಅವರು ಹೊಸ ಬೋಧನೆಯನ್ನು, ಸಿದ್ಧಾಂತಗಳನ್ನು ಪ್ರವೇಶಪಡಿಸದೇ, ಅವರ ಸ್ಥಾನಿಕ ಸಭೆಗಳಲ್ಲಿ ಹೊಸ ಒಡಂಬಡಿಕೆ ಸಂಪೂರ್ಣವಾಗಿ ಪಾಲಿಸುವುದು, ಮೇಲ್ವಿ ಚಾರಣೆ ಮಾಡುವುದೇ ಅವರ ವಿಧಿ (ಕರ್ತವ್ಯ) ಯಾಗಿದೆ. ಹಿರಿಯರನ್ನೇ ಲೇಖನಗಳು ಅಧ್ಯಕ್ಷರೆಂದು (1ತಿಮೊಥೆ 3:1), ಕಾಯುವವನು (1ಪೇತ್ರ 5:1–4) ಎಂದು ಕರೆಯುತ್ತಿವೆ.

### ಸಭಾ ಸೇವಕರು, ಪ್ರತ್ಯೇಕ ಸೇವೆಗಳು

ಸ್ಥಾನಿಕ ಸಭೆಯಲ್ಲಿರುವ ಪ್ರತಿಯೊಬ್ಬ ಸದಸ್ಯನು ಆ ಸಭೆಯ ಅವಸರತೆಯ ನಿಮಿತ್ತ ಸೇವೆಯನ್ನು ಮಾಡಬೇಕಾದವನೆ ಆದರೂ ಸಭಾಸೇವಕರು ಪ್ರತ್ಯೇಕ ಸೇವೆಯ ನಿಮಿತ್ತವಾಗಿ ಏರ್ಪಡಿಸಲ್ಪಟ್ಟವರು. ಹಿರಿಯರ ಹಾಗೆ ಮೇಲ್ವಚಾರಣೆ ಮಾತ್ರವಲ್ಲದೇ ಸಭೆಯ ಸೇವೆಯಲ್ಲಿಯೂ ಅವರು ಮಗ್ನರಾಗಿರುವರು.

**ಉದಾಹರಣೆಗೆ,** ಸಭಾಸೇವಕರು ಧರ್ಮಕಾರ್ಯಗಳನ್ನು, ಆರ್ಥಿಕ ಸಹಾಯವನ್ನು, ಸಭೆಯ ಅವಶ್ಯಕತೆಗಳನ್ನು, ವಿಶೇಷ ಕಾರ್ಯಕ್ರಮಗಳ ಏರ್ಪಾಟಿನ ವಿಷಯದಲ್ಲಿಯೂ ಸಹಕರಿಸುವರು. ಲೇಖನಗಳಲ್ಲಿ ತಿಳಿಸಲ್ಪಟ್ಟ ಅರ್ಹತೆಗಳನ್ನು ಹೊಂದಿದವರೆ ಸ್ಥಾನಿಕ ಸಭೆಯಲ್ಲಿ ಸಭಾ ಸೇವಕರಾಗಿ ನೇಮಿಸಲ್ಪಡುತ್ತಾರೆ (ಅ.ಕೃ. 6:1–6; 1ತಿಮೊಥೆ 3:8–13).

**ಬೋಧಕರು, ಉಪದೇಶಕರು**

ಸುವಾರ್ತೆ ಬೋಧಕರು (ರೋಮಾ 10:14–15) ಸುವಾರ್ತಿಕರು ಎಂದು ಕೂಡ ಕರೆಯಲ್ಪಟ್ಟಿದ್ದಾರೆ (ಎಫೆಸ 4:11; 2ತಿಮೊಥೆ 4:5). ಅವರು ಸುವಾರ್ತಿಕರು ಇಲ್ಲವೆ ಸೇವಕರು (1ಕೊರಿಂಥ 3:5)

"ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ, ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ಧೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು" ಎಂದು ಅವರಿಗೆ ಎಚ್ಚರಿಸಲ್ಪಟ್ಟಿದೆ (2ತಿಮೊಥೆ 4:2). ಸುವಾರ್ತೆ ಪ್ರಕಟಣೆ ಒಂದು ಹೆಚ್ಚು ಬಾಧ್ಯತೆಯುಳ್ಳ ಕೆಲಸ, ಹೇಗೆಂದರೆ ಅದರಿಂದ ಪ್ರಕಟಿಸುವವನ ಮತ್ತು ಕೇಳುವವರ ಆತ್ಮಗಳ ಗುರಿಯು ಆಧಾರಪಟ್ಟಿದೆ. ಆದುದರಿಂದ ಪ್ರಕಟಿಸುವವರು ಬಹು ಜಾಗ್ರತೆಯುಳ್ಳವರಾಗಿರಬೇಕೆಂದು ಬೈಬಲ್ ಹೇಳುತ್ತಿದೆ (ಯಾಕೋಬ 3:1). ಹಾಗೆಯೇ, ಮಾನಸಾಂತರ ಹೊಂದದ ಸುಳ್ಳುಬೋಧಕರ ವಿಷಯವಾದ ಬಲಹೀನತೆಯನ್ನು ಕೂಡ ಅದು ಸೂಚಿಸುತ್ತದೆ. ಆರಂಭದ ಕ್ರೈಸ್ತನ ಸಭೆಯು ಬಾಲ್ಯದಶೆಯಲ್ಲಿರುವಾಗ ಅದ್ಭುತವರಗಳುಳ್ಳ ಆತ್ಮಾವೇಶಹೊಂದಿದ ಬೋಧಕರು ಅವರ ಮಧ್ಯೆ ಇದ್ದರು.

"ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸೌವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ, ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು



ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹ ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು" (ಎಫೆಸ 4:11–13).

ಈಗ ಅಪೊಸ್ತಲರಲ್ಲಿ ಯಾರೂ ಭೂಮಿ ಮೇಲೆ ಇಲ್ಲ. ಆ ದಿನಗಳಲ್ಲಿ ಇದ್ದ ಪ್ರವಾದನೆಗಳು, ಅದ್ಭುತವರಗಳು ನಿಂತು ಹೋದವು. ಲಿಖಿತಪೂರ್ವಕವಾಗಿ ಸಂಪೂರ್ಣವಾಗಿ ಬರೆಯಲ್ಪಟ್ಟು ಕೊಡಲ್ಪಟ್ಟಿತು (1ಕೊರಿಂಥ 13:8–13; ಯಾಕೋಬ 1:25). ಅದೇ ರೀತಿಯಾಗಿ ಆತ್ಮ ಪ್ರೇರಣೆ ಹೊಂದಿದ ಪ್ರವಾದಿಗಳು ಕೂಡ ಈಗ ಇಲ್ಲವಾದರೂ ಸಭಾ ಪಾಲಕರು, ಬೋಧಕರು, ಸುವಾರ್ತಿಕರು, ಸಭಾ ಸೇವಕರು ನಮ್ಮ ಮದ್ಯದಲ್ಲಿ ಇದ್ದಾರೆ. ಅವರ ಕೈಯಲ್ಲಿ ಬೈಬಲ್ ಕೊಡಲ್ಪಟ್ಟಿದೆ. ಕ್ರಿಸ್ತನ ದೇಹ ಕ್ಷೇಮಾಭಿವೃದ್ಧಿ ಹೊಂದುವುದಕ್ಕಾಗಿ ಅವರು ಇಂದಿಗೂ ಕೆಲಸ ಮಾಡಬೇಕಾಗಿದೆ.

**ಮುಕ್ತಾಯ:–**

ಬೈಬಲ್‌ನಲ್ಲಿ ನಮಗೆ ಕಾಣಿಸುವ ಕ್ರಿಸ್ತನ ಸಭೆಗೂ, ಆಧುನಿಕ ಮತಶಾಖೆಗಳ ಸಭೆಗಳಿಗೂ, ಇರುವ ವ್ಯತ್ಯಾಸವು ಕಣ್ಣಿಗೆ ಕಟ್ಟಿ ದಹಾಗೆ ಕಾಣಿಸುತ್ತದೆ. ಆದರೂ ಬಹಳ ಕಡಿಮೆ ಮಂದಿ ಈ ವ್ಯತ್ಯಾಸವನ್ನು ಗಮನಿಸುತ್ತಿದ್ದಾರೆ. ಕ್ರಿಸ್ತನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ಸಭೆಯನ್ನು ಗುರುತಿಸಬೇಕೆಂದರೆ ಅದಕ್ಕೆ ದೈವಿಕ ನಿರ್ಮಾಣ ಪದ್ಧತಿ, ದೈವಿಕ ಬೋಧನೆ, ದೈವಿಕ ಆರಾಧನೆ, ಅಗತ್ಯವಾಗಿದೆ. ಇಂದಿನ ಕ್ರೈಸ್ತ ಸಭೆಗಳು ಅಂದಿನ ಮೊದಲನೇ ಶತಮಾನದ ಕ್ರಿಸ್ತನ ಸಭೆಯ ಮಾದರಿಯನ್ನು ಅನುಕರಿಸುತ್ತಾ ಅವರಂತೆಯೇ ದೇವರ ವಾಕ್ಯವನ್ನು ಅನುಸರಿಸುತ್ತಿವೆ.

# 4. ಹೊಸ ಒಡಂಬಡಿಕೆ ಸಭೆಯ ಆರಾಧನೆ ದೈವಿಕವಾದದ್ದು
## (The New Testament church is Divine in Worship)

ದೇವರನ್ನು ಆರಾಧಿಸುವ ದೈವಿಕ ವಿಧಾನ ಹೊಸ ಒಡಂಬಡಿಕೆಯಲ್ಲಿದೆ. ಯಹೂದ್ಯ ಮತಾರಂಭದಲ್ಲಿ ದೇವರು ದೇವದರ್ಶನ ಗುಡಾರವನ್ನು ಅದರಲ್ಲಿರುವ ಉಪಕರಣಗಳನ್ನು, ಆರಾಧನೆ ಮುಂತಾದವುಗಳನ್ನು ಕುರಿತು ವಿಧಾನವನ್ನು ಅನುಗ್ರಹಿಸಿದ್ದನು (ವಿಮೋ 25:9; ಯೆಹೆಜ್ಕೆಲ 43:10; ಇಬ್ರಿಯ 8:9,9: 23). ಹಳೆಯ ಒಡಂಬಡಿಕೆಯಲ್ಲಿದ್ದ ಹಾಗೆಯೇ, ಹೊಸ ಒಡಂಬಡಿಕೆ ಯಲ್ಲಿಯೂ ಕೂಡ ದೈವಾರಾಧನ್ನು ಆತನು ಅನುಗ್ರಹಿಸಿದ ಮಾದರಿಯಲ್ಲೇ ಇರಬೇಕು. "ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೋಹಾನ 4:24). ಆತ್ಮದಿಂದ ಆರಾಧಿಸುವುದು ಅಂದರೆ ಸರಿಯಾದ ಮನಸತ್ವವನ್ನು ಹೊಂದಿ ಆರಾಧಿಸುವುದಾಗುತ್ತದೆ. ಆದರೆ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುವುದು ಎಂದರೆ ಪ್ರಸ್ತುತ ಅಸ್ತಿತ್ವದಲ್ಲಿರುವ ದೈವಿಕ ಕಾನೂನು ಪ್ರಕಾರ ಆರಾಧಿಸುವುದು ಎಂದಾಗುತ್ತದೆ. ಹಳೆಯ ಒಡಂಬಡಿಕೆ ಗತಿಸಿ ಹೋಯಿತು. ಈಗ ಹೊಸ ಒಡಂಬಡಿಕೆ ಅಸ್ತಿತ್ವದಲ್ಲಿದೆ. ಇಂದಿನ ಕ್ರೈಸ್ತರೆಲ್ಲರೂ ಹೊಸ ಒಡಂಬಡಿಕೆಗೆ ಒಳಪಟ್ಟಿದ್ದಾರೆ (ಇಬ್ರಿಯ 8:6–13; ಎಫೆಸ 2:15).

ಹಳೆಯ, ಹೊಸ ಒಡಂಬಡಿಕೆ ಪ್ರಕಾರವಾದ ಆರಾಧನೆಯಲ್ಲಿ ಕೆಲವು ಒಂದೇ ರೀತಿಯಾಗಿಯೂ, ಇನ್ನೂ ಕೆಲವು ಬೇರೆ ರೀತಿಯಾಗಿಯೂ ಇವೆ. ಉದಾಹರಣೆಗೆ, ಆರಾಧನೆಯಲ್ಲಿ ಪ್ರಾಣಿ ಬಲಿ, ಧೂಪನೈವೇದ್ಯಗಳು, ಮೊಂಬತ್ತಿ ಮೊದಲಾದವುಗಳನ್ನು ಹೊಸ ಒಡಂಬಡಿಕೆ ಅನುಮತಿಸಿಲ್ಲ. ಸುವಾರ್ತೆಯುಗದಲ್ಲಿ ಇರುವ ನಾವು ದೇವರನ್ನು ಹೇಗೆ ಆರಾಧಿಸಬೇಕೋ, ತಿಳಿದುಕೊಳ್ಳಲು ಹೊಸ ಒಡಂಬಡಿಕೆಯನ್ನೇ ನಾವು ಅನುಸರಿಸಬೇಕು. ಆರಾಧನೆಯಲ್ಲಿ ಹೊಸ ಒಡಂಬಡಿಕೆ 5 ಕ್ರಿಯೆಗಳನ್ನು ನಡೆಸಬೋಕೆಂದು ಹೇಳುತ್ತಿದೆ. ಪ್ರತಿ ಭಾನುವಾರ ಆರಾಧನೆಯಲ್ಲಿ ಇವುಗಳು ನಡೆಯಬೇಕು (1ಕೊರಿಂಥ 16:1–2; ಅ.ಕೃ.2:7.).

### ಸಂಗೀತ (ಹಾಡುಗಳು)

ಹೊಸ ಒಡಂಬಡಿಕೆ ಸಭೆಗೂ, ಮತಶಾಖೆಗಳ ಸಭೆಗಳಿಗೂ ಮದ್ಯೆ ಇರುವ



ದೊಡ್ಡ ವ್ಯತ್ಯಾಸ ವಾದ್ಯಗಳನ್ನು ಉಪಯೋಗಿಸುವುದರಲ್ಲಿ ಕಾಣಿಸುತ್ತದೆ. ಕ್ರಿಸ್ತನ ಸಭೆ ಆರಾಧನೆಯಲ್ಲಿ ವಾದ್ಯಗಳು ಕಾಣಿಸುವುದಿಲ್ಲ. ಹೊಸ ಒಡಂಬಡಿಕೆ ಬೋಧಿಸುವ ಸಂಗೀತವನ್ನೇ ಉಪಯೋಗಿಸಲು ಕ್ರಿಸ್ತನ ಸಭೆಗಳು ಕಂಕಣ ಕಟ್ಟಿಕೊಂಡಿವೆ. ವಾದ್ಯಸಂಗೀತ ಮತ್ತು ಗಾತ್ರಸಂಗೀತಗಳಲ್ಲಿ ಹೊಸ ಒಡಂಬಡಿಕೆ ಗಾತ್ರಸಂಗೀತವನ್ನೇ ಒಪ್ಪಿಕೊಳ್ಳುತ್ತಿದೆ (ಎಫೆಸ 5:19; ಕೊಲೊಸ್ಸಿ 3:16). ಹೊಸ ಒಡಂಬಡಿಕೆಯಲ್ಲಿ ಬಳಸಿದ ಪ್ರತಿ ಸಂದರ್ಭದಲ್ಲಿ ಗಾನಸಂಗೀತವೇ ಹೊರತು ವಾದ್ಯಸಂಗೀತ ಕಾಣಿಸುವುದಿಲ್ಲ (ಮತ್ತಾಯ 26:30; ಅ.ಕೃ. 16:25; ರೋಮಾ 15:9; 1ಕೊರಿಂಥೆ 14:15; ಇಬ್ರಿಯ 2:12; ಯಾಕೋಬ 5:13). ಬಹು ಮುಖ್ಯವಾಗಿ ಹಾಡುಗಳನ್ನು ಹಾಡುವುದರ ಮೂಲಕವೇ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳುವರು, ಬುದ್ಧಿ ಹೇಳಿ ಕೊಳ್ಳುವರು, ವಾದ್ಯಗಳ ಮೂಲಕ ಅದು ಸಾದ್ಯವಿಲ್ಲ (ಕೊಲೆಸ್ಸೆ 3:16). ಇವು ಲೇಖನಗಳಿಗೆ ವಿರುದ್ಧವಾದವುಗಳು ಆಗಿರುವುದರಿಂದ ಆರಾಧನೆಯಲ್ಲಿ ಅವುಗಳನ್ನು ಬಳಸುವುದು ಪಾಪವೇ.

ಹಳೆಯ ಒಡಂಬಡಿಕೆಯಲ್ಲಿ ದೇವರು ಅನುಮತಿ ಕೊಟ್ಟಿರುವುದಾಗಲಿ, ಪರಲೋಕದಲ್ಲಿ ಆತನು ಅನುಮತಿಸುವುದಾಗಲಿ ಹೊಸ ಒಡಂಬಡಿಕೆ ಆರಾಧಕನಿಗೆ ಅನ್ವಯಿಸುವುದಿಲ್ಲ. ಪ್ರಸ್ತುತ ಅಸ್ತಿತ್ವದಲ್ಲಿರುವ ದೇವರ ಕಾನೂನು ಹೊಸ ಒಡಂಬಡಿಕೆಯೇ. ಹಳೆಯ ಒಡಂಬಡಿಕೆಯಿಂದ ಮನುಷ್ಯನು ವಿಮುಕ್ತಿ ಹೊಂದಿದ್ದಾನೆ. (ರೋಮ7:6–7; ಕೊಲೆಸ್ಸೆ 2:14)

ಆರಾಧನೆಯಲ್ಲಿ ಹಾಡುಗಳು ನಾಡಬೇಕೆಂಬ ಎಂಬ ಆಜ್ಞೆ ಉಳಿದ ವಿಷಯಗಳನ್ನೆಲ್ಲ ಬಹಿಷ್ಕರಿಸುತ್ತಿದೆ (ಕೊಲೊಸ್ಸೆ 3:16;ಎಫೆಸ 5:19). ಆತನು ಬಯಸುವ ಸಂಗೀತವು ಯಾವುದೆಂದು ದೇವರು ಹೇಳದೇ ಹೋಗಿದ್ದರೆ, ಮನುಷ್ಯನು ತನ್ನ ಇಷ್ಟಾನುಸಾರವಾದದ್ದನ್ನು ಬಳಸಬಹುದು. ಆದರೆ ದೇವರೇ ತನಗೆ ಯಾವುದು ಇಷ್ಟವೋ ತಿಳಿಯಪಡಿಸಿದ್ದಾನೆ. ಅದೇ ರೀತಿಯಾಗಿ ಕರ್ತನ ಭೋಜನದಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು, ದ್ರಾಕ್ಷಾರಸವನ್ನು ಆತನು ಬಯಸಿದ್ದಾನೆ. ಆದ್ದರಿಂದ ಉಳಿದ ಸಂಗತಿಗಳೆಲ್ಲವೂ ಕರ್ತನ ಭೋಜನದಲ್ಲಿ ಬಹಿಷ್ಕರಿಸಲ್ಪಟ್ಟವು.

ಗಾನಸಂಗೀತಕ್ಕಿಂತ, ವಾದ್ಯಸಂಗೀತ ಉಲ್ಲಾಸಕರವಾಗಿರುತ್ತದೆ ಎಂದು ಕೆಲವರುಂದುಕೊಳ್ಳುತ್ತಾರೆ. ಸಮಯ ಸಿಕ್ಕರೆ ಮನುಷ್ಯರು ಕ್ರೈಸ್ತವ ಆರಾಧನೆಯನ್ನು ದೊಡ್ಡದಾಗಿ ಬದಲಾಯಿಸಿಬಿಡುತ್ತಾರೆ. ನಿಜವಾಗಿ

ಮತಶಾಖೆಗಳು ಇದೇ ಕೆಲಸವನ್ನು ಮಾಡುತ್ತಿವೆ. ಆದರೆ ನಮ್ಮ ಆರಾಧನಾ ಮೂರ್ತಿಯಾದ ದೇವರಿಗೆ ಯಾವುದು ಪ್ರೀತಿಕರವೋ, ಅದನ್ನೇ ಮಾಡುವುದು ಒಳ್ಳೆಯದು. ಆರಾಧನೆ ಯಾವಾಗಲೂ, ಮನುಷ್ಯನ ವಿನೋದಕ್ಕಾಗಿ ಉದ್ದೇಶಿಸಲ್ಪಟ್ಟಿಲ್ಲ. ಬೈಬಲ್ ಸಂಬಂಧವಾದ ಆರಾಧನೆ ಎಲ್ಲಾ ಸಮಯದಲ್ಲಿ ದೇವರಿಗೇ ಸೇರುತ್ತದೆ. ಅದಕ್ಕಾಗಿ ನಮ್ಮ ವ್ಯಕ್ತಿಗತ ಇಷ್ಟಗಳನ್ನು ಅದರಲ್ಲಿ ನಡೆಯವುದಿಲ್ಲ

## ಕರ್ತನ ಭೋಜನ

ಯೇಸುಕ್ರಿಸ್ತನು ಪಸ್ಕವನ್ನು ಆಚರಿಸಿದ ನಂತರ ಕರ್ತನ ಭೋಜನವನ್ನು ಪ್ರತಿಷ್ಠಿಸಿದನು (ಮತ್ತಾಯ 26:17–30) "ನನ್ನನ್ನು ನೆನೆಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ" ಎಂದು ಹೇಳಿ ರೊಟ್ಟಿಯನ್ನು ಆತನ ದೇಹಕ್ಕೆ ಗುರುತಾಗಿಯೂ, ದ್ರಾಕ್ಷಾರಸವನ್ನು ಆತನ ರಕ್ತಕ್ಕೆ ಗುರುತಾಗಿಯೂ ಆತನು ಪ್ರತಿಷ್ಠಿಸಿದನು (ಲೂಕ 22:19).

ಕರ್ತನ ಭೋಜನವು "ಪಾಲು ತೆಗೆದುಕೊಳ್ಳುವುದು" (1ಕೊರಿಂಥ 10:16–17). ಇದನ್ನು ತಾತ್ಸರ ಮಾಡಬಾರದು. ಮತ್ತು ಅದರಲ್ಲಿ ಪಾಲು ತೆಗೆದು ಕೊಳ್ಳುವಾಗೆಲ್ಲಾ ಆತನ ಮರಣವನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕು. ಆದಿಸಭೆಯು ಅದನ್ನು ಎಷ್ಟು ಕಾಲಾವಧಿಯಲ್ಲಿ ಆಚರಿಸಿದರೋ, ಅ.ಕೃ.20:7ರಲ್ಲಿ ನಮಗೆ ಹೇಳಲ್ಪಟ್ಟಿದೆ. ಆದಿ ಸಭೆಯು ಕರ್ತನ ಭೋಜನದಲ್ಲಿ ವಾರದಲ್ಲಿ ಒಂದು ಬಾರಿ ಅಂದರೆ ಪ್ರತಿ ಭಾನುವಾರದಂದು ಪಾಲ್ಗೊಳ್ಳುತ್ತಿದ್ದರು ಎಂಬುದರಲ್ಲಿ ಸಂದೇಹವೇನೂ ಇಲ್ಲ. ಯೆಹೂದ್ಯರು ಸಬ್ಬತ್ ದಿನವನ್ನು ವಾರದಲ್ಲಿ ಒಂದು ಸಾರಿ ಹೇಗೆ ಆಚರಿಸಿದರೋ, ಮೊದಲನೆಯ ಶತಮಾನದ ಕ್ರೈಸ್ತರು ಹಾಗೆಯೇ ವಾರದಲ್ಲಿ ಒಂದುಬಾರಿ ಕರ್ತನ ಭೋಜನವನ್ನು ಆಚರಿಸಿದರು (ವಿಮೋ 20:8–11). ಆದಿ ಸಭೆಯು ಪ್ರತಿ ಭಾನುವಾರದಂದು ಕಾಣಿಕೆಯನ್ನು ಹೇಗೆ ಕೊಡುತ್ತಿದ್ದರೊ ಅದೇ ರೀತಿಯಾಗಿ ಕರ್ತನ ಭೋಜನವನ್ನು ಕೂಡ ಆಚರಿಸುತ್ತಿದ್ದರು (1ಕೊರಿಂಥ 16:1–2).

## ಕಾಣಿಕೆಗಳು

ಹಳೆಯ ಒಡಂಬಡಿಕೆ ಕಾಲದಲ್ಲಿ ಯಹೂದ್ಯರು ದೇವರಿಗೆ ಕಾಣಿಕೆ



ಕೊಡಬೇಕೆಂದು ಆತನು ಕೋರಿ ಕೊಂಡನು. ಅಂದಿಗೂ, ಇಂದಿನ ಕ್ರೈಸ್ತತ್ವಕ್ಕೂ ಕೊಡುವುದರಲ್ಲಿ ಪ್ರಾಥಮಿಕ ವ್ಯತ್ಯಾಸವಿದೆ. ಮನಃಪೂರ್ವಕ ವಾದ ಅರ್ಪಣೆಗಳು ಯಹೂದ್ಯ ಮತದಲ್ಲಿ ಸ್ವಾಗತಿಸಲ್ಪಟ್ಟವು (ಧರ್ಮೋ 12:6; ವಿಮೋ 25:2,35:29). ಆದರೆ ಅವರು ತಮ್ಮ ಆದಾಯದಲ್ಲಿ ಹತ್ತರಲ್ಲಿ ಒಂದು ಪಾಲು ದೇವರಿಗೆ ಅರ್ಪಿಸಬೇಕೆಂದು ದೇವರು ಅವರಿಗೆ ಆಜ್ಞಾಪಿಸಿದನು (ಯಾಜಕ 27:30–34). ಆದರೆ ದೇವರು ಹೊಸ ಒಡಂಬಡಿಕೆಯಲ್ಲಿ ಈ ಹತ್ತರಲ್ಲಿ ಒಂದು ಪಾಲನ್ನು ಪುನಃ ಪ್ರತಿಷ್ಠಿಸಲಿಲ್ಲ. ಆದರೂ ಹೊಸ ಒಡಂಬಡಿಕೆಯಲ್ಲಿ ಕಾಣಿಕೆಗಳು,

1. ಎಲ್ಲಾ ಸಮಯದಲ್ಲಿಯೂ ಮನಃಪೂರ್ವಕವಾದ ಅರ್ಪಣೆಗಳೆ (2ಕೊರಿಂಥ 8:12).

2. ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ (2ಕೊರಿಂಥ 9:7).

3. ಅದನ್ನು ತನ್ನ ಸಂಪಾದನೆಯ ಮೇರೆಗೆ ಕೊಡಬೇಕು (1ಕೊರಿಂಥ 16:1–2) ಅದನ್ನು ಭಾನುವಾರದಂದು ಕೊಡಬೇಕು. ಉಳಿದ ದಿನಗಳಲ್ಲಿ ಹಾಡುಗ ಳನ್ನು ಹಾಡುವುದು, ಪ್ರಾರ್ಥನೆ ಮಾಡುವುದು, ಪ್ರತ್ಯೇಕ ಕಾಣಿಕೆ ಕೊಡು ವುದು ಮುಂತಾದವುಗಳನ್ನು ನಡೆಸಬೇಕು. ಭಾನುವಾರದಂದು ಕಾಣಿಕೆ ಕೊಡುವುದು ಆರಾಧನೆಯಲ್ಲಿ ಒಂದು ಭಾಗವಾಗಿದೆ (ಅ.ಕೃ.2:44–46; 5:1–10).

## ಪ್ರಾರ್ಥನೆ

ದೇವರಿಗೆ ಪ್ರಾರ್ಥನೆ ಮಾಡುವುದು ಆರಾಧನೆಯಲ್ಲಿ ಪ್ರಥಮವಾದದ್ದು. ಸುವಾರ್ತೆಯುಗದಲ್ಲಿ ಕೂಡ ಇದು ಸತ್ಯ. ಪ್ರಾರಂಭದ ಸಭೆಯು ಪ್ರಾರ್ಥನೆಯಲ್ಲಿ ಹೇಗೆ ಸಮಯವನ್ನು ಕಳೆದರೋ ಕೆಲವು ವಾಕ್ಯಭಾಗಗಳು ನಮಗೆ ತಿಳಿಯಪಡಿಸುತ್ತಿವೆ (ಅ.ಕೃ.2:42, 1ತಿಮೊಥೆ 2:1–3, 1ಪೇತ್ರ 3:12). "ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮ ಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು

ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬುದೂ ನಮಗೆ ಗೊತ್ತಾಗಿದೆ" (1ಯೋಹಾನ 5:14–15). ಅಂಗೀಕಾರಕ್ಕೆ ಯೋಗ್ಯವಾದ ಪ್ರಾರ್ಥನೆ ಆತನ ಚಿತ್ತಾನುಸಾರವಾಗಿರಬೇಕು. ದೇವರ ಚಿತ್ತದ ಪ್ರಕಾರ ಪ್ರಾರ್ಥನೆಗಳಿಗೆಲ್ಲ ಉತ್ತರ ಕೊಡಲ್ಪಡುತ್ತದೆ. ನಾವು ಕೇಳಿಕೊಳ್ಳುವುದು ದೇವರ ಚಿತ್ತಪ್ರಕಾರವಿದ್ದರೆ ಆತನು 'ಹೌದು' ಎಂದು ಉತ್ತರ ಕೊಡುತ್ತಾನೆ. ಹಾಗೆ ಆಗದಿದ್ದರೆ 'ಇಲ್ಲಾ' ಎಂದಾಗಲಿ, ತರುವಾಯ ಎಂದಾಗಲಿ ಉತ್ತರ ದೊರೆಯುತ್ತದೆ. ನಾವು ಕೇಳಿದ ತಕ್ಷಣವೇ ದೇವರು ಅನುಗ್ರಹಿಸದಿದ್ದರೆ ಸಾಮಾನ್ಯವಾಗಿ ನಮ್ಮ ಪ್ರಾರ್ಥನೆಗೆ ಉತ್ತರ ಸಿಗಲಿಲ್ಲ ಅಂದುಕೊಳ್ಳುತ್ತೇವೆ. ಆದರೂ ದೇವರು ಎಲ್ಲಾ ವಿಜ್ಞಾಪನೆಗಳಿಗೂ ಉತ್ತರ ಕೊಡುವನು. ಆದರೆ ಆತನ ಉತ್ತರ ಎಲ್ಲಾ ಸಮಯದಲ್ಲಿ ನಮಗೆ ಸಮ್ಮತವಾಗದಿರಬಹುದು.

### ಬೋಧಿಸುವುದು, ಉಪದೇಶಿಸುವುದು

ಕ್ರೈಸ್ತತ್ವವು ವ್ಯಾಪಿಸುವುದಕ್ಕಾಗಿ ಸ್ಥಿರವಾಗುವುದಕ್ಕಾಗಿ ಬೋಧಿಸುವುದು, ಉಪದೇಶಿಸುವುದು ಪ್ರಾಮುಖ್ಯ. ಯಹೂದ್ಯ ಮತದಲ್ಲಿಯೂ ಕೂಡ ಇವು ಮುಖ್ಯವೇ. ಯೆಹೂದ್ಯರು ಅವರ ಮನೆಯಲ್ಲಿಯೂ, ಹೊರಗಡೆಯಲ್ಲಿಯೂ, ಆರಾಧನೆಯಲ್ಲಿಯೂ, ಅದು ಅವರ ಜೀವನ ವಿಧಾನ. ಯೆಹೂದ್ಯರಿಗೆ ಬಾಲ್ಯದಿಂದಲೇ ದೇವರ ವಾಕ್ಯವು ಉಪದೇಶಿಸಲ್ಪಡುತ್ತಿತ್ತು (ನೆಹಮಿಯ 8:1–8). "ಅನಂತರ ಯೆಹೋಶುವನು ಧರ್ಮಶಾಸ್ತ್ರದ ಎಲ್ಲಾ ಆಶೀರ್ವಾದ ಶಾಪ ವಾಕ್ಯಗಳನ್ನು ಆ ಗ್ರಂಥದಲ್ಲಿ ಇದ್ದ ಹಾಗೆಯೇ ಓದಿದನು. ಮೋಶೆಯು ಆಜ್ಞಾಪಿಸಿದ್ದರಲ್ಲಿ ಒಂದನ್ನೂ ಬಿಡದೆ ಹೆಂಗಸರಿಗೂ, ಚಿಕ್ಕವರಿಗೂ, ಅವರಲ್ಲಿದ್ದ ಅನ್ಯದೇಶಸ್ತರಿಗೂ ಕೇಳಿಸುವಂತೆ ಸರ್ವಸಮೂಹದ ಮುಂದೆ ಓದಿದನು" (ಯೆಹೋಶುವ 8:34–35). ದೇವರ ಮಕ್ಕಳು ಉಪದೇಶ ಕೇಳಬೇಕು. ಇದು ಕರ್ತನ ಸಭೆಯ ಪ್ರಾಥಮಿಕ ಅವಶ್ಯಕತೆ (1ಕೊರಿಂಥ 14:12; ಎಫೆಸ 4:11–12). ಸುವಾರ್ತೆ ಪ್ರಕಟಣೆಯೇ ಸಭೆಯ ಕಾರ್ಯವಾಗಿದೆ (ಮತ್ತಾಯ 28:18–20; 2ತಿಮೊಥೆ 2:2). ಅದಕ್ಕಾಗಿ ವಾಕ್ಯವು ಉಪದೇಶಿಸಬೇಕು, ಪ್ರಕಟಿಸಲ್ಪಡಬೇಕು, ಇದು ಮನೆ ಮನೆಯಲ್ಲಿಯೂ, ಬಹಿರಂಗವಾಗಿಯೂ, ಆರಾಧನೆಯಲ್ಲಿಯೂ ಸಹ ನಡೆಸಬೇಕು (ಅ.ಕೃ.20:20). ಅ.ಕೃ.20:7ನ್ನು ಹಿಡಿದು ಆದಿ ಸಭೆಯು ಕರ್ತನ ಭೋಜನವನ್ನು ಯಾವಾಗ ಆಚರಿಸಿದರೋ, ತಿಳಿಯಪಡಿಸುವುದು ಮಾತ್ರವಲ್ಲದೇ ಭಾನುವಾರ ಆರಾಧನೆಯಲ್ಲಿ ವಾಕ್ಯವು ಕೂಡ ಪ್ರಕಟಿಸಲ್ಪ



ಡುತ್ತಿರುವ ಹಾಗೆ ತಿಳಿಯಪಡಿಸುತ್ತದೆ. "ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ, ಉಪನ್ಯಾಸ ನಡಿಸಿದನು."

### ಮುಕ್ತಾಯ:–

ಇಂದಿನ ಆಧುನಿಕ ಮತಶಾಖೆ ಸಭೆಗಳು ಯೆಹೂದ್ಯ ಮತದಲ್ಲಿನ ಕೆಲವುಗಳನ್ನು ಹೊಸ ಒಡಂಬಡಿಕೆಯಲ್ಲಿ ಅವರಿಗೆ ಇಷ್ಟವಾದ ಕೆಲವನ್ನು ಆರಾಧನೆಯಲ್ಲಿ ತೆಗೆದುಕೊಂಡು ಬಂದು ಗಲಿಬಿಲಿ ಸೃಷ್ಟಿಸುತ್ತಿದ್ದಾರೆ. ಅದನ್ನು ಹಿಡಿದೇ ಅವರಿಗೆ ತೀರ್ಪು ಆಗುತ್ತದೆ (ಯೋಹಾನ 12:48). ಆದ್ದರಿಂದಲೇ ಪ್ರತಿಯೊಬ್ಬನು ದೇವರನ್ನು "ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೊಹಾನ 4:24). ಕ್ರಿಸ್ತನ ಸಭೆಯ ಆರಾಧನೆ ಹೊಸ ಒಡಂಬಡಿಕೆಗೆ ಭಿನ್ನವಾಗಿರದೆ, ಅದರ ಪ್ರಕಾರವೇ ಇರಬೇಕು. ಹೊಸ ಒಡಂಬಡಿಕೆ ಹೇಳುವ ರೀತಿಯೇ ಅವರ ಆರಾಧನೆ ಇರಬೇಕು.

## 5. ಹೊಸ ಒಡಂಬಡಿಕೆ ಸಭೆಯು ಉಪದೇಶದಲ್ಲಿ ದೈವಿಕವಾದದ್ದು
### (The New Testament Church is Divine in Doctrine)

ಮಾನವ ಕಲ್ಪಿತ ಬೋಧನೆಗಳಿಂದ ದೂರವಾಗಿರಬೇಕೆಂದು ಆದಿ ಸಭೆಗೆ ಬೋಧಿಸಲ್ಪಟ್ಟಿತು. ಮನುಷ್ಯರ ಬೋಧನೆಗಳೇ ದೈವೋಪದೇಶಗಳೆಂದು ಬೋಧಿಸುವುದರಿಂದ ಯೆಹೂದ್ಯ ಮತವು ದುರ್ವಿನಿಯೋಗವಾಗಿದೆಯೆಂದು ಯೇಸು ಪ್ರಕಟಿಸಿದನು (ಮತ್ತಾಯ 15:9). "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬದೇ". ಸುವಾರ್ತೆ ಮಾತ್ರವೇ ಮನುಷ್ಯರನ್ನು ರಕ್ಷಣೆಯೊಳಗೆ ನಡೆಸುತ್ತದೆ ಎಂದು ಅಪೊಸ್ತಲನಾದ ಪೌಲನು ಒತ್ತಿ ಹೇಳಿದ್ದಾನೆ (ರೋಮಾ 1:16; ಗಲಾತ್ಯ 1:6–12). ಸುವಾರ್ತೆಯಲ್ಲಿ ಉಪದೇಶಿಸುವುದು ಅಥವಾ ಬೋಧಿಸುವುದು ನಡೆಯುತ್ತದೆ. ಅದರಲ್ಲಿ ಮನುಷ್ಯನ ವಿಮೋಚನಾರ್ಥವಾದ ದೇವರ ಸಂಕಲ್ಪವಿದೆ. ನಂತರ ಸಭೆಗೆ ದೇವರು ವಹಿಸಿದ ಭಾಧ್ಯತೆಗಳಿವೆ. (ಜವಬ್ದಾರಿಗಳು)

### ಹೊಸ ಒಡಂಬಡಿಕೆಯು ಸಭೆಯ ಏಕೈಕ ವಿಶ್ವಾಸ ಪ್ರಮಾಣಪತ್ರ

ಮನುಷ್ಯರು ಕಲ್ಪಿಸಿದ ವಿಶ್ವಾಸ ಪ್ರಮಾಣಗಳಿಂದ ಪ್ರಪಂಚವೆಲ್ಲಾ ಮತ ಸಂಬಂಧವಾದ ಗುಂಪುಗಳನ್ನು ಏರ್ಪಟ್ಟಿವೆ. ಮನುಷ್ಯನು ವಿಶ್ವಾಸ ಪ್ರಮಾಣ ಪುನಃ ಬದಲಾಯಿಸಬಹುದು. ಆದರೆ ಅನೇಕ ಶತಮಾನಗಳಾದರೂ, ಹೊಸ ಒಡಂಬಡಿಕೆ ಪರಿಪೂರ್ಣವಾಗಿ ಅದು ಬದಲಾವಣೆಯಾಗಿಲ್ಲ. ಮನುಷ್ಯನ ದೃಷ್ಟಿಕೋನದಿಂದ ನೋಡಿದರೂ, ಹೊಸ ಒಡಂಬಡಿಕೆಯನ್ನು ಮಾತ್ರವೇ ಅನುಸರಿಸಿದರೆ ಯೇಸು ಕ್ರಿಸ್ತನು ಬಯಸಿ ಪ್ರಾರ್ಥಿಸಿದ ಐಕ್ಯತೆ ಸಾಧ್ಯವಾಗುತ್ತದೆ (ಯೋಹಾನ 17:20–21). ಮತ ಶಾಖೆಗಳು ಐಕ್ಯತೆಗಾಗಿ ಎಷ್ಟು ಪ್ರಯಾಸ ಪಟ್ಟರೂ ಅದು ಸಾಧ್ಯವಾಗುವುದಿಲ್ಲ.

ದೇವರು ತಾವು ಜೀವಿಸುತ್ತಿದ್ದ ಕಾಲದಲ್ಲಿ ಮಾಡಿದ ಒಡಂಬಡಿಕೆಯ ಪ್ರಕಾರ ಪ್ರತಿಯೊಬ್ಬನಿಗೆ ತೀರ್ಪು ತೀರಿಸುವನು (ರೋಮಾ 2:12–15). ಅದೇ ರೀತಿಯಾಗಿ ಹೊಸ ಒಡಂಬಡಿಕೆ ಕಾಲದಲ್ಲಿ ಜೀವಿಸಿದವರು ಹಳೆಯ ಒಡಂಬಡಿಕೆಯ ನಿಯಮಗಳನ್ನು ಅನುಸರಿಸುವುದರಿಂದ ನೀತಿವಂತರಾಗಿ ತೀರ್ಪು ಹೊಂದುವುದಿಲ್ಲ. ಹೇಗೆಂದರೆ ಹಳೆಯ ಒಡಂಬಡಿಕೆಯಿಂದ ನಾವು



ಬಿಡುಗಡೆ ಹೊಂದಿದ್ದೇವೆ (ಕೊಲೊಸ್ಸೆ 2:14; ಎಫೆಸ2:14; ರೋಮಾ 7:6; ಇಬ್ರಿಯ 8:6–13). ಇಂದು ಹಳೆಯ ಒಡಂಬಡಿಕೆಯ ಪ್ರಕಾರ ಜೀವಿಸಲು ಆರಿಸಿಕೊಂಡವನು ಅವನು ಯಾರೇ ಆದರೂ ದೇವರ ಕೃಪೆಯಿಂದ ತೊಲಗಿ ಹೋದವನು (ಗಲಾತ್ಯ 5:1–5). ಆತ್ಮೀಯ ವಿಷಯಗಳಲ್ಲಿ ಹೊಸ ಒಡಂಬಡಿಕೆಯೊಂದೆ, ಏಕೈಕ ದೈವಿಕ ನಿಯಮವಾಗಿದೆ. ತನ್ನ ಜೊತೆ ಮನುಷ್ಯನೊಂದಿಗೆ ಹೇಗೆ ಜೀವಿಸಬೇಕೊ, ದೇವರನ್ನು ಹೇಗೆ ಸೇವಿಸಿ ಆರಾಧಿಸಬೇಕೋ, ಸುವಾರ್ತೆಯಲ್ಲಿನ ಆಶೀರ್ವಾದಗಳನ್ನು ಹೇಗೆ ಹೊಂದಬೇಕೊ ಪರಲೋಕ ನಿರೀಕ್ಷೆಯನ್ನು ಹೇಗೆ ಹೊಂದಿರಬೇಕೋ ಎಂದು ಅದು ಮನುಷ್ಯನಿಗೆ ಬೋಧಿಸುತ್ತದೆ.

### ವಿಮೋಚನೆ:–

ಕರ್ತನ ಸಭೆ ಸಭ್ಯತ್ವದೊಂದಿಗೆ ವಿಮೋಚನೆಯ ಸಂಬಂಧ ಹೊಂದಿದೆ. ರಕ್ಷಣೆಯ ಮಾರ್ಗದಲ್ಲಿದ್ದವರನ್ನು ಕರ್ತನು ತನ್ನ ಸಭೆಗೆ ಸೇರಿಸಿಕೊಳ್ಳುತ್ತಿದ್ದನು (ಅ.ಕೃ.2:47). ಆದರೆ ವಿವಿಧ ಮತಶಾಖೆಗಳಿಂದಾಗಿ ಒಬ್ಬನು ಮತ ಸಂಬಂಧವಾಗಿ ಗಲಿಬಿಲಿಯಾಗುತ್ತಿದ್ದಾನೆ. ಆದ್ದರಿಂದ ಸತ್ಯಾನ್ವೇಷಕನು ಈ ಮತ ಸಂಬಂಧವಾದ ಕೊರೆಗಳಲ್ಲಿ ಬಿದ್ದುಹೋಗದೆ ಮನುಷ್ಯ ಕಲ್ಪಿತ ಬೋಧನೆಗಳ ಕಡೆಗೆ ಹೋಗದೆ, ದೇವರ ವಿಮೋಚನಾ ಪಥಕಕ್ಕೆ, ಆತನು ಸ್ಥಾಪಿಸಿದ ಏಕೈಕ ಸಭೆಯನ್ನು ಆರಿಸಿಕೊಳ್ಳಬೇಕು. ಯೋಗ್ಯವಾದ ಒಳ್ಳೆಯ ಮನಸ್ಸುಳ್ಳವರ ಹೃದಯದಲ್ಲಿ ಬಿದ್ದ ಬೀಜವು ಕೇವಲ ಕ್ರೈಸ್ತರು ಎಂಬ ಫಲವನ್ನೇ ಫಲಿಸುತ್ತದೆ. ದೇವರ ವಾಕ್ಯವು ಒಂದೇ ಕ್ರಿಸ್ತನ ಸಭೆಯನ್ನು ಬಿತ್ತುತ್ತದೆ (ಲೂಕ 8:11).

ಸುವಾರ್ತೆಯಲ್ಲಿ, ಹೊಸ ಒಡಂಬಡಿಕೆಯಲ್ಲಿ ದೇವರ ರಕ್ಷಣಾ ಸಂಕಲ್ಪವು ಕೆಲವು ಲೇಖನಗಳಲ್ಲಿ ವಿವರಿಸಲ್ಪಟ್ಟಿದೆ. ಕೆಲವರು ಈ ಲೇಖನಗಳಲ್ಲಿ ಕೆಲವನ್ನು ಅಂಗೀಕರಿಸುವರು, ಅತಿ ಮುಖ್ಯವಾಗಿ ಅವರಿಗಿಷ್ಟವಾದ ಲೇಖನಗಳನ್ನೇ ಆರಿಸಿಕೊಂಡು ಇಷ್ಟವಾಗದ ಕೆಲವುಗಳನ್ನು ಪಕ್ಕಕ್ಕಿಡುತ್ತಾರೆ. ದೇವರ ರಕ್ಷಣ ಸಂಕಲ್ಪವು ಹೀಗಿದೆ,

1. ಒಬ್ಬನು ಸುವಾರ್ತೆಯನ್ನು ಕೇಳಬೇಕು (ರೋಮಾ 10:17)
2. ರಕ್ಷಿಸಲ್ಪಡುವಂತಹ ನಂಬಿಕೆಯನ್ನು ಹೊಂದಿರಬೇಕು (ಯಾಕೋಬ 32:20,24,26).

3. ಪಾಪಗಳ ವಿಷಯವಾಗಿ ಮಾನಸಾಂತರ ಹೊಂದಬೇಕು (ಅ.ಕೃ.17:30–31).

4. ಯೇಸುವನ್ನೆ ಕರ್ತನೆಂದು ಬಾಯಿಂದ ಅರಿಕೆ ಮಾಡಬೇಕು (ರೋಮಾ 10:9–10).

5. ಪಾಪಗಳು ಕ್ಷಮಿಸಲ್ಪಡಲು ನೀರಿನಲ್ಲಿ ದೀಕ್ಷಾಸ್ನಾನ ಹೊಂದಬೇಕು (ರೋಮಾ 6:3–5; ಅ.ಕೃ.22:16).

6. ಸಾಯಬೇಕಾದರೂ ನಂಬಿಗಸ್ತನಾಗಿರಬೇಕು (ಪ್ರಕ 2:10).

7. ರಕ್ಷಣೆ ಹೊಂದಿದರೂ, ಪಾಪ ಮಾಡಿದ ದೇವರ ಮಕ್ಕಳು ಮಾನಸಾಂತರ ಹೊಂದಿ ಕ್ಷಮಾಪಣೆ ಕೇಳಿಕೊಳ್ಳಬೇಕು (ಅ.ಕೃ.8:22; 1ಯೋಹಾನ 1:9).

**ಸುವಾರ್ತೆ ಪ್ರಕಟನೆ, ಧರ್ಮಕಾರ್ಯಗಳು, ಕ್ಷೇಮಾಭಿವೃದ್ಧಿ.**

ಕ್ರಿಸ್ತನ ಸಭೆಯು ಸುವಾರ್ತೆ ಪ್ರಕಟನೆಯಲ್ಲಿಯೂ, ಧರ್ಮಕಾರ್ಯಗಳನ್ನು ಮಾಡುವುದರಲ್ಲಿಯೂ, ಸಭೆಯ ಕ್ಷೇಮಾಭಿವೃದ್ಧಿಯಲ್ಲಿಯೂ, ಚುರುಕಾಗಿ ಇರಬೇಕೆಂದು ಲೇಖನಗಳು ಬೋಧಿಸುತ್ತಿವೆ. ಇವುಗಳಲ್ಲಿ ಇಲ್ಲದಿರುವುದು ಯಾವುದಾದರೂ ಇದ್ದರೆ ಅದು ಸಭೆಯ ಜವಾಬ್ದಾರಿಯಲ್ಲ. ಯಾವುದಾದರೂ ಒಂದು ಕಾರ್ಯಕ್ರಮವನ್ನು ಕುರಿತು ಲೇಖನವು ಹೇಳದೆ ಇರಬಹುದು. ಅದು ಸಭೆಯ ಕೆಲಸವಾಗಿರದೆ ಇರಬಹುದು. ಆ ಕಾರ್ಯಕ್ರಮ ಮನೆ ಸಂಬಂಧ ವಾದದ್ದಾಗಿರಬಹುದು. ಮನೆಯಾ ಕೂಡ ದೈವಿಕ ಸಂಸ್ಥೆಯೇ. ಆದರೆ ಸಭೆಯ ಪಾತ್ರವೂ, ಮನೆಯ ಪಾತ್ರವೂ, ಕೆಲವು ಸಾರಿ ಸೇರಿದ್ದರೂ ಅವೆರಡು ಒಂದೇ ಆಗುವುದಿಲ್ಲ.

ಯೇಸು ಕ್ರಿಸ್ತನು ಕೊಟ್ಟ ಶ್ರೇಷ್ಠ ಆಜ್ಞೆ ಪ್ರಾಮುಖ್ಯವಾಗಿ ಸ್ಥಾನಿಕ ಸಭೆಗೆ ಅನ್ವಯಿಸುತ್ತದೆ (ಮತ್ತಾಯ 28:18–20; 2ತಿಮೊಥೆ 2:12). ಇದರಿಂದಾಗಿ ಸುವಾರ್ತೆ ಪ್ರಕಟನೆ ಸಭೆಯ ಒಂದು ಮುಖ್ಯ ವಿಧಿಯಾಗಿದೆ. ಆದರೂ ದೇವರ ಮೆಚ್ಚುಗೆ ಹೊಂದಬೇಕಾದರೆ ಸ್ಥಾನಿಕ ಸಭೆಯು ಬಲಗೊಳ್ಳಬೇಕು, ಅಭಿವೃದ್ಧಿ ಹೊಂದಬೇಕು (1ಕೊರಿಂಥ 14:12; ಇಬ್ರಿಯ 5:12–6:2). ಮತ್ತು ಕರ್ತನ



ಸಭೆಯು ಸಹ ಮನುಷ್ಯರ ಮೇಲೆ ಅತ್ಯುತ್ತಮವಾದ ಪ್ರೀತಿಯನ್ನು ತೋರಿಸಬೇಕು (ಮತ್ತಾಯ 22:37–40; ಯಾಕೋಬ 1:27; ಗಲಾತ್ಯ 6:10). ಈ ರೀತಿಯಾಗಿ ದೇವರ ಪ್ರೀತಿಯನ್ನು ಅನುಸರಿಸಬೇಕು. ಧರ್ಮಕಾರ್ಯಗಳನ್ನು ಮಾಡುವುದರಿಂದ ಇತರರು ಸಭೆಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದುತ್ತಾರೆ. ಇದರಿಂದ ಸುವಾರ್ತೆ ಪ್ರಕಟನೆಗಾಗಿ ಸಭೆಗೆ ಅವಕಾಶಗಳು ದೊರೆಯುತ್ತವೆ.

ಯೇಸುಕ್ರಿಸ್ತನು ಪರಲೋಕಕ್ಕೆ ಆರೋಹಣನಾಗುವುದಕ್ಕಿಂತ ಮುಂಚೆ ತನ್ನ ಅಪೊಸ್ತಲರಿಗೆ ಒಂದೇ ಒಂದು ಕೆಲಸವನ್ನು ಒಪ್ಪಿಸಿಕೊಟ್ಟನು (ಮಾರ್ಕ16:15–16). ಅದು ಸರ್ವಲೋಕಕ್ಕೆ ಸುವಾರ್ತೆ ಪ್ರಕಟಿಸುವುದೇ. ಹೊಸ ಒಡಂಬಡಿಕೆ ಪ್ರಕಾರ ಸಭೆಗೆ, ಕ್ರೈಸ್ತರಿಗೆ ಕೆಲವು ಜವಬ್ದಾರಿಗಳು ಇದ್ದರೂ, ಸರ್ವಲೋಕಕ್ಕೆ ಸುವಾರ್ತೆ ಸಾರುವುದೊಂದೆ ಅವರ ಮುಖ್ಯ ಜವಬ್ದಾರಿಯಾಗಿರಬೇಕು ಪ್ರತಿ ಕ್ರೈಸ್ತವನು ನಂಬಿಕೆಯಿಂದ ದೇವರನ್ನು ಆರಾಧಿಸುತ್ತಾ, ಕ್ರೈಸ್ತ ಜೀವಿತವನ್ನು ಜೀವಿಸುತ್ತಾ, ಸೇವೆ ಮಾಡುತ್ತಾ, ಕ್ರಿಸ್ತನ ಬೋಧನೆಯನ್ನು ಅನುಸರಿಸುತ್ತಾ ಜೀವಿಸಬೇಕು. ಇವೆಲ್ಲಾ ಮಾಡಿದರೂ, ಸುವಾರ್ತೆ ಪ್ರಕಟಣೆಗೆ ತನ್ನ ಕೈ ಜೋಡಿಸದೇ ಹೋದರೆ ಯೇಸು ತನ್ನ ಶಿಷ್ಯರಿಗೆ ಕೊಟ್ಟ ಕೆಲಸವನ್ನು ನಿರ್ಲಕ್ಷಮಾಡಿದವನಾಗುವನು.

**ಮುಕ್ತಾಯ:–**

ಲೋಕದಲ್ಲೆಲ್ಲಾ ಸಾವಿರಾರು ಕ್ರಿಸ್ತನ ಸಭೆಗಳಿವೆ. ಪ್ರತಿ ಸ್ಥಾನಿಕ ಸಭೆಯು ಸ್ವಯಂ ಪರಿಪಾಲನೆ ಹೊಂದಿರುವುದರಿಂದ ಅವುಗಳ ಸಂಖ್ಯೆಯನ್ನು ಖಚಿತವಾಗಿ ಹೇಳಲಾಗದು. ಅವು ಎಷ್ಟಿದ್ದರೂ ಎಲ್ಲವೂ, ಹೊಸ ಒಡಂಬಡಿಕೆ ಬೋಧನೆಗೆ ಒಳಪಡಲ್ಪಟ್ಟಿವೆ. ಮನುಷ್ಯ ಕಲ್ಪಿತ ಬೋಧನೆಗಳು ನಾಶನಕ್ಕೆ ನಡಿಸುತ್ತವೆ.

“ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು, ಅದು ಕಟ್ಟಕಡೆಗೆ ಮರಣ ಮಾರ್ಗವೇ” (ಜ್ಞಾನೋಕ್ತಿ 14:12).

## 6. ಹೊಸ ಒಡಂಬಡಿಕೆ ಸಭೆಯು ಐಕ್ಯತೆಯಲ್ಲಿ ದೈವಿಕವಾದದ್ದು

### (The New Testament Church Divine in Unity)

ನಿಜವಾದ ಐಕ್ಯತೆ ಹೊಸ ಒಡಂಬಡಿಕೆ ಸಭೆಗೆ ಗುರುತಾಗಿದೆ. (ಯೋಹಾನ 17:20–23). ದೇವರ ವಾಕ್ಯದ ಪ್ರಕಾರ ಮಾತ್ರವೇ ನಡೆದುಕೊಳ್ಳಲು ಅಂಗೀಕರಿಸುವುದರಿಂದ ನಿಜವಾದ ಐಕ್ಯತೆ ಸಾಧ್ಯವಾಗುತ್ತದೆ (ರೋಮ1:16; ಲೂಕಾ 6:46; ಯೊಹಾನ 6:68). ಕೆಲವರು ಬಿಟ್ಟುಹೋದರೂ ಒಂದಾಗಿರಲು ಇಷ್ಟಪಡುವರು. ಅಂತಹ ವ್ಯರ್ಥವಾದ ಐಕ್ಯತೆಯನ್ನು ಕುರಿತು ಆಮೋಸನು "ಗೊತ್ತು ಮಾಡಿಕೊಳ್ಳದೆ ಇಬ್ಬರು ಜೊತೆಯಾಗಿ ನಡೆಯುವರೋ?" ಎಂದು ಪ್ರಶ್ನಿಸುತ್ತಿದ್ದಾನೆ (ಆಮೋಸ 3:3). ಅಸಾಧ್ಯ ಎಂದು ನಾವು ಉತ್ತರ ಕೊಡಬಹುದು. ಹೊಸ ಒಡಂಬಡಿಕೆ ಸಭೆಯ ಐಕ್ಯತೆ ವಿವಿಧತೆಯಲ್ಲಿ ಏಕತೆಯನ್ನು ತೋರಿಸುವುದಿಲ್ಲ. ಎರಡು ಬೆಕ್ಕುಗಳ ಬಾಲಗಳನ್ನು ನಾವು ಒಂದಾಗಿ ಕಟ್ಟಬಹುದಾಗಲಿ ಆ ಎರಡನ್ನು ನಾವು ಒಂದು ಮಾಡಲಾರೆವು.

**ಒಂದೇ ಬೋಧನೆಯ(ಸಿದ್ಧಾಂತದ) ಅವಶ್ಯಕತೆ.**

ಯೇಸುಕ್ರಿಸ್ತನು ಸ್ಥಾಪಿಸಿದ ಸಭೆಯು ಹೊಸ ಒಡಂಬಡಿಕೆ ಬೋಧನೆಯಿಂದ ಮಾತ್ರ ನಡಿಸಲ್ಪಡಬೇಕು (ಯೊಹಾನ 12:48; ಯೂದಾ:3). ಹೊಸ ಒಡಂಬಡಿಕೆ ಬದಲಾಗಿ ಬೇರೊಂದನ್ನು ಇಟ್ಟರೆ ಐಕ್ಯತೆಗೆ ಆಧಾರವೇನೂ ಇರುವುದಿಲ್ಲ. (ಪ್ರಕ 22:18–19; ಗಲಾತ್ಯ 1:6–9). ದೇವಜನರನ್ನು ಯೋಗ್ಯಸ್ಥಿತಿಗೆ ತರುವುದಕ್ಕೋಸ್ಕರವೂ, ಸಭೆಯ ಸೇವೆಗೋಸ್ಕರವೂ, ಕ್ರಿಸ್ತನ ದೇಹ ಅಭಿವೃದ್ಧಿಯಾಗುವುದಕ್ಕೋಸ್ಕರವೂ, ಆತನು ಇವರನ್ನು ಅನುಗ್ರಹಿಸಿದನು (ಎಫೆಸ 4:11–13). "ನೀವೆಲ್ಲರು ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ; ಭರವಸವು ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ" (ಎಫೆಸ 4:4–6). ಬೈಬಲ್ ಸಂಬಂಧವಾದ ಐಕ್ಯತೆಯಿಂದ ಪ್ರತಿಫಲವನ್ನು ಕುರಿತು ಎಫೆಸ 4:14ರಲ್ಲಿ ಹೇಳಲ್ಪಟ್ಟಿದೆ. "ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ, ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು



ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯತೆಯನ್ನು ಹೊಂದುತ್ತಾ ಬರಬೇಕು".

**ದೇವರು ಹೇಳದೇ ಇರುವುದು ಅಲ್ಲ, ಹೇಳಿರುವುದು ಮುಖ್ಯವಾದದ್ದು.**

ಕೆಲವು ಗುಂಪುಗಳ ಮತ ಸಂಬಂಧವಾದ ವಿಶ್ವಾಸವು ಒಂದೇ ರೀತಿಯಿದ್ದರೂ ಬೈಬಲ್‌ನ ಅಧಿಕಾರದ ವಿಷಯದಲ್ಲಿ ಭಿನ್ನಮಾರ್ಗಗಳನ್ನು ಅನುಸರಿಸುವುದರಿಂದ ಅವರು ವಿವಿದ ಶಾಖೆಗಳಾಗಿ ಬೇರೆ ಬೇರೆಯಾದರು. ಪ್ರತಿಯೊಂದು ಗುಂಪು ತಮ್ಮ ತಮ್ಮ ಪ್ರತ್ಯೇಕ ಗುರುತನ್ನು ಸಾಗಿಸುತ್ತಾ ಇದ್ದಾಗ ಐಕ್ಯತೆಯು ಅಸಾಧ್ಯ (1ಅರಸು 8:21; ಯೋಹಾನ 4:20). ಅವರ ಬೇಧಗಳು ಎಣಿಸಲ್ಪಡುದಿಲ್ಲ ಎಂದುಕೊಂಡರೂ ನಿಜವಾದ ಐಕ್ಯತೆ ಅಸಾಧ್ಯ. ಅಂತಹ ನಿಬಂಧನೆಗಳೊಂದಿಗೆ ದೇವರು ಏಕೀಭವಿಸುವುದಿಲ್ಲ. ಇಂದಿನ ಮನುಷ್ಯನಿಗೆ ಆತನು ತನ್ನ ಒಡಂಬಡಿಕೆಯನ್ನು ಈಗಾಗಲೆ ಕೊಟ್ಟಿದ್ದಾನೆ. ಪ್ರತಿಯೊಬ್ಬನು ಅದರ ಪ್ರಕಾರವೇ ನಡೆದುಕೊಳ್ಳಬೇಕು. ಲೇಖನಾನುಸಾರವಾಗಿ ನಡೆದುಕೊಳ್ಳುವವನಿಗೆ ಅದರ ವಿರುದ್ಧವಾಗಿ ನಡೆದುಕೊಳ್ಳುವವನಿಗೆ ಮಧ್ಯದಲ್ಲಿ ಐಕ್ಯತೆಯು ಅಸಾಧ್ಯ.

"ಬೈಬಲ್ ಮಾತನಾಡುವ ಕಡೆ ನಾವೂ ಮಾತನಾಡೋಣ ಬೈಬಲ್ ಮೌನವಾಗಿರುವ ಕಡೆ ನಾವೂ ಮೌನವಾಗಿರೋಣ" ಎನ್ನುವ ನಿನಾದ ವ್ಯಕ್ತಪಡಿಸುತ್ತದೆ (1ಪೇತ್ರ 4:11).

ಅಮೇರಿಕಾದಲ್ಲಿ ಕೆಲವು ಕ್ರಿಸ್ತನ ಸಭೆಗಳೇ ಎಂದು ಕರೆಯಲ್ಪಡುತ್ತಿದ್ದರೂ, ತಮ್ಮ ಆರಾಧನೆಯಲ್ಲಿ ವಾದ್ಯಸಂಗೀತವನ್ನು ಉಪಯೋಗಿಸುತ್ತಾರೆ. ಆದ್ದರಿಂದ ಕ್ರೈಸ್ತವಾರಾಧನೆಯಲ್ಲಿ ದೇವರು ಬಯಸುವ ಸಂಗೀತವು ಯಾವುದು? ಎಂದು ನಾವು ಪ್ರಶ್ನಿಸಿಕೊಳ್ಳಬಹುದು. ನಿಜವಾದ ಕ್ರಿಸ್ತನ ಸಭೆಗಳಾದರೆ ಹಾಡುಗಳನ್ನು ಹಾಡುವುದೆ ದೇವರು ಬಯಸುವುದು ಎಂದು ಲೇಖನಾನುಸಾರವಾಗಿ ಗ್ರಹಿಸಿ ವಾದ್ಯಸಂಗೀತವನ್ನು ಉಪಯೋಗಿಸುವುದಿಲ್ಲ. ಹೇಗೆಂದರೆ "ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ, ಆತ್ಮಸಂಬಂಧವಾದ ಪದಗಳಿಂದಲೂ, ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ" ಎಂದು ಎಫೆಸ 5:19ರಲ್ಲಿ ಹೇಳಲ್ಪಟ್ಟಿದೆ. ಪುನಃ "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ. ಬುದ್ಧಿಹೇಳಿಕೊಳ್ಳಿರಿ; ಕರ್ತನ

ಕೃಪೆಯನ್ನು ನೆನೆಸುವವರಾಗಿ ಕೀರ್ತನೆಗಳಿಂದಲೂ, ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ" ಎಂದು ಕೊಲೊಸ್ಸೆ 3:16ರಲ್ಲಿ ಹೇಳುತ್ತಿದೆ. ಇಲ್ಲಿ ದೇವರು ಬಯಸುವ ಸಂಗೀತವು ಎಂತಹುದೊ ತಿಳಿಸಲ್ಪಟ್ಟಿದೆ. ಕ್ರಿಸ್ತನ ಸಭೆಗಳು ವಾದ್ಯಗಳನ್ನು ಉಪಯೋಗಿಸುವುದಿಲ್ಲ. ಉಪಯೋಗಿಸಲು ಬೈಬಲ್ ಅಧಿಕಾರ ಕೊಡುವುದಿಲ್ಲ.

ದೇವರ ವಾಕ್ಯವು ಇಂದಿಗೂ ಬದಲಾವಣೆಯಿಲ್ಲದ್ದಾಗಿದೆ. "ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ" (ಕೊಲೊಸ್ಸೆ3:17). ದೇವರು ಹೇಳಿದ್ದೇ ನಾವು ಮಾಡಬೇಕು, ಆತನು ಹೇಳದಿರುವುದು ಅಲ್ಲ.

**ಗುಂಪು ತತ್ವವು ಐಕ್ಯತೆಗೆ ಭಂಗವನ್ನುಂಟುಮಾಡುತ್ತದೆ.**

ಆಸ್ತಿಯು ವಿಭಜಿಸಲ್ಪಟ್ಟ ಹಾಗೆ ದೇವರ ಸಭೆಯು ವಿಭಜಿಸಲ್ಪಟ್ಟಿಲ್ಲ. ಕ್ರೈಸ್ತರೆಂದು ಹೇಳಿಕೊಳ್ಳುವವರು ವಿವಿದ ಶಾಖೆಗಳಾಗಿ ವಿಭಾಗ ಹೊಂದುವುದನ್ನು ದೇವರು ಹಾಗೆಯೇ ನೋಡುತ್ತಾ ಸುಮ್ಮನಿರುವುದಿಲ್ಲ. ಅವರು ಬೇರೆಯಾಗುತ್ತಾ ದೇವರನ್ನು ಕೂಡ ತಮ್ಮಲ್ಲಿ ವಿಭಾಗಿಸಿಕೊಳ್ಳುತ್ತಾರೆ. ಯೇಸು ಐಕ್ಯತೆಯನ್ನು ಕುರಿತು ಮಾಡಿದ ಪ್ರಾರ್ಥನೆಯೇ ತ್ರಿಯೇಕ ದೇವರ ಚಿತ್ತವಾಗಿದೆ. "ಆದರೆ ಇವರಿಗೋಸ್ಕರ ಮಾತ್ರವಲ್ಲದೇ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿ ಕೊಟ್ಟಿದ್ದೀ ಎಂದು ಲೋಕವು ನಂಬುವುದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ (ಯೋಹಾನ 17: 20–21).

ಯೇಸು ಒಂದೇ ಒಂದು ಸಭೆಯನ್ನು ಕಟ್ಟಿದನು. ಅದು ಆತನ ರಾಜ್ಯವು, ಆತನ ಶರೀರವು (ಮತ್ತಾಯ 16:18–19; ಅ.ಕೃ.2:47; ಕೊಲೊಸ್ಸೆ1:13,18). ಈ ನಿತ್ಯರಾಜ್ಯದೊಳಗೆ ಹೋಗುವ ಮಾರ್ಗವು ಇಕ್ಕಟ್ಟಾಗಿಯೂ, ಸಂಕುಚಿತ ವಾಗಿಯೂ ಇದೆ (ಮತ್ತಾಯ 7:13–14). ಅನೇಕರು ಹೇಳುವ ರೀತಿಯಾಗಿ



ಅಲ್ಲದೇ, ನಿಷ್ಕಪಟಿಗಳಾದ ಪ್ರತಿಯೊಬ್ಬರು ಅಲ್ಲಿ ಇರುವುದಿಲ್ಲ. (ಮತ್ತಾಯ 7:21–23). ಯೇಸು ಕ್ರಿಸ್ತನು ಸ್ಥಾಪಿಸದೇ ಆತನು ಶಿರಸ್ಸಾಗಿ ಇಲ್ಲದ ಯಾವ ಮತಶಾಖೆಯೂ ಕೂಡ ಪರಲೋಕಕ್ಕೆ ಸೇರದು. ಅವು ಕಿತ್ತುಹಾಕಲ್ಪಡುವವು (ಮತ್ತಾಯ 15:13). ಕೊರಿಂಥದಲ್ಲಿರುವ ಸಭೆಯಲ್ಲಿ ಬೇಧಗಳು ಉಂಟಾದಾಗ ಪೌಲನು ಅಲ್ಲಿನ ಕ್ರೈಸ್ತರನ್ನು ಖಂಡಿಸಿದನು.

"ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಬೇಧಗಳು ಇರಬಾರದು. ನೀವು ಒಂದೇ ಮನಸ್ಸು, ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು. ಎಂಬುದಾಗಿ ನಾನು ನಿಮ್ಮನ್ನು ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದು ಬಂತು. ನಿಮ್ಮೊಳಗೆ ಪ್ರತಿಯೊಬ್ಬನು ನಾನು ಪೌಲನವನು, ಇಲ್ಲವೇ ನಾನು ಅಪೊಲ್ಲೋಸನವನು, ಅಥವಾ ನಾನು ಕೇಫನವನು, ಇಲ್ಲವೇ ನಾನು ಕ್ರಿಸ್ತನವನು ಎಂದು ಹೇಳಿ ಕೊಳ್ಳುತ್ತಾನಂತೆ. ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರೋ?" (1ಕೊರಿಂಥ 1:10–13).

ಕೊರಿಂಥದಲ್ಲಿರುವ ಕ್ರೈಸ್ತರ ಐಕ್ಯತೆಗಾಗಿ ಪೌಲನು ಹೇಗೆ ಎಚ್ಚರಿಸಿದನೋ, ಕ್ರೈಸ್ತರು ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಹೊಂದಿದ್ದರೆ ಮಾತ್ರ ಅವರಲ್ಲಿ ಐಕ್ಯತೆ ಸಾದ್ಯವಾಗುತ್ತದೆ. ಗುಂಪು ತತ್ವವು, ಮತಶಾಖೆಗಳ ತತ್ವವು ವಿಭಜನೆಯನ್ನು ಪ್ರೋತ್ಸಾಹಿಸುತ್ತವೆ. ಬೈಬಲ್ ಸೂಚಿಸುವ ಐಕ್ಯತೆಗೆ ಅವು ಭಿನ್ನವಾಗಿವೆ.

**ಮುಕ್ತಾಯ:–**

ದೇವರ ವಾಕ್ಯದ ಮೇಲೆ ಮಾತ್ರವೇ ಆಧಾರ ಪಟ್ಟರೆ ಐಕ್ಯತೆ ಸಾಧ್ಯವಾಗುತ್ತದೆ ಎಂಬುದು ಕ್ರಿಸ್ತನ ಸಭೆಯ ನಿನಾದ. ಮಾನವನಿಗೆ ಬಿಟ್ಟುಬಿಟ್ಟರೆ ಮನುಷ್ಯನು ಭಿನ್ನ ಭಿನ್ನವಾದ ಬೋಧನೆಗಳನ್ನು ವಿಶ್ವಾಸ ಪ್ರಮಾಣಗಳನ್ನು, ಬೈಬಲ್‌ಗೆ ವಿರುದ್ಧವಾದ ಸಿದ್ಧಾಂತಗಳನ್ನು ತಂದು ಹಾಕಿ ಬೇಧಗಳನ್ನು ಸೃಷ್ಟಿಸುತ್ತಾನೆ. ಈ ಯುಗದಲ್ಲಿ ಆತ್ಮೀಯ ಐಕ್ಯತೆಯನ್ನು ಸಾಧಿಸುವುದು ಹೊಸ ಒಡಂಬಡಿಕೆ

ಮಾತ್ರವೇ. (ಗಲಾತ್ಯ 1:6–9; ಯೂದಾ:3). ಸಭೆಯು (ಶರೀರವು) ಒಂದೇ, ದೇವರು ಒಬ್ಬನೇ; ನಿರೀಕ್ಷೆಯು ಒಂದೇ, ಕ್ರಿಸ್ತನು ಒಬ್ಬನೇ, ಆತ್ಮನು ಒಬ್ಬನೇ, ದೀಕ್ಷಾಸ್ನಾನವು ಒಂದೇ, ನಂಬಿಕೆಯೂ ಒಂದೇ (ಎಫೆಸ 4:4–6). ನಂಬಿಕೆ ಯುಳ್ಳ ಸಭೆಗಳು ಮತಶಾಖೆಗಳೊಂದಿಗೆ ಸೇರುವುದು ಖಂಡಿಸಲ್ಪಟ್ಟಿದೆ. (2 ಯೋಹಾನ: 9–11). ದೇವರೊಂದಿಗೆ ಸಹವಾಸ ಉಳ್ಳವರೊಂದಿಗೆ ಕ್ರೈಸ್ತವರು ಸಹವಾಸ ಮಾಡಬೇಕು. (1ಯೋಹಾನ 1:3–7).

ಬೈಬಲ್ ಏನು ಹೇಳುತ್ತಿದೆಯೋ, ಅದನ್ನು ನಾವು ಮಾಡಬೇಕು. ಅದು ಹೇಳದಿರುವುದನ್ನು ವಿಸರ್ಜಿಸಬೇಕು. ಆತನು ಐಕ್ಯತೆಗಾಗಿ ಪ್ರಾರ್ಥಿಸಿದನು. ರಕ್ಷಿಸಲ್ಪಟ್ಟವರನ್ನು ಆತನು ತನ್ನ ಮಂಡಲಿಗೆ (ಸಭೆಗೆ) ಸೇರಿಸುತ್ತಾನೆ. (ಅ.ಕೃ. 2:47; 20:28; ಮತ್ತಾಯ 16:18–19). ಮನುಷ್ಯ ಕಲ್ಪಿತ ಸಭೆಗಳು ವಿಭಾಗ ಹೊಂದುತ್ತವೆ, ಕ್ರಿಸ್ತನ ಸಭೆಗಳು ಐಕ್ಯತೆ ಹೊಂದಿರುತ್ತವೆ.



## 7. ಹೊಸ ಒಡಂಬಡಿಕೆ ಸಭೆಯು ಕಾರ್ಯದಲ್ಲಿ ದೈವಿಕವಾದದ್ದು

**(The New Testament Church is Divine in Mission)**

ಹೊಸ ಒಡಂಬಡಿಕೆಯಲ್ಲಿ ನಮಗೆ ಕಾಣಸಿಗುವ ಸಭೆಯು ಕಾರ್ಯದಲ್ಲಿ ದೈವಿಕವಾದದ್ದು. ಆ ಕಾರ್ಯ ಮೂರು ರೀತಿಯಾಗಿ ಇರುತ್ತದೆ, ಮತ್ತು ಕ್ರಿಸ್ತನ ಸಭೆಯೊಂದೆ ಈ ಕಾರ್ಯವನ್ನು ಹೊಂದಿರುತ್ತದೆ. ಮಾನವ ಕಲ್ಪಿತ ಸಭೆಗಳು, ಸಂಸ್ಥೆಗಳು ಈ ಕಾರ್ಯವನ್ನು ಮಾಡಲು ಪ್ರಯತ್ನ ಮಾಡಿದರೂ, ಅದನ್ನು ನಡೆಸುವುದರಲ್ಲಿ ವಿಫಲರಾಗುತ್ತಾರೆ. ಹೇಗೆಂದರೆ ಅವು ಯೇಸುಕ್ರಿಸ್ತನಿಂದ ನಿರ್ಮಿಸಲ್ಪಟ್ಟ ಸಭೆಗಳು ಅಲ್ಲ. ಅವುಗಳಿಗೆ ಆತನು ತನ್ನ ಬಾಧ್ಯತೆಯನ್ನು ಒಪ್ಪಿಸಿಕೊಟ್ಟಿಲ್ಲ.

ಸಭೆಯ ದೈವಿಕ ಕಾರ್ಯ, ರಾಜಕೀಯ ಪರವಾದದ್ದಲ್ಲ. ಅದು ಪ್ರಭುತ್ವಕ್ಕೆ (ಕಾನೂನಿನಿಗೆ) ವಿರುದ್ಧವಾಗಿ ಕೆಲಸಮಾಡುವುದಿಲ್ಲವಾದರೂ ಅದರ ಮೇಲೆ ಪ್ರಭಾವ ಬೀರುತ್ತದೆ. ಅದರ ಕಾರ್ಯ ಸಾಂಘಿಕವಲ್ಲದ್ದಾದರೂ ಕೂಡ ಸಮಾಜದಲ್ಲಿ ಪರಸ್ಪರ ಸಂಬಂಧಗಳ ಕ್ಷೇಮಕ್ಕಾಗಿ ಮಾಡುತ್ತದೆ. ಸಭೆಯ ಕಾರ್ಯ ಲೌಕಿಕವಲ್ಲದ್ದಾದರೂ ಅದು ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳನ್ನು ಸರಿಪಡಿಸುತ್ತದೆ. ಅದರ ಕಾರ್ಯ ಭೌತಿಕವಾದದ್ದಲ್ಲ. ಅದು ಭೌತಿಕ ಸಂಗತಿಗಳನ್ನು ವಿಸರ್ಜಿಸುತ್ತದೆ. ಸಭೆಯ ದೈವಿಕ ಕಾರ್ಯಗಳೆಲ್ಲವೂ ಆತ್ಮೀಯ ವಾದವುಗಳು. ಯೇಸು ಮಾಡುವುದಕ್ಕೂ, ಉಪದೇಶಿಸುವುದಕ್ಕೂ, ಕುರಿತ ಸಂಗತಿಗಳನ್ನು ಕುರಿತು ಅದು ಆಲೋಚನೆ ಹೊಂದಿರುತ್ತದೆ (ಅ.ಕೃ. 1:1). ಯೇಸುಕ್ರಿಸ್ತನ ಕೆಲಸವೆ (ಲೂಕಾ 19:10) ಅಪೊಸ್ತಲರ ಕೆಲಸವಾಯಿತು (ಮತ್ತಾಯ 28:18–20). ಅದು ಯುಗ ಯುಗಗಳಿಗೂ ಕ್ರೈಸ್ತರ ಕೆಲಸವಾಗಿದೆ (2ತಿಮೊಥೆ 2:2). ಅಪೊಸ್ತಲರ ಕೃತ್ಯಗಳು ಪುಸ್ತಕವು ಮುಖ್ಯವಾಗಿ ಮೊದಲನೇ ಶತಮಾನದ ಸಭೆಯ ಕಾರ್ಯದ (ಕೆಲಸ) ಚರಿತ್ರೆಯಾಗಿದೆ.

### ಕಾರ್ಯ ಮಾಡುವುದು ಸಾಧ್ಯವೇ?

ಕ್ರಿಸ್ತನು ತನ್ನ ಸಭೆಗೆ ಒಪ್ಪಿಸಿದ ಕಾರ್ಯ ಸಾಧ್ಯವೇ. ಆ ಕಾರ್ಯವನ್ನು ಸಾಧಿಸಬೇಕಾದ ಬಾಧ್ಯತೆ ಸಭೆಯ ಮೇಲಿದೆ. ಎಲ್ಲಾದಕ್ಕಿಂತ ಮುಖ್ಯವಾಗಿ ನಶಿಸಲ್ಪಟ್ಟವರನ್ನು ರಕ್ಷಿಸುವುದು ಕ್ರಿಸ್ತನ ಸಭೆಯ ಕಾರ್ಯವಾಗಿದೆ (ಮಾರ್ಕ 16:15–16; ಯಾಕೋಬ 5:19–20). ಸಭೆಯ ಒಳಗಡೆಯೂ, ಸಭೆಯ

ಹೊರಗಡೆಯೂ ಇರುವವರನ್ನು ಅದು ರಕ್ಷಿಸಲು ಕಾರ್ಯ ಮಾಡಬೇಕು. ಸುವಾರ್ತೆ ಪ್ರಕಟಣೆ ಎಂಬುದು ಸಭೆಯ ಒಂದು ಗುರುತು, ಮುಖ್ಯವಾದ ಜವಬ್ದಾರಿ ಆಗಿದೆ. ಸುವಾರ್ತೆ ಪ್ರಕಟಿಸದೇ ಇರುವ ಯಾವ ಸಭೆಯೂ ಕೂಡ ಹೊಸ ಒಡಂಬಡಿಕೆಯ ಸಭೆಯಾಗಿರಲಾರದು.

ಯೇಸುಕ್ರಿಸ್ತನ ಕಾಲದ ಜನರ ಜೀವಿತ ಕಾಲದಲ್ಲಿಯೇ ಲೋಕದಲ್ಲೆಲ್ಲಾ ಸುವಾರ್ತೆ ಪ್ರಕಟಿಸಲ್ಪಡುತ್ತದೆ ಎಂದು ಯೇಸು ಹೇಳಿದನು (ಲೂಕಾ 24:14). ಅಪೊಸ್ತಲನಾದ ಪೌಲನು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಎರಡು ಸಾರಿ ಕರ್ತನ ಮಾತುಗಳನ್ನು ಬಳಸಿದ್ದಾನೆ (ಕೊಲೊಸ್ಸೆ 1:6,23). ಮೊದಲನೇ ಶತಮಾನದ ಪ್ರಚಾರ ಸಾಧನಗಳು ಪರಿಮಿತಿಯಾಗಿದ್ದರೂ, ಲೋಕದಲ್ಲೆಲ್ಲಾ ಸುವಾರ್ತೆ ಕಾರ್ಯ ನಡೆಸುವುದು ಸುವುದು ಸಾಧ್ಯವಾಯಿತು. ಇಂದು ಅತ್ಯಾಧುನಿಕ ಪ್ರಚಾರಸಾಧನಗಳು ಅನೇಕ ಇವೆ. ಇದರಿಂದ ಪ್ರತಿ ಯುಗದಲ್ಲಿಯೂ ಲೋಕದಲ್ಲೆಲ್ಲಾ ಸುವಾರ್ತೆ ಇನ್ನಷ್ಟು ಸುಲಭವಾಗಿ ಪ್ರಕಟಿಸಲು ಇಂದಿನ ಕ್ರಿಸ್ತನ ಸಭೆಗೆ ಸಾಧ್ಯವೇ.

ಸಭೆಯ ಕ್ಷೇಮಾಭಿವೃದ್ಧಿ, ಇತರರ ಬಗ್ಗೆ ಉಪಕಾರ ಕಾರ್ಯಗಳನ್ನು ಮಾಡುವುದು ಸಭೆಯ ಇತರ ಎರಡು ಜವಬ್ದಾರಿಗಳಾಗಿವೆ (1ಕೊರಿ 14:12; ಗಲಾತ್ಯ 6:10; ಅ.ಕೃ.6:1–7). ಈ ಎರಡು ಕ್ರಿಯೆಗಳು ಕೂಡ ಸುವಾರ್ತೆ ಪ್ರಕಟಣೆಗೆ ಪರೋಕ್ಷವಾಗಿ ಸಹಾಯವಾಗುತ್ತವೆ. ಸಭೆಯು ಮಾಡಬೇಕಾದದ್ದು ಯಾವುದಾದರೂ ಅದು ಈ ಮೂರರಲ್ಲಿ ಯಾವುದೋ ಒಂದು ಭಾಗಕ್ಕೆ ಸೇರುತ್ತದೆ.

ಸಭೆಯು ಆತ್ಮೀಯವಾಗಿ ಎಚ್ಚರಿಸಲ್ಪಟ್ಟರೆ ಮಾತ್ರ ಅದಕ್ಕೆ ಕ್ಷೇಮಾಭಿವೃದ್ಧಿ ಉಂಟಾಗುತ್ತದೆ. ಸಭೆಯಲ್ಲಿನ ಪ್ರತಿ ಸದಸ್ಯನು ಸಭೆಯ ಕೆಲಸದಲ್ಲಿ ಪಾತ್ರ ಹೊಂದಿದವನಾಗಿರಬೇಕು. ವಿಷಯವೇನಂದರೆ ಮೊದಲನೇ ಶತಮಾನದ ಹಾಗೆಯೇ ಇಂದಿಗೂ ಅನೇಕರು ಆತ್ಮೀಯವಾಗಿ ಬೆಳೆಯುವುದರಲ್ಲಿ ಹಿಂದುಳಿದಿದ್ದಾರೆ (ಇಬ್ರಿಯ 5:11–6:2). ಪ್ರತಿಯೊಬ್ಬನಿಗೆ ಆತ್ಮೀಯಾಭಿವೃದ್ಧಿ ಹೊಂದಲು ಮಾರ್ಗವು ದೊರೆಯುತ್ತಿದೆ. "ನಾನೀಗ ನಿಮ್ಮನ್ನು ಕರ್ತನಿಗೂ, ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿ ಯನ್ನುಂಟುಮಾಡುವುದಕ್ಕೂ, ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು



ಅನುಗ್ರಹಿಸುವುದಕ್ಕೂ ಶಕ್ತನಾಗಿದ್ದಾನೆ (ಅ.ಕೃ. 20:32). "ಎಲ್ಲಾ ತರದ ನಿಂದೆಯನ್ನು ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧಹಾಲನ್ನು ಬಯಸಿರಿ, ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ" (1ಪೇತ್ರ 2:2). ಕ್ರಿಸ್ತಿಯ ಕೃಪಾವರಗಳು, ಲೇಖನಗಳು ನಾವು ಆತ್ಮೀಯವಾಗಿ ಬೆಳೆಯಲು ಸಹಾಯವಾಗುತ್ತವೆ (2ಪೇತ್ರ 1:5–10; 2ತಿಮೋಥೆ 3:16–17). ಒಬ್ಬನು ಆತ್ಮೀಯವಾಗಿ ಅಭಿವೃದ್ಧಿ ಹೊಂದಿದ್ದರೆ ಕ್ರೈಸ್ತರಲ್ಲದವರು ಕೇಳುವ ಪ್ರಶ್ನೆಗಳಿಗೆ ತಕ್ಕ ರೀತಿಯಾಗಿ ಉತ್ತರಕೊಡುವನು (1ಪೇತ್ರ 3:15).

ಸಭೆಯಲ್ಲಿಯೂ, ಸಭೆಯ ಹೊರಗಡೆಯೂ ಇರುವ ಮೊದಲನೆಯ ಶತಮಾನದ ಸಭೆಯು ದಾತೃತ್ವವನ್ನು ತೋರಿಸುತ್ತದೆ. ಹೊಸದಾಗಿ ಸಭೆಯು ಸ್ಥಾಪಿಸಲ್ಪಟ್ಟಾಗ ಕ್ರೈಸ್ತರಾದವರ ಅವಶ್ಯಕತೆಗಳನ್ನು ಯೆರೂಸಲೇಮಿನಲ್ಲಿನ ಸಭೆಯ ಸದಸ್ಯರ ಕಾಣಿಕೆಯಿಂದ ಸಭೆಯು ತೀರಿಸಿತು (ಅ.ಕೃ. 2:44–45; 14:34–35). ಯೂದಾಯದಲ್ಲಿ ದೊಡ್ಡ ಕ್ಷಾಮವು ಬಂದಾಗ ಅಂತಿಯೋಕ್ಯದಲ್ಲಿ ಇರುವ ಸಭೆಯ ಸದಸ್ಯರ ಕಾಣಿಕೆಯಿಂದ ಅವರಿಗೆ ಸಹಾಯ ಮಾಡಲ್ಪಟ್ಟಿತು (ಅ.ಕೃ. 11:27–30). ಅದೇ ರೀತಿಯಾಗಿ ಮೆಕೆದೋನ್ಯ, ಅಖಾಯದಲ್ಲಿದ್ದ ಸಭೆಗಳು ಯೆರೂಸಲೇಮಿನಲ್ಲಿದ್ದವರಿಗೆ ಆರ್ಥಿಕ ಸಹಾಯವನ್ನು ಮಾಡಿದರು (ರೋಮಾ15:25–26). ಗಲಾತ್ಯ 6:10ರ ಪ್ರಕಾರ ಸಭೆಯ ಹೊರಗಡೆ ಇದ್ದವರಿಗೆ ಕೂಡ ನಾವು ಸಹಾಯ ಮಾಡಬೇಕು. ಮೊದಲು ನಂಬಿಗಸ್ಥರಿಗೆ ನಂತರ ಇತರರಿಗೆ ಸಭೆಯು ಸಹಾಯ ಪಡುತ್ತದೆ. "ಆದುದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೆದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:15).

### ಸಭೆಯ ಕೆಲಸದಲ್ಲಿ ಇರದ ಕೆಲವು ಸಂಗತಿಗಳು:–

ಸಭೆಯ ಕೆಲಸದಲ್ಲಿ ಇರದ ಕೆಲವು ಸಂಗತಿಗಳಿವೆ. ಅವು ದೇವರೇ ಏರ್ಪಾಟು ಮಾಡಿದ ಮತ್ತು ದೈವಿಕ ಸಂಸ್ಥೆಯಂತಿರುವ ಮನೆಯ ಜವಬ್ದಾರಿಯಾಗಿವೆ. ಉದಾಹರಣೆಗೆ, ವಿನೋದವು ಮನೆಯಲ್ಲಿ ಜರುಗಿಸುವ ಕೆಲಸ, ಸಭೆಯಲ್ಲಿ ಅಲ್ಲ. ಅದೇ ರೀತಿಯಾಗಿ ವಿದ್ಯೆ, ವಿವಾಹ , ಅಂತ್ಯಕ್ರಿಯೆಗಳು ಮುಂತಾದವುಗಳು ಮನೆಯ ಜವಬ್ದಾರಿಗಳಾಗಿವೆ.

ಕೆಲವು ಸಂಗತಿಗಳು ವ್ಯಕ್ತಿಗತವಾಗಿಯೂ, ಆಯಾ ಸಂಸ್ಥೆಗಳ

ಮುಖಾಂತರವು, ಇಲ್ಲವೇ ಅಧಿಕಾರದ ಮುಖಾಂತರವೂ ನಡಸಲ್ಪಡುವವು ಆಗಿರುವುದರಿಂದ ಅಂತಹವುಗಳು ಸಭೆಯ ಕೆಲಸದೊಳಗೆ ಬರುವುದಿಲ್ಲ. ಹೊಸ ಒಡಂಬಡಿಕೆ ಸಭೆಯು ತನ್ನ ಕಾರ್ಯಗಳನ್ನು ಸಭೆಯ ಸದಸ್ಯರು ಕೊಡುವ ಕಾಣಿಕೆಗಳ ಮುಖಾಂತರ ಮಾಡಬೇಕಾದದ್ದರಿಂದ ವ್ಯಾಪಾರದ ದಲ್ಲಾಳಿಗಳು ಸಭೆಯ ಭಾಗ ಆಗಲಾರವು. (1ಕೊರಿಂಥ 16:1–2; 2ಕೊರಿಂಥ 9:6–7). ಅದೇ ರೀತಿಯಾಗಿ ಸಭೆಯು ರಾಜಕೀಯ ಕಾರ್ಯಕಲಾಪಗಳಲ್ಲಿ ತಲೆಹಾಕಬಾರದು.

**ಮಾನವ ಕಲ್ಪಿತ ಸಭೆಗಳಿಗೆ ದೈವಿಕ ಕಾರ್ಯಗಳೇನೂ ಇರುವುದಿಲ್ಲ:–**

ಯೇಸುವಿನ ಕಾಲದ ಯೆಹೂದ್ಯ ಮತದ ಗುರುಗಳು ತಮ್ಮ ಮತವನ್ನು ಮಾನವ ಇಷ್ಟಕ್ಕೆ ಅನುಕೂಲವಾಗಿ ಬದಲಾಯಿಸಿದ್ದನ್ನು, ದೇವರು ತೋರಿಸಿದ ಈ ಮಾರ್ಗಗಳನ್ನು ಅದಲು ಬದಲು ಮಾಡಲು ಯತ್ನಿಸುತ್ತಿರುವವರನ್ನು ಕುರಿತು ಹೇಳುತ್ತಾ ಯೇಸು "ಪರಲೋಕದಲ್ಲಿರುವ ನನ್ನ ತಂದೆಯು ನೆಡದೇ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವವವು"(ಮತ್ತಾಯ 15:13). ಅದಕ್ಕೆ ಕೆಲವು ವಚನಗಳ ಮುಂದೆ ಮಾನವ ಕಲ್ಪಿತ ಬೋಧನೆಗಳನ್ನು ಯೇಸು ಖಂಡಿಸಿದನು.

"ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬದೇ"(ಮತ್ತಾಯ 15:7–9).

ಬೈಬಲ್ ಪ್ರಕಾರ ಒಂದೇ ಒಂದು ಸಭೆ ಇದೆ. ಸಭೆಯನ್ನು ಒಂದು ಶರೀರವಾಗಿ ಹೋಲಿಸುವ ಅನೇಕ ಲೇಖನ ಭಾಗಗಳ ಮೂಲಕ ಈ ಸತ್ಯವು ನಿರ್ಧಾರಿಸಲ್ಪಟ್ಟಿದೆ (ರೋಮಾ 12:4–5; 1ಕೊರಿಂಥ 12:12–13; ಎಫೆಸ1:22–23; ಕೊಲೊಸ್ಸೆ 1:18). ಈ ವಚನಗಳೆಲ್ಲವೂ ಸಭೆಯು ಶರೀರವಾಗಿದೆಯೆಂದು, ಅದು ಒಂದೇ ಒಂದು ಎಂದು ವರ್ಣಿಸುತ್ತಿವೆ. "ನೀವೆಲ್ಲರು ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು" (ಎಫೆಸ 4:4)

ಯೇಸು ಒಂದೇ ಒಂದು ಸಭೆಯನ್ನು ನಿರ್ಮಿಸಲು ವಾಗ್ದಾನ ಮಾಡಿದನು. ಅದು ಆತನ ಸಭೆಯು (ಮತ್ತಾಯ 16:18). ಈ ಒಂದೇ ಸಭೆಯು ದೇವರ



ಮನಸ್ಸಿನಲ್ಲಿ ಆರಂಭವಾಯಿತು. ಮತಶಾಖೆಗಳು, ಆಯಾ ಮತ ಗುಂಪುಗಳು ಮೊದಲಾದವುಗಳೆಲ್ಲವೂ ಮನುಷ್ಯನ ಕಲ್ಪನೆಯಿಂದಾದವುಗಳು. ಅವು ದೇವರ ಸಂಕಲ್ಪದಲ್ಲಿ ಇಲ್ಲ (ಎಫೆಸ 3:10–11). ದೈವಿಕ ಆರಂಭವುಳ್ಳ ಸಭೆಯೇ ದೈವಿಕ ಕಾರ್ಯ ಹೊಂದಿರುತ್ತದೆ. ದೈವಿಕ ಕಾರ್ಯ ಮಾಡುತ್ತದೆ. ಮನುಷ್ಯ ಕಲ್ಪಿತ ಸಭೆಗಳು ಹೊಸ ಒಡಂಬಡಿಕೆಗೆ ವಿರುದ್ಧವಾದವುಗಳು. ಅವು ದೈವಿಕ ಕಾರ್ಯಗಳನ್ನು ಮಾಡಲಾರವು.

**ಮುಕ್ತಾಯ:–**

ಹೊಸ ಒಡಂಬಡಿಕೆ ಸಭೆಯು, ಅದರಲ್ಲಿರುವ ಸದಸ್ಯರು ದೈವಿಕ ಕಾರ್ಯವನ್ನು ಹೊಂದಿದ್ದಾರೆ. ಕರ್ತನ ಸಭೆಯ ಕಾರ್ಯವನ್ನು ಇತರರು ಯಾರೂ ಮಾಡಲು ಯತ್ನಿಸುವುದಿಲ್ಲ. ಮಾಡಲಾರರು. ಇಂದಿನ ದೇವಜನರು ತಮ್ಮ ಜವಬ್ದಾರಿಯನ್ನು ನಿರ್ವಹಿಸದಿದ್ದರೆ ಬೇರೊಬ್ಬರು ಯಾರೂ ನಿರ್ವಹಿಸುವುದಿಲ್ಲ. ಸಭೆಯು ಕಾರ್ಯವನ್ನು ಮಾಡುವ ಸಮಯವು ಇದೇ. ಕ್ರೈಸ್ತರು ಇಂದೊಂದು ಕಾರ್ಯವನ್ನು, ನಾಳೆ ಇನ್ನೊಂದು ಕಾರ್ಯವನ್ನು, ನಾಡಿದ್ದು ಬೇರೊಂದು ಕಾರ್ಯ ಮಾಡು ಎಂದು ಬೋದಿಸುವುದಿಲ್ಲ. ಬೈಬಲ್ ನಲ್ಲಿ ಹೇಳಿರುವ ಹೊಸ ಒಡಂಬಡಿಕೆ ಕಾರ್ಯ ಅತ್ಯಂತ ಪ್ರಾಮುಖ್ಯವಾದದ್ದು.

ಅಪೊಸ್ತಲನಾದ ಪೌಲನ ಹಾಗೆ ನಾವು ಕೂಡ ಹೀಗೆ ಹೇಳಬೇಕು, "ಹೀಗಿರುವುದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವುದಕ್ಕೆ ನಾನಂತೂ ಸಿದ್ದವಾಗಿದ್ದೇನೆ. ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆಯುಂಟುಮಾಡುವಂತದ್ದಾಗಿದೆ" (ರೋಮಾ 1:15–16)

## 8. ಹೊಸ ಒಡಂಬಡಿಕೆ ಸಭೆಯು ದೀಕ್ಷಾಸ್ನಾನ (ಬ್ಯಾಪ್ಟಿಸಂ)ದಲ್ಲಿ ದೈವಿಕವಾದದ್ದು

### (The New Testament Church is Divine in Baptism)

ವಿಧ ವಿಧವಾದ ದೀಕ್ಷಾಸ್ನಾನಗಳನ್ನು ಕುರಿತು ಬೈಬಲ್ ಹೇಳುತ್ತಿದೆ. ಪ್ರತಿ ದೀಕ್ಷಾಸ್ನಾನ ಅದರ ಕಾಲದಲ್ಲಿ ಪ್ರತ್ಯೇಕ ಪ್ರಯೋಜನೆಯನ್ನು ಹೊಂದಿಕೊಂಡಿದೆ. ಬೈಬಲ್ ಹೇಳುವ ಯಾವ ದೀಕ್ಷಾಸ್ನಾನ ಇಂದು ಪ್ರಯೋಜನಕಾರಿಯಾಗಿದೆ? ಮತ್ತು ಕ್ರೈಸ್ತವ ಶಾಖೆಗಳಲ್ಲಿ ಪ್ರತಿ ಶಾಖೆಯು ತಮ್ಮದೇ ದೀಕ್ಷಾಸ್ನಾನವನ್ನು, ಬೇರೆ ಬೇರೆ ಪ್ರಯೋಜನಗಳಿಗೆ ಕೊಡುತ್ತಿದ್ದಾರೆ. ಆದ್ದರಿಂದ ಇವುಗಳಲ್ಲಿ ಯಾವುದು ಬೈಬಲ್ ಪ್ರಕಾರವಾದದ್ದು? ಅವುಗಳಲ್ಲಿ ಯಾವುದಾದರೂ ವಾಕ್ಯಾನುಸಾರವಾಗಿ ಇದೆಯಾ? ಮತ್ತು ನಿಘಂಟುಗಳಲ್ಲಿ ದೀಕ್ಷಾಸ್ನಾನ ಅಂದರೆ ಪ್ರೋಕ್ಷಿಸುವುದು, ಚಿಮುಕಿಸುವುದು, ಮುಳುಗಿಸುವುದು, ಎಂದು ವಿವರಿಸಲ್ಪಟ್ಟಿದೆ. ಈ ವಿವರಣೆಯೊಂದಿಗೆ ಬೈಬಲ್ ಏಕೀಭವಿಸುತ್ತಿದೆಯಾ? ಕೆಲವರು ಪವಿತ್ರಾತ್ಮ ದೀಕ್ಷಾಸ್ನಾನಕ್ಕಾಗಿ ಎದುರು ನೋಡುತ್ತಾರೆ. ಆದರೆ ಇಂದು ಎಷ್ಟು ದೀಕ್ಷಾಸ್ನಾನಗಳಿವೆ? ಅವು ಏನು? ನಿಜವಾಗಿ ದೀಕ್ಷಾಸ್ನಾನದ ಉಪಯೋಗ ವೇನು? ದೀಕ್ಷಾಸ್ನಾನವು ಯಾವುದಾದರೂ ಪ್ರತ್ಯೇಕ ಉಪಯೋಗಕ್ಕಾಗಿ ಎಂದು ಬೈಬಲ್ ಹೇಳುತ್ತಿದೆಯಾ?

### ದೀಕ್ಷಾಸ್ನಾನ ಪದದ ಅರ್ಥ:–

ಕನ್ನಡ ಭಾಷೆಯಲ್ಲಿ ದೀಕ್ಷಾಸ್ನಾನ ಎಂದು ಉಲ್ಲೇಖಿಸಲಾಗಿದೆ. ಆದರೆ ಇದನ್ನು ಗ್ರೀಕ್ ಭಾಷೆಯಲ್ಲಿ "ಬ್ಯಾಪ್ಟಿಜೋ" ಎಂದು ಬಳಸಲಾಗಿದೆ. ಬ್ಯಾಪ್ಟಿಜೋ ಎಂಬ ಗ್ರೀಕ್ ಪದವನ್ನು ದೀಕ್ಷಾಸ್ನಾನ ಎಂದು ಕನ್ನಡದಲ್ಲಿ ಅನುವಾದಿಸಲಾಗಿದೆ. ಅದನ್ನು ನಿಜವಾಗಿ ಮುಳುಗಿಸುವುದು, ಮುಳುಗಿಸಲ್ಪಡುವುದು, ಸಂಪೂರ್ಣ ವಾಗಿ ಮುಳುಗುವಹಾಗೆ ಮಾಡುವುದು ಎಂದು ಅನುವಾದಿಸಬೇಕಾಗಿತ್ತು.

ಮೊದಲನೆಯ ಅರ್ಥವನ್ನು ಹಿಡಿದೂ, ಲೇಖನಾನುಸಾರವಾದ ಅರ್ಥವನ್ನು ಹಿಡಿದೂ, ದೀಕ್ಷಾಸ್ನಾನ ಎಂದರೆ ನೀರಿನಲ್ಲಿ ಮುಳುಗಿಸಲ್ಪಡುವುದು ಎಂದು ನಿಶ್ಚಯವಾಗಿ ಹೇಳಬಹುದು. ಸ್ನಾನಿಕನಾದ ಯೋಹಾನನು ವಿಸ್ತಾರವಾದ ನೀರಿರುವ ಕಡೆ ದೀಕ್ಷಾಸ್ನಾನ ಕೊಟ್ಟನು (ಮತ್ತಾಯ 3:11; ಯೋಹಾನ 3:23; ಅ.ಕೃ.1:5). ಆದಿ ಸಭೆಯೂ ಕೂಡ ನೀರಿನಲ್ಲಿಯೇ



ದೀಕ್ಷಾಸ್ನಾನ ಕೊಟ್ಟರು (ಅ.ಕೃ.8:36 10:47–48). ಈ ದೀಕ್ಷಾಸ್ನಾನ ಒಂದು ಸಮಾಧಿ ಎಂದೂ, ಹೂಣಿಡುವುದು ಎಂದೂ ಅಂದರೆ ಮುಳುಗಿಸುವುದು ಎಂದು ಹೇಳಲ್ಪಟ್ಟಿದೆ. ಅದು ಪ್ರೋಕ್ಷಿಸುವುದು ಎಂದಾಗಲಿ, ಚಿಮುಕಿಸುವುದು ಎಂದಾಗಲಿ ಅಲ್ಲ (ರೋಮಾ 6:3–5; ಕೂಲೊಸ್ಸೆ 2:12). ಸ್ನಾನಿಕನಾದ ಯೋಹಾನ, ಆತನ ಶಿಷ್ಯರು ಕೂಡ ನೀರಿನಲ್ಲಿ ದೀಕ್ಷಾಸ್ನಾನ ಕೊಟ್ಟರು (ಮತ್ತಾಯ 3:11; 9:14). ಯೇಸು ಕ್ರಿಸ್ತನ ಶಿಷ್ಯರು, ಅಪೊಸ್ತಲರು ಮುಂತಾದವರು ಕೂಡ ನೀರಿನಲ್ಲಿ ದೀಕ್ಷಾಸ್ನಾನ ಕೊಟ್ಟರು (ಅ.ಕೃ.2:38; 12:36; 16:15,33; 18:8; 19:5; 1ಕೊರಿಂಥ 1:14–16).

### ಹಿಂದಿನದಿನಗಳಲ್ಲಿಯೂ, ಪ್ರಸ್ತುತ ದಿನಗಳಲ್ಲಿಯೂ ನೀರಿನ ದೀಕ್ಷಾಸ್ನಾನ:–

ಯೆಹೂದ್ಯರ ಅಂತ್ಯದಿನಗಳಲ್ಲಿ ದೇವರ ಪ್ರವಾದಿಯಾದ ಒಬ್ಬನು ನೀರಿನಲ್ಲಿ ದೀಕ್ಷಾಸ್ನಾನ ಕೊಡಲು ಬಂದನು. ಅದು ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನ ಎನಿಸಲ್ಪಟ್ಟಿತು. (ಅ.ಕೃ.18:25,19:3). ಈ ನೀರಿನ ದೀಕ್ಷಾಸ್ನಾನವನ್ನು ಯೋಹಾನನ ಶಿಷ್ಯರು, ಯೇಸುವಿನ ಶಿಷ್ಯರು ಕೂಡ ಅಂಗೀಕರಿಸಿದರು. ಸ್ನಾನಿಕನಾದ ಯೋಹಾನನು ಏನು ಮಾಡಿದರೂ, ಅದು ಮುಂಬರಲಿರುವ ಮೆಸ್ಸೆಯ್ಯನಿಗಾಗಿಯೂ, ಆತನ ರಾಜ್ಯಕ್ಕಾಗಿಯೂ ಮಾರ್ಗವನ್ನು ಸಿದ್ಧಮಾಡುವುದಕ್ಕಾಗಿ ಮಾಡಿದನು. (ಮತ್ತಾಯ 3:1–6).

ಜನರು ಮಾನಸಾಂತರ ಹೊಂದಿ ದೀಕ್ಷಾಸ್ನಾನ ತೆಗೆದುಕೊಳ್ಳಬೇಕೆಂದು ಯೋಹಾನನು ಎಚ್ಚರಿಸಿದನು (ಮಾರ್ಕ 1:4). ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆ ಇಡಬೇಕೆಂಬುದಾಗಿ ಆತನು ಎಚ್ಚರಿಸಿದನು (ಅ.ಕೃ. 19:4).

ಇದು ಸಿದ್ಧಮಾಡುವ ದೀಕ್ಷಾಸ್ನಾನ, ಇದು ತಾತ್ಕಾಲಿಕವಾದದ್ದು. ಸಭೆಯು ಸ್ಥಾಪಿಸಲ್ಪಡುವುದಕ್ಕಿಂತ ಮುಂಚೆಯೇ ಅದು ಜಾರಿಯಲ್ಲಿತ್ತು (ಅ.ಕೃ.19:1–6). ಯೇಸುಕ್ರಿಸ್ತನ ಮರಣ, ಸಮಾಧಿ, ಪುನರುತ್ಥಾನಕ್ಕೆ ಸಮಾನವಾಗಿ ಉಂಟಾಗುವ ರಕ್ಷಣೆಯನ್ನುದ್ದೇಶಿಸಿ ಯೋಹಾನನು ಮಾನಸಾಂತರದ ನಿಮಿತ್ತವಾಗಿ ದೀಕ್ಷಾಸ್ನಾನ ಕೊಟ್ಟನು. ಪಿತೃಗಳ ಕಾಲದಲ್ಲಿಯೂ, ಯಹೂದ್ಯರ ಕಾಲದಲ್ಲಿಯೂ ಜೀವಿಸಿದವರಿಗೆ ಕ್ರಿಸ್ತನ ಪುನರುತ್ಥಾನದ ಮೂಲಕ ಹೇಗೆ ಬಿಡುಗಡೆ ಉಂಟಾಯಿತೋ, ಹಾಗೆಯೇ ಯೋಹಾನನಿಂದ ದೀಕ್ಷಾಸ್ನಾನ ಹೊಂದಿದವರು ಕೂಡ ಬಿಡುಗಡೆ ಹೊಂದಿಕೊಂಡರು (ಇಬ್ರಿಯ 10:4; 9:15).

ಅಪೊಸ್ತಲರ ಕೃತ್ಯಗಳು ಎರಡನೇ ಅಧ್ಯಾಯದ ನಂತರ ಜಾರಿಯಲ್ಲಿರುವುದೆಲ್ಲಾ ಯೇಸು ಕೊಟ್ಟ ಶ್ರೇಷ್ಠ ಆಜ್ಞೆಯ ಪ್ರಕಾರವಾದ ದೀಕ್ಷಾಸ್ನಾನ. ಅ.ಕೃ.19:1–6ರಲ್ಲಿ ಶಿಷ್ಯರಿಗೆ ಯೋಹಾನನ ದೀಕ್ಷಾಸ್ನಾನ ಮಾತ್ರವೇ ಗೊತ್ತಿರುವುದರಿಂದ ಅವರು ಶ್ರೇಷ್ಠ ಆಜ್ಞೆಯ ಪ್ರಕಾರವಾದ ದೀಕ್ಷಾಸ್ನಾನ ತೆಗೆದುಕೊಳ್ಳಬೇಕಾಯಿತು.

ಯೇಸು ಯೋಹಾನನಿಂದ ಹೊಂದಿದ ನೀರಿನ ದೀಕ್ಷಾಸ್ನಾನವು ಏಕೈಕವಾದದ್ದು. ಮಾನಸಾಂತರ ಹೊಂದಿ ತಮ್ಮ ಪಾಪಗಳನ್ನು ಒಪ್ಪಿಕೊಂಡವರಿಗೆ ಯೋಹಾನನು ದೀಕ್ಷಾಸ್ನಾನ ಕೊಟ್ಟನು. ಮಾನಸಾಂತರ ಹೊಂದಿಕೊಳ್ಳುವುದಕ್ಕೆ, ಒಪ್ಪಿಕೊಳ್ಳುವುದಕ್ಕೆ ಯೇಸು ಯಾವ ಪಾಪವನ್ನೂ ಮಾಡಿರಲಿಲ್ಲ. ಮತ್ತಾಯ 3:15ರಲ್ಲಿ ಯೇಸು ಯಾವುದಕ್ಕಾಗಿ ದೀಕ್ಷಾಸ್ನಾನ ಹೊಂದಿದನು, ಅಂದರೆ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಲ್ಪಟ್ಟಿದೆ (ಮತ್ತಾಯ 3:13–17). ಯೇಸುವನ್ನು ಅನುಸರಿಸುತ್ತಾ ನಾವು ದೀಕ್ಷಾಸ್ನಾನ ಹೊಂದಬೇಕೆ ಹೊರತು ಆತನು ಅದನ್ನು ಹೊಂದಿದ ಕಾರಣಕ್ಕಾಗಿ ಯಾರೂ ದೀಕ್ಷಾಸ್ನಾನ ಹೊಂದುವುದಿಲ್ಲ. ಮಾನಸಾಂತರ ಹೊಂದುವುದಕ್ಕೆ ಆತನು ಯಾವ ಪಾಪವನ್ನು ಮಾಡಿರಲಿಲ್ಲ.

ಶ್ರೇಷ್ಠ ಆಜ್ಞೆಯ ಪ್ರಕಾರವಾದ ದೀಕ್ಷಾಸ್ನಾನ ಮೊದಲು ಅ.ಕೃ. ಎರಡನೇ ಅಧ್ಯಾಯದಲ್ಲಿ ಪ್ರಕಟಿಸಲ್ಪಟ್ಟಿತು (ಮತ್ತಾಯ 28:18–20; ಮಾರ್ಕ 16:15–16; ಲೂಕ24:46–47). ಹೊಸ ಒಡಂಬಡಿಕೆಯಲ್ಲೆಲ್ಲಾ ಈ ಅಂಶವು ಬೋಧಿಸಲ್ಪಟ್ಟಿತು(ಅ.ಕೃ. 2:38, 8:36–38, 10:47–48, 22:16; 1ಪೇತ್ರ3:20–23). ಆದ್ದರಿಂದ ಎಫೆಸ 4:5ರಲ್ಲಿ ಹೇಳಲ್ಪಟ್ಟ ಹಾಗೆ ಒಂದೆ ಸ್ನಾನದೀಕ್ಷೆಯೇ ಮೊದಲನೇ ಶತಮಾನದಿಂದ ಯೇಸು ಪುನಃ ಬರುವವರೆಗೆ ಜಾರಿಯಲ್ಲಿ ಇರುವ ದೀಕ್ಷಾಸ್ನಾನವಾಗಿದೆ. ಅದು ಮಾನಸಾಂತರ ಹೊಂದಿದ ನಂಬಿಗಸ್ತನು ಪಾಪಕ್ಷಮಾಪಣೆಯ ನಿಮಿತ್ತ ಹೊಂದುವ ಏಕೈಕ ದೀಕ್ಷಾಸ್ನಾನವಾಗಿದೆ. ಅದು ತಂದೆಯ, ಕುಮಾರನ, ಪವಿತ್ರಾತ್ಮನ ಅಧಿಕಾರದಿಂದ ಕೊಡುವ ದೀಕ್ಷಾಸ್ನಾನ. ಅದರ ಉದಾಹರಣೆಗಳು ಹೊಸ ಒಡಂಬಡಿಕೆಯಲ್ಲಿ ನಮಗೆ ಅನೇಕವು ಕೊಡಲ್ಪಟ್ಟಿವೆ. ಪಾಪಕ್ಷಮಾಪಣೆ ನಿಮಿತ್ತವಲ್ಲದೆ ಬೇರೆ ಕಾರಣಗಳಿಗಾಗಿ ಹೊಂದುವ ಯಾವ ದೀಕ್ಷಾಸ್ನಾನವು ಪ್ರಯೋಜನವಾದದ್ದಲ್ಲ. ಮತಶಾಖೆಗಳಲ್ಲಿ ಸೇರಲು ಹೊಂದುವ ದೀಕ್ಷಾಸ್ನಾನವು ನಿಷ್ಪ್ರಯೋಜನವಾದದ್ದು.



**ಛಾಯಾರೂಪವಾದ ದೀಕ್ಷಾಸ್ನಾನಗಳು ಹಿಂದಿನ ಕಾಲದಲ್ಲಿಯೂ, ಈಗಿನ ಕಾಲದಲ್ಲಿಯೂ:–**

ಇಸ್ರಾಯೇಲ್ಯರು ಐಗುಪ್ತ ದೇಶದ ದಾಸತ್ವದಿಂದ ಬಿಡುಗಡೆ ಹೊಂದಿದ ನಂತರ ಕೆಂಪು ಸಮುದ್ರವನ್ನು ದಾಟುತ್ತಿರುವಾಗ ಅವರು ಸಾದೃಶ್ಯರೂಪವಾದ ದೀಕ್ಷಾಸ್ನಾನ ಹೊಂದಿದ ಹಾಗೆ ಹೇಳಲ್ಪಟ್ಟಿದೆ. "ನಮ್ಮ ಪಿತೃಗಳೆಲ್ಲರೂ, ಮೇಘದ ನೆರಳಿನಲ್ಲಿದ್ದರು; ಅವರೆಲ್ಲರು ಸಮುದ್ರವನ್ನು ದಾಟಿ ಹೋದರು ಅವರೆಲ್ಲರು ಮೋಶೆಯ ಶಿಷ್ಯರಾಗುವುದಕ್ಕಾಗಿ ಮೇಘದಲ್ಲಿಯೂ, ಸಮುದ್ರದಲ್ಲಿಯೂ ದೀಕ್ಷಾ ಸ್ನಾನ ಹೊಂದಿದರು" (1ಕೊರಿಂಥ 10:1–2). ದೀಕ್ಷಾಸ್ನಾನದ ಛಾಯಾ ರೂಪ ವಾದ ಅರ್ಥವು ಸಂಪೂರ್ಣವಾಗಿ ಆವರಿಸುವುದೆಂದು ಹೇಳಬಹುದು. ಇಸ್ರಾ ಯೇಲ್ಯರೆಲ್ಲರೂ, ಈ ಸಂದರ್ಭದಲ್ಲಿ ಸಂಪೂರ್ಣವಾಗಿ ನೀರಿನಲ್ಲಿ ಆವರಿಸಲ್ಪಟ್ಟರೆಂದು ಹೇಳಬಹುದು. ಅವರು ಎರಡೂ ಕಡೆ ಕೆಂಪು ಸಮುದ್ರವನ್ನು, ಮೇಲೆ ಮೇಘಗಳಲ್ಲಿ ಇರುವ ನೀರಿನಿಂದಲೂ, ಸಂಪೂರ್ಣ ವಾಗಿ ಆವರಿಸಲ್ಪಟ್ಟರು. ಈ ರೀತಿಯಾದ ದೀಕ್ಷಾಸ್ನಾನ ಇಂದು ಇಲ್ಲ.

ಶ್ರಮೆಗಳ ದೀಕ್ಷಾಸ್ನಾನವನ್ನು ಮೊದಲು ಯೇಸುಕ್ರಿಸ್ತನು ತದನಂತರ ಹತಸಾಕ್ಷಿಗಳಾದ ಆತನ ಶಿಷ್ಯರು ಹೊಂದಿದ್ದರು. ಮಾರ್ಕ 10:38–39ರಲ್ಲಿ ಯೇಸು ಇದನ್ನು ಅಲಂಕಾರ ಭಾಷೆಯಲ್ಲಿ ಹೀಗೆ ವರ್ಣಿಸಿದ್ದಾನೆ, "ಆದರೆ ಯೇಸು ಅವರನ್ನು– ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು; ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವುದು ನಿಮ್ಮಿಂದಾದೀತೆ? ನನಗಾಗುವ ದೀಕ್ಷಾಸ್ನಾನವನ್ನು ಹೊಂದುವುದು ನಿಮ್ಮಿಂದಾದೀತೆ ಎಂದು ಕೇಳಲು ಅವರು– ಆಗುವುದು ಅಂದರು. ಆಗ ಯೇಸು ಅವರಿಗೆ–ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿರಿ, ನನಗಾಗುವ ಸ್ನಾನವು ನಿಮಗಾಗುವುದು" ಎಂದು ಹೇಳಿದನು. ಇದೂ ಕೂಡ ಇಂದು ಜಾರಿಯಲ್ಲಿರುವ ಒಂದೆ ಒಂದು ದೀಕ್ಷಾಸ್ನಾನ ಅಲ್ಲ (ಎಫೆಸ 4:5).

ಸಾದೃಶ್ಯರೂಪವಾಗಿ ಹೇಳಲ್ಪಟ್ಟ ಇನ್ನೊಂದು ದೀಕ್ಷಾಸ್ನಾನವಿದೆ. ಅನೇಕರು ಅಜ್ಞಾನದಿಂದ ಅದಕ್ಕಾಗಿ ಪ್ರಾರ್ಥಿಸುತ್ತಾರೆ. ಅದು ಅಗ್ನಿಯ ದೀಕ್ಷಾಸ್ನಾನ. ಪವಿತ್ರಾತ್ಮ ದೀಕ್ಷಾಸ್ನಾನವನ್ನು ಕುರಿತು ಒಂದೇ ಸಂದರ್ಭದಲ್ಲಿ ಹೇಳಿರುವು ದರಿಂದ ಅನೇಕರು ಇದನ್ನು ಅಪಾರ್ಥ ಮಾಡಿಕೊಳ್ಳುತ್ತಾರೆ (ಮತ್ತಾಯ 3:11). ಅ.ಕೃ.2ರಲ್ಲಿ ಅಪೊಸ್ತಲರು ಪವಿತ್ರಾತ್ಮ ದೀಕ್ಷಾಸ್ನಾನ ಹೊಂದಿದಾಗ

ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು (ಅ.ಕೃ. 2:1–4). ಆದರೆ ಮತ್ತಾಯ 3:10–12ರಲ್ಲಿ ಹೇಳಿದ ಅಗ್ನಿ ಶಿಕ್ಷೆಯನ್ನು ಸೂಚಿಸುತ್ತಿರುವುದಾಗಿ ಹೇಳಲ್ಪಟ್ಟಿತು. ಯೋಹಾನನು ಹೀಗೆ ಹೇಳಿದನು "ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ; ಒಳ್ಳೆ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು, ನಾನಂತು ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನೂ ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ, ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ, ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋಧಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು" (ಮತ್ತಾಯ 3:10–12).

ನಾಶನವನ್ನುಂಟುಮಾಡುವ ಅಗ್ನಿಯನ್ನು ಕುರಿತು ಹೇಳಿದ ಈ ಮೂರು ವರ್ಣನೆಗಳು ನಿತ್ಯನರಕಾಗ್ನಿಯನ್ನು ಕುರಿತು ಹೇಳಲ್ಪಟ್ಟಿವೆ. ಸ್ನಾನಿಕನಾದ ಯೋಹಾನನು ಈ ಮಾತುಗಳನ್ನು ಹೇಳಿದಾಗ ಕೇಳಿದವರಲ್ಲಿ ಮಾನಸಾಂತರ ಹೊಂದಿ ಆತನ ಮೂಲಕ ದೀಕ್ಷಾಸ್ನಾನ ಹೊಂದಿದವರು (5–6ವಚನಗಳು), ಅಪೊಸ್ತಲರು, ಮಾರುಮನಸ್ಸು ಹೊಂದದ ಫರಿಸಾಯರು, ಸದ್ದುಕಾಯರು (7–8ವಚನ) ಇದ್ದರು. ಮತ್ತಾಯ 3:11ರಲ್ಲಿ ಮೂರು ದೀಕ್ಷಾಸ್ನಾನಗಳನ್ನು ಕುರಿತು ಹೇಳಲಾಗಿದೆ,

1. ಮಾನಸಾಂತರ ಹೊಂದಿ ಪಾಪಗಳನ್ನು ಒಪ್ಪಿಕೊಳ್ಳುತ್ತಿದ್ದವರಿಗೆ ಯೋಹಾನನು ಕೊಟ್ಟ ದೀಕ್ಷಾಸ್ನಾನ.
2. ಭವಿಷ್ಯದಲ್ಲಿ ಯೇಸುಕ್ರಿಸ್ತನಿಂದ ಅನುಗ್ರಹಿಸಲ್ಪಡುವ ಪವಿತ್ರಾತ್ಮನ ದೀಕ್ಷಾಸ್ನಾನ (ಯೋಹಾನ 14:16).
3. ಯುಗಾಂತ್ಯದಲ್ಲಿ ಕ್ರಿಸ್ತನು ಕೊಡುವ ಅಗ್ನಿಯ ದೀಕ್ಷಾಸ್ನಾನ (2ಥೆಸಲೋನಿಕ 1:7–9, ಮತ್ತಾಯ 25:41,46; ಪ್ರಕ 20:15).

ಸರಿಯಾಗಿ ಗ್ರಹಿಸಿಕೊಂಡರೆ ಯಾರೂ ಅಗ್ನಿಯ ದೀಕ್ಷಾಸ್ನಾನ ಬಯಸುವುದಿಲ್ಲ.



**ಪವಿತ್ರಾತ್ಮನ ದೀಕ್ಷಾಸ್ನಾನ, ಹಿಂದಿನ ಕಾಲದಲ್ಲಿ:–**

ಇಂದು ಲೆಕ್ಕವಿಲ್ಲದಷ್ಟು ಜನ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಬಯಸುತ್ತಾರೆ. ಅದು ಅವರಿಗೆ ಉಂಟಾಗುತ್ತದೆ ಎಂದು ನಂಬುತ್ತಾರೆ. ತದನಂತರ ಅನೇಕರು ನಾವು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದ್ದೇವೆ ಎಂದೂ, ತತ್ಫಲಿತಾಗಿ ಅದ್ಭುತವರಗಳನ್ನು, ಹೊಸ ಬಿಡುಗಡೆಯನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಯಾರು ಎಷ್ಟು ವಿಧವಾಗಿ ಹೇಳಿಕೊಂಡರೂ, ಪವಿತ್ರಾತ್ಮನ ದೀಕ್ಷಾಸ್ನಾನ ಈಗಾಗಲಿ, ಇನ್ನೆಂದಿಗೂ ದೊರೆಯುವುದಿಲ್ಲ ಎಂದು ಹೊಸ ಒಡಂಬಡಿಕೆ ಬೋಧಿಸುತ್ತಿದೆ. ಇಂದು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದ್ದೇವೆಂದು ಹೇಳಿಕೊಳ್ಳುವವರ ಮಾತು ಕೇವಲ ಗಾಳಿಮಾತುಗಳು, ಅವು ನಿರ್ಧರಿಸಲಾಗುವುದಿಲ್ಲ. ಅದನ್ನು ಹೊಂದಿದ್ದೇವೆಂದು ಹೇಳಿಕೊಳ್ಳುವವರು ನೂರಕ್ಕೆ ನೂರರಷ್ಟು ಮತಿಕೆಟ್ಟವರಾಗಿದ್ದಾರೆ.

ಯೇಸುಕ್ರಿಸ್ತನು ಪವಿತ್ರಾತ್ಮನ ದೀಕ್ಷಾಸ್ನಾನದ ವಾಗ್ದಾನ ಮಾಡಿದಾಗ ಇದ್ದವರು ಅಪೊಸ್ತಲರು ಮಾತ್ರವೇ. (ಯೋಹಾನ 14:16; ಅ.ಕೃ.2:1–4,7,14,42). ಪವಿತ್ರಾತ್ಮ ದೀಕ್ಷಾಸ್ನಾನ ಹೊಂದಿದವರೆಲ್ಲರೂ ಗಲಿಲಾಯದವರು (ಅ.ಕೃ.2:7). ಅಪೊಸ್ತಲನಾದ ಪೇತ್ರನೂ, ಉಳಿದ ಹನ್ನೊಂದು ಮಂದಿ ಶಿಷ್ಯರು ಮಾತ್ರವೇ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿ ಅನ್ಯಭಾಷೆಗಳಲ್ಲಿ ಮಾತನಾಡತೊಡಗಿದರು (ಅ.ಕೃ.2:4). ಪವಿತ್ರಾತ್ಮವೇಶದಿಂದ ಅವರು ಮಾಡಿದ ಉಪದೇಶವು ಅಪೊಸ್ತಲರ ಬೋಧನೆಯೆಂದು ಕರೆಯಲ್ಪಟ್ಟಿತು (ಅ.ಕೃ. 2:42).

ಪವಿತ್ರಾತ್ಮನ ದೀಕ್ಷಾಸ್ನಾನ 12ಮಂದಿ ಅಪೊಸ್ತಲರಿಗೆ ಪರಿಮಿತವಾದರೂ, ಅಪೊಸ್ತಲರಲ್ಲದವರಿಗೂ ಬೇರೆ ವಿಧವಾಗಿ ಅದ್ಭುತ ಶಕ್ತಿಯನ್ನು ಹೊಂದಿರುವುದನ್ನು ನಾವು ನೋಡಬಹುದು (ಅ.ಕೃ.8:14–17 19:1–6; ಅ.ಕೃ10–11 ಅಧ್ಯಾಯಗಳು). ಪವಿತ್ರಾತ್ಮನ ದೀಕ್ಷಾಸ್ನಾನ ಮತ್ತು ಇದರ ಅದ್ಭುತ ವರಗಳು ತಾತ್ಕಾಲಿಕ ಪ್ರಯೋಜನಕ್ಕಾಗಿ ದೇವರಿಂದ ಉದ್ದೇಶಿಸಲ್ಪಟ್ಟವುಗಳು. ಇವು ಬಾಲ್ಯದಶೆಯಲ್ಲಿ ಇರುವ ಸಭೆಗಾಗಿ ಅನುಗ್ರಹಿಸಲ್ಪಟ್ಟವು. ಅದ್ಭುತ ವರಗಳ ಉದ್ದೇಶವು ಸಾಧಿಸಲ್ಪಟ್ಟ ನಂತರ ಅದ್ಭುತ ವರಗಳು ನಿಂತುಹೋದವು (1ಕೊರಿಂಥ 13:8–13; ಎಫೆಸ 4:11–14). ಹೊಸ ಒಡಂಬಡಿಕೆ ಎಲ್ಲವೂ, ಸಂಪೂರ್ಣವಾಗಿ ದೇವರಿಂದ ಪ್ರಕಟಿಸಲ್ಪಟ್ಟ ನಂತರ ತಾತ್ಕಾಲಿಕವಾಗಿಯೂ, ಭಾಗಶಃವಾಗಿಯೂ ಅನುಗ್ರಹಿಸಲ್ಪಡುವ ತಿಳಿಯ ಪಡಿಸಿದವುಗಳೆಲ್ಲವೂ ಸಮಾಪ್ತಿ

ಯಾದವು. ಅದ್ಭುತ ವರಗಳನ್ನು ಹೊಂದಿದ ಅಪೊಸ್ತಲರು, ಹಿರಿಯರು, ಬೋಧಕರು ಮುಂತಾದವರ ಸ್ಥಾನದಲ್ಲಿ ಲಿಖಿತಪೂರ್ವಕವಾದ ಹೊಸ ಒಡಂಬಡಿಕೆ ಗ್ರಂಥವು ಕೊಡಲ್ಪಟ್ಟಿತು. ಅದನ್ನೇ ನಾವು ಇಂದು ಉಪಯೋಗಿಸುತ್ತಿದ್ದೇವೆ.

### ಮುಕ್ತಾಯ:–

ಹೊಸ ಒಡಂಬಡಿಕೆ ಸಭೆಯು ದೀಕ್ಷಾಸ್ನಾನದಲ್ಲಿ ದೈವಿಕವಾದದ್ದು. ಲೇಖನಗಳಲ್ಲಿ ಹೇಳಲಾಗಿರುವ ಅನೇಕ ದೀಕ್ಷಾಸ್ನಾನಗಳಲ್ಲಿ ಇಂದು ಏಕೈಕ ದೀಕ್ಷಾಸ್ನಾನವು ಜಾರಿಯಲ್ಲಿದೆ. ಕ್ರೈಸ್ತಯುಗದಲ್ಲಿ ತಂದೆ, ಮಗ, ಪವಿತ್ರಾತ್ಮನ ಹೆಸರಿನಲ್ಲಿ ಕೊಡುವ ದೀಕ್ಷಾಸ್ನಾನ, ಪಾಪ ಕ್ಷಮಾಪಣೆಗಾಗಿ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿಸುವ ದೀಕ್ಷಾಸ್ನಾನವೊಂದೇ ಇಂದು ಜಾರಿಯಲ್ಲಿದೆ. ಅದು ಯೇಸುಕ್ರಿಸ್ತನು ಕೊಟ್ಟ ಶ್ರೇಷ್ಠಾಜ್ಞೆಯಲ್ಲಿನ ದೀಕ್ಷಾಸ್ನಾನ (ಮತ್ತಾಯ 28:18–20). ಇಂದು ರಕ್ಷಿಸುವ ದೀಕ್ಷಾಸ್ನಾನ ಅದು ಮಾತ್ರ (1ಪೇತ್ರ3:21). ಮತ ಶಾಖೆಗಳಲ್ಲಿ ಸೇರಿಸುವ ನಿಮಿತ್ತವಾಗಿ ಈ ಮದ್ಯೆ ಆಚರಿಸುವ ದೀಕ್ಷಾಸ್ನಾನಗಳು, ಅವುಗಳ ಪ್ರಯೋಜನಗಳು ಬೇರೆ ಬೇರೆ. ಅವುಗಳನ್ನು ದೇವರು ಎಂದಿಗೂ ಒಪ್ಪಿಕೊಂಡಿಲ್ಲ. ಒಪ್ಪಿಕೊಳ್ಳುವುದೂ ಇಲ್ಲ.

ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನ, ಮೋಶೆಯ ಪ್ರಕಾರ ಹೊಂದಿದ ದೀಕ್ಷಾಸ್ನಾನ, ಪವಿತ್ರಾತ್ಮನ ದೀಕ್ಷಾಸ್ನಾನ, ಶ್ರಮೆಗಳ ದೀಕ್ಷಾಸ್ನಾನ, ಅಗ್ನಿಯ ದೀಕ್ಷಾಸ್ನಾನ, ಮತಶಾಖೆಗಳ ದೀಕ್ಷಾಸ್ನಾನ ಇವುಗಳನ್ನೆಲ್ಲಾ ಪರೀಕ್ಷಿಸಿದ ನಂತರ ಯೇಸುಕ್ರಿಸ್ತನು ಆಜ್ಞಾಪಿಸಿದ ಏಕೈಕ ದೀಕ್ಷಾಸ್ನಾನ ಇಂದು ಜಾರಿಯಲ್ಲಿರುವುದೆಂದು ಗ್ರಹಿಸಬಹುದು (ಎಫೆಸ 4:5). ಅದು ಮಾನಸಾಂತರ ಹೊಂದಿದ ನಂಬಿಗಸ್ತನು ಪಾಪಕ್ಷಮಾಪಣೆಯ ನಿಮಿತ್ತವಾಗಿ ನೀರಿನಲ್ಲಿ ಮುಳುಗಿಸುವುದರಿಂದ ಹೊಂದುವ ದೀಕ್ಷಾಸ್ನಾನ (ಅ.ಕೃ. 10:48; ಮಾರ್ಕ 16:16; ಅ.ಕೃ.2:38). "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅ.ಕೃ.22:16).



## 9. ಹೊಸ ಒಡಂಬಡಿಕೆ ಸಭೆಯು ಕ್ರಮ ಶಿಕ್ಷಣದಲ್ಲಿ ದೈವಿಕವಾದದ್ದು

## (The NewTestament Church is Divine in Discripline)

ಹೊಸ ಒಡಂಬಡಿಕೆಯಲ್ಲಿ ನಾವು ಓದುವ ಸಭೆಯ ಲಕ್ಷಣಗಳು ಅಂದರೆ ಅದರ ಹೆಸರು, ಆರಂಭ, ಪಾರಿಪಾಲನೆ ವಿಧಾನ ಪದ್ದತಿ, ಆರಾಧನೆಯ ಉಪದೇಶ, ಐಕ್ಯತೆ, ಕೃಷಿ, ದೀಕ್ಷಾಸ್ನಾನ ಎಂಬಿವುಗಳು ಪ್ರತ್ಯೇಕವಾದವುಗಳು. ಏಕೈಕವಾದವುಗಳು. ಅಷ್ಟೇ ಅಲ್ಲದೆ, ಅದರ ಕ್ರಮಶಿಕ್ಷಣದ ವಿಷಯದಲ್ಲಿಯೂ ಕೂಡ ಹೊಸ ಒಡಂಬಡಿಕೆ ಸಭೆಯು ಪ್ರತ್ಯೇಕವಾದದ್ದು. ಕ್ರಮಶಿಕ್ಷಣ ಎನ್ನುವ ಪದವು ಉಲ್ಲಾಸದಾಯಕವಾದದ್ದಲ್ಲ. ಸಾಮಾನ್ಯವಾಗಿ ನಾವು ಅದನ್ನು ನಕಾರಾತ್ಮಕವಾಗಿ (Negative) ಊಹಿಸುತ್ತೇವೆ. ಆದರೆ ಅದರ ಸಮಾನಾರ್ಥಕಗಳು ವಿಸ್ತೃತವಾದ ಭಾವವನ್ನು ತಿಳಿಯಪಡಿಸುತ್ತವೆ. ಉದಾಹರಣೆಗೆ, ಕ್ರಮಶಿಕ್ಷಣ ಎಂಬ ಮಾತಿನಲ್ಲಿ ಕೃಷಿ, ಡ್ರಿಲ್, ಡಾಟಾ, ಸಮಾಚಾರ, ಹುಡುಕುವುದು, ವೃತ್ತಿ, ಆತ್ಮ ನಿಗ್ರಹ, ಉಪದೇಶ ಮೊದಲಾದವುಗಳು ಸೇರಿಕೊಂಡಿವೆ. ಶಿಷ್ಯತ್ವವನ್ನು ಕುರಿತ ಉಪದೇಶವು ಕ್ರಮಶಿಕ್ಷಣದಲ್ಲಿ ಸೇರಿಕೊಂಡಿದೆ.

### ಪ್ರಯೋಜನಕರವಾದ ಕ್ರಮಶಿಕ್ಷಣ:–

ದೇವರು ಕೊಟ್ಟ ಬಿಡುಗಡೆಗೆ, ಬೈಬಲ್‌ಗೆ ಬದ್ಧರಾಗಿ ನಡೆದುಕೊಳ್ಳುವವರಿಗೆ ಕ್ರಮಶಿಕ್ಷಣ ಪ್ರಯೋಜನಕರವಾಗಿರುತ್ತದೆ. ಕ್ರಿಸ್ತೀಯ ಶಿಷ್ಯತ್ವವನ್ನು ಚುರುಕಾಗಿ ಸಾಗಿಸಲು ಇದು ಸಹಾಯ ಮಾಡುತ್ತದೆ. ಕ್ರಿಸ್ತನನ್ನು ತಮ್ಮ ಕರ್ತನಾಗಿ ಅಂಗೀಕರಿಸಿದ ಪ್ರತಿಯೊಬ್ಬನಿಂದ ದೇವರು ಇದನ್ನು "ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ, ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ, ಮೆಚ್ಚಿಕೆಯಾದದ್ದೂ, ದೋಷವಿಲ್ಲದ್ದೂ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ (ರೋಮಾ 12:1–2).

ದೇವರ ವಾಕ್ಯಕ್ಕೆ ಮನಃಪೂರ್ವಕವಾಗಿ ಹೊಂದಿಕೊಳ್ಳುವುದು ಕೂಡ ಕ್ರಮಶಿಕ್ಷಣವಾಗುತ್ತದೆ. ಅದು ಕೋರುವಂತದ್ದು. ಬಲಹೀನ ಕ್ರೈಸ್ತರನ್ನು, ತಪ್ಪು ಮಾಡುತ್ತಿರುವ ಕ್ರೈಸ್ತವನನ್ನು ದೇವರ ವಾಕ್ಯದಿಂದ ತಿರುಗಿಸುವುದು ಒಳ್ಳೆಯದು. ಅದರ ಫಲಿತಾಂಶ ಸಕಾರಾತ್ಮಕವಾಗಿ (Positive) ಇರುತ್ತದೆ. ಕ್ರಿಸ್ತೀಯ ಜೀವಿತವನ್ನು ಜೀವಿಸುವುದರಲ್ಲಿ ಕ್ರಮಶಿಕ್ಷಣ ಒಳ್ಳೆಯದೆ.

### ಮನೆಯು, ಸಭೆಯು :

ಸೂತ್ರದಿಂದ ನೋಡಿದರೆ ಸಭೆಯ ಕ್ರಮಶಿಕ್ಷಣವು ಮನೆಯ ಕ್ರಮಶಿಕ್ಷಣದಂತದ್ದೆ. ತಂದೆ ತನ್ನ ಮಕ್ಕಳಿಗಾಗಿ ಪಾಸಿಟಿವ್ ಆಗಿಯಾದರೂ ನೆಗೆಟಿವ್ ಆಗಿಯಾದರೂ ಏನು ಮಾಡಿದರೂ, ಅದು ಮಕ್ಕಳ ಕ್ಷೇಮಕ್ಕಾಗಿ ಮಾಡುತ್ತಾನೆ. ಅವರ ಕ್ಷೇಮಾಭಿವೃದ್ಧಿಯೇ ಆತನ ಮನಸ್ಸಿನಲ್ಲಿ ಯಾವಾಗಲೂ ಇರುತ್ತದೆ. ತಂದೆ ತನ್ನ ಮಕ್ಕಳ ಮೇಲೆ ಹೊಂದಿರುವಂತಹ ಸಂಬಂಧವನ್ನು ಪೌಲನು ಥೆಸಲೋನಿಕದಲ್ಲಿ ಇರುವ ಸಭೆಯೊಂದಿಗೆ ಹಾಗೆ ಆತನು ಹೇಳಿದ್ದಾನೆ. "ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿಹೇಳತ್ತಾ ಧೈರ್ಯಪಡಿಸುತ್ತಾ ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರ ರಾಗುವುದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೆವೆಂಬುದು ನಿಮಗೆ ತಿಳಿದದೆ" (1ಥೆಸ 2:11–12). ಕ್ರಮಶಿಕ್ಷಣವು ಮನೆಯಲ್ಲಿ ಎಷ್ಟು ಯಥಾರ್ಥವೋ, ಪೌಲನಿಗೂ, ಥೆಸಲೋನಿಕ ಸಭೆಗೂ ಇರುವ ಸಂಬಂಧದಲ್ಲಿ ಕ್ರಮಶಿಕ್ಷಣ ಎಷ್ಟು ಯಥಾರ್ಥವೋ, ಅಂತಹ ಕ್ರಮಶಿಕ್ಷಣ ತಪ್ಪು ದಾರಿಯಲ್ಲಿರುವ ಕ್ರೈಸ್ತವನ ವಿಷಯದಲ್ಲಿಯೂ ಕೂಡ ಯಥಾರ್ಥವು. ಪ್ರಯೋಜನಕರವಾದ ಎಚ್ಚರಿಕೆ, ಶಿಕ್ಷಣದಿಂದ ಕೂಡಿದ ಎಚ್ಚರಿಕೆಗಳು ಈ ಎರಡಕ್ಕೂ ಕ್ರಮಶಿಕ್ಷಣದಲ್ಲಿ ಸ್ಥಾನವಿದೆ. ಸಭೆಯಲ್ಲಿ ಪ್ರತ್ಯೇಕವಾಗಿ ಒಬ್ಬನ ಆತ್ಮ ವಿಷಯವಾದ ಕ್ಷೇಮಾಭಿವೃದ್ಧಿಯನ್ನು ಕೋರುವಂತದ್ದು ಕ್ರಮಶಿಕ್ಷಣವಾಗಿದೆ.

ತದನಂತರ ಕ್ರೈಸ್ತವ ತಂದೆಗೂ, ತನ್ನ ಮಕ್ಕಳಿಗೂ ಮಧ್ಯೆ ಇರುವ ಸಂಬಂಧವು ಮಕ್ಕಳ ಪ್ರವರ್ತನೆಯ ಮೇಲೆ ಆಧಾರವಾಗಿರುತ್ತದೆ. ತಂದೆ ತನ್ನ ಮಕ್ಕಳೊಂದಿಗೂ, ಮಕ್ಕಳು ತಂದೆಯೊಂದಿಗೂ ಉಲ್ಲಾಸದಾಯಕ ಸಂಬಂಧ ವನ್ನು ತಪ್ಪದೇ ಹೊಂದಿರುತ್ತಾರೆ. ಆದರೂ ಒಂದೊಂದು ಸಾರಿ ತಂದೆ ತನ್ನ



ಮಕ್ಕಳನ್ನು ಶಿಕ್ಷಿಸಬೇಕಾದ ಸಂದರ್ಭಗಳು ಬರುತ್ತವೆ. "ಬೆತ್ತ ಹಿಡಿಯದ ಪಿತ ಪುತ್ರನಿಗೆ ಶತೃ: ಚೆನ್ನಾಗಿ ಶಿಕ್ಷಿಸುವ ಪಿತ ಪುತ್ರನಿಗೆ ಮಿತ್ರ". (ಜ್ಞಾನೋಕ್ತಿ 13:24). ಹಾಗೆಯೇ ಪರಲೋಕದಲ್ಲಿರುವ ನಮ್ಮ ತಂದೆಯಾದ ದೇವರು ನಮ್ಮನ್ನು ಪ್ರೀತಿಸುತ್ತಿದ್ದಾನೆಯಾದ್ದರಿಂದ ನಮ್ಮನ್ನು ಗದರಿಸುವನು, ಶಿಕ್ಷಿಸುವನು.

"ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟಿದ್ದೀರೊ? ಏನೆಂದರೆ– ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸರ ಮಾಡಬೇಡ; ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ; ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು. ನೀವು ಶಿಕ್ಷಿತರಾಗುವುದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡೆಸುತ್ತಾನೆ. ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? ಮಕ್ಕಳೆಲ್ಲರು ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೆ ಹೊರತು ಪುತ್ರರಲ್ಲ. ಇದು ಮಾತ್ರವಲ್ಲದೆ ನಮ್ಮನ್ನು ರಕ್ಷಿಸಿದಂತೆ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿ ರುವಾತನಿಗೆ ನಾವು ಇನ್ನು ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೆ. ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪರಿಶುದ್ಧತೆ ಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ" (ಇಬ್ರಿಯ 12:5–11).

### ಸಭೆಯ ಕ್ರಮ ಶಿಕ್ಷಣ

ಹೊಸ ಒಡಂಬಡಿಕೆಯು ಸಭೆಯ ಕ್ರಮ ಶಿಕ್ಷಣವನ್ನು ಕುರಿತು ಸ್ಪಷ್ಟವಾಗಿ ಬೋಧಿಸುತ್ತಿದೆ. ಸಭೆಯು ಈ ವಿಷಯದಲ್ಲಿ ತನ್ನ ಬಾಧ್ಯತೆಯನ್ನು ನಿರ್ವಹಿಸಬೇಕು. ತಪ್ಪಿಸಿಕೊಳ್ಳಬಾರದು. ಇದರಿಂದಾಗಿ ಕರ್ತನ ಸಭೆಯೆಂದು ಹೇಳಿ ಕೊಳ್ಳುವವರ್‍ಯಾರೇ ಆದರು ಸಭೆಯ ಕ್ರಮಶಿಕ್ಷಣವನ್ನು ಜಾರಿಗೆ ತರಬೇಕು.

ಸಭೆಯ ಕ್ರಮಶಿಕ್ಷಣ ಕ್ರಿಸ್ತನ ಸಭೆಯ ಒಂದು ಪ್ರತ್ಯೇಕ ಗುರುತಾಗಿದೆ. ಅದು ದೇವರಿಂದ ಉಂಟಾದದ್ದು ಆಗಿರುವುದರಿಂದ ದೈವಿಕವಾದುದು. ಸಭೆಯ ಕ್ರಮಶಿಕ್ಷಣವನ್ನು ಜಾರಿಗೆ ಮಾಡಿದ ಸ್ಥಾನಿಕ ಸಭೆಗಳು ಆದಿ ಸಭೆಯೊಂದಿಗೆ ಹೋಲಿಸಿಕೊಳ್ಳವರು.

ಕ್ರಮಶಿಕ್ಷಣವನ್ನು ಕುರಿತು ಹೇಳುವ ಕೆಲವು ಲೇಖನ ಭಾಗಗಳು ಹೊಸ ಒಡಂಬಡಿಕೆಯಲ್ಲಿವೆ. ಇದನ್ನು ಜಾರಿ ಮಾಡುವುದು ಬಂದಾಗ ಆ ವ್ಯಕ್ತಿಯ ಆತ್ಮೀಯಕ್ಷೇಮವು ಧ್ಯೆರ್ಯವಾಗಿರಬೇಕು. ಅದು ಪ್ರಮುಖವಾದದ್ದು (1ಕೋರಿಂಥ 5:5). ಅಂದರೆ ಒಬ್ಬನ ದೋಷಗಳು ತೊಳೆದು ಹಾಕುವುದು ಅಲ್ಲವಾದರೂ, ಕೆಟ್ಟದಾರಿ ಹಿಡಿದವನನ್ನು ಸನ್ಮಾರ್ಗಕ್ಕೆ ನಡೆಸಲು ಕ್ರಮಶಿಕ್ಷಣವು ಉದ್ದೇಶವಾಗಿರಬೇಕು. ಕ್ರೈಸ್ತರ ಮದ್ಯೆ ಸುಹಿತವಾದ ಸಂಬಂದ ಏರ್ಪಾಟು ಆಗುವುದರಿಂದ ಸಹವಾಸದಿಂದ ತಪ್ಪಿಹೋದವನು ದೇವರೊಂದಿಗೂ ಉಳಿದ ಕ್ರೈಸ್ತರೊಂದಿಗೂ ಆ ಸಹವಾಸವನ್ನು ಕಳೆದುಕೊಂಡನೆಂದು ಗ್ರಹಿಸಿಕೊಳ್ಳಬೇಕು. ದೇವರೊಂದಿಗೆ ಸಹವಾಸ ಹೊಂದಿರುವವರೊಂದಿಗೆ ಕ್ರೈಸ್ತರು ಸಹವಾಸ ಮಾಡಬೇಕು. ಆದರೆ ಸಹೋದರರ ಸ್ನೇಹವನ್ನು ಬಯಸಿದರೆ, ಸಭೆಯ ಕ್ರಮಶಿಕ್ಷಣೆಯ ಪ್ರಯೋಜನವನ್ನು ಆಶಿಸಿದ ಹಾಗೆ ಇರುವುದಿಲ್ಲ. ನಂತರ ತಪ್ಪಿಹೋದ ಕ್ರೈಸ್ತವನನ್ನು ಸಹವಾಸದಿಂದ ತೊಲಗಿಸುವುದರಿಂದ ಉಳಿದ ಕ್ರೈಸ್ತರಿಗೆ ಆತನ ಪ್ರವರ್ತನೆ ಅಂಟಿಕೊಳ್ಳುವುದಿಲ್ಲ (1ಕೋರಿಂಥ 5:6). ಪಾಪವು ಅಂಟು ರೋಗದಂತದ್ದು, ಎಚ್ಚರಿಸುವುದು, ಗದರಿಸುವುದು, ಇಂತಹವುಗಳು ಕೆಲಸ ಮಾಡದಿದ್ದಾಗ ಸಹವಾಸದಿಂದ ತೊಲಗಿಸುವುದು ಕ್ರಮಶಿಕ್ಷಣದ ಕೊನೆಯ ಹಂತ. ಒಬ್ಬನಲ್ಲಿ ಬದಲಾವಣೆ ಕಾಣಿಸದಿದ್ದಾಗ ಇಂತಹ ಕಾರ್ಯ ಕೈಗೊಳ್ಳುವುದು ಅನಿವಾರ್ಯ.

**ಎರಡು ಪರಿಸ್ಥಿತಿಗಳ ಮೇಲೆ ಆಧಾರಪಟ್ಟು ಕ್ರಮಶಿಕ್ಷಣ ಜಾರಿ ಮಾಡಬೇಕು.**

1) ತಪ್ಪು ಮಾಡುತ್ತಿರುವ ಕ್ರೈಸ್ತವನು ಸುಳ್ಳು ಬೋಧಕನಾ? ತನ್ನ ಬೋಧನೆಯಿಂದ ತನ್ನ ಆತ್ಮವನ್ನು, ಇತರರ ಆತ್ಮಗಳನ್ನು ಕೂಡ ನಾಶನದೊಳಗೆ ನಡೆಸುತಿದ್ದಾನಾ?

2) ತಪ್ಪು ಮಾಡುತ್ತಿರುವ ಕ್ರೈಸ್ತವನನ್ನು ಪುನರುದ್ಧರಿಸುಲು ಕ್ರೈಸ್ತರು ಮಾಡುವ ಪ್ರಯತ್ನಗಳು ಸರಿಯಾಗಿದ್ದಾವಾ? ಒಬ್ಬನು ಸುಳ್ಳು ಬೋಧನೆಯನ್ನು



ಮಾಡುತ್ತಾ ಸಹೋದರರ ಮದ್ಯೆ ಬೇದಾಭಿಪ್ರಾಯಗಳನ್ನು ಸೃಷ್ಟಿಸುತ್ತಿರುವುದಾದರೆ ಅದರ ಮೇಲೆ ಕ್ರಮತೆಗೆದುಕೊಳ್ಳದೇ ಇರಲಾರೆವು. ಅಂತಹ ದುಷ್ಟಕಾರ್ಯಗಳನ್ನು ಲೇಖನೆಗಳು ತಕ್ಷಣ ಆಜ್ಞಾಪಿಸುತ್ತವೆ (ರೋಮಾ 16:17–18; ತೀತ3:10–11). ಬೋಧಕರಾದವರಿಗೆ ಕಠಿಣವಾದ ತೀರ್ಪು ಇರುವುದೆಂದು ಯಾಕೋಬನು ಹೇಳಿದ್ದಾನೆ (ಯಾಕೋಬ 3:1).ಸಭೆ ಹಿರಿಯನು ಸ್ವಸ್ಥಬೋಧನೆಯಿಂದ ಜನರನ್ನು ಎಚ್ಚರಿಸುವುದಕ್ಕೂ, ಎದುರಿಸುವವರ ಬಾಯಿ ಕಟ್ಟುವುದಕ್ಕೂ ಶಕ್ತನಾದವನು (ತೀತ1:9–11).

ಅಕ್ರಮವಾಗಿ ನಡೆಯುವವರ ಬಳಿಯಿಂದ ತೊಲಗಿಹೋಗಿ ಎಂದು ಕ್ರೈಸ್ತರಿಗೆ ಆಜ್ಞಾಪಿಸಲ್ಪಟ್ಟಿರುವುದರಿಂದ (2ಥೆಸಲೋನಿಕ 3:6) ಇಷ್ಟವಿಲ್ಲದಿದ್ದರೂ ಸಭೆಯ ಕ್ರಮಶಿಕ್ಷಣ ಜಾರಿಯಾಗಬೇಕು. ಇದರ ಮೂಲಕ ಸತ್ಫಲಿತಗಳು ಲಭಿಸುತ್ತವೆಂದು ಕೆಲವರು ವಾದಿಸಿದರೂ, ಯಾವನೂ ದೇವರೊಂದಿಗೆ ವಾದಿಸಲು ನಿಂತುಕೊಳ್ಳಬಾರದು. ಆತನೊಂದಿಗೆವಾದಿಸಿ ಯಾವ ಮನುಷ್ಯನೂ ಗೆಲ್ಲಲಾರನು. ಸಹವಾಸದಿಂದೆ ತೊಲಗಿಸಲ್ಪಟ್ಟವನೊಂದಿಗೆ ಉಳಿದ ಕ್ರೈಸ್ತರು ಯಾವ ವಿಧವಾದ ಸ್ನೇಹ ಸಂಬಂಧಗಳನ್ನು ಮುಂದುವರಿಸಬಾರದು. ಅಂತವರೊಂದಿಗೆ ಕಲಿತು ಊಟಮಾಡಬಾರದು (1ಕೋರಿಂಥ 5:11).

“ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತಿಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ. ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ಧಿ ಹೇಳಿರಿ (2ಥೆಸಲೋನಿಕ 3:14–15, ಯಾಕೋಬ 5:19–20). ದೈವಚಿತ್ತಾನುಸಾರವಾದ ದುಃಖವು ಹೊಂದಿ ಒಬ್ಬನು ಮಾನಸಾಂತರ ಹೊಂದುವ ಹಾಗೆ ಸಹವಾಸದಿಂದ ತೊಲಗಿಸುವುದರ ಮುಖ್ಯ ಉದ್ದೇಶ (2ಕೋರಿಂಥ 2:6–7). ಮಾನಸಾಂತರ ಹೊಂದಿದ ನಂತರ ಕ್ಷಮಿಸಬೇಕು, ಪ್ರೀತಿಯನ್ನು ಪುನರುದ್ಧರಿಸಬೇಕು (2ಕೋರಿಂಥ 2:8).

ಸಭೆಯ ಕ್ರಮಶಿಕ್ಷಣವನ್ನು ಜಾರಿ ಮಾಡಬೇಕಾದವರೇ ಅದನ್ನು ಜಾರಿ ಮಾಡುವುದಿಲ್ಲ. ಇದು ವಿಷಾದಕರವಾದದ್ದು. ಉದಾಹರಣೆಗೆ:–ಕುಟುಂಬವು

ಕುಟುಂಬದ ಸದಸ್ಯರನ್ನು ತೊಲಗಿಸುವುದಿಲ್ಲ. ಸಭೆಯ ಕ್ರಮಶಿಕ್ಷಣ ದೈವಿಕ ಸಂಬಂಧಗಳನ್ನು ಹೊಡೆದುರಿಳಿಸಲು ಉದ್ದೇಶಿಸಿರುವಂತದ್ದಲ್ಲ. ಕ್ರೈಸ್ತರು ಇತರ ಕ್ರೈಸ್ತರೊಂದಿಗೆ ಒಳ್ಳೆಯ ಸಂಬಂಧಗಳನ್ನು ಸದಾಕಾಲ ಹೊಂದಿರಬೇಕು. ಸಹವಾಸದಿಂದ ತೊಲಗಿಸಲ್ಪಡುವುದಕ್ಕೆ, ಅದರ ಫಲಿತಗಳನ್ನು ಸಾಧಿಸುವುದಕ್ಕಾಗಿ ಒಳ್ಳೆಯ ಸಹವಾಸ ಸಭೆಯಲ್ಲಿ ಬಲವಾಗಿರಬೇಕು.

**ಮುಕ್ತಾಯ:–**

ಸಭೆಯ ಕ್ರಮಶಿಕ್ಷಣ ಹೊಸ ಒಡಂಬಡಿಕೆ ಸಭೆಗೆ ದೇವರು ಕೊಟ್ಟ ಒಂದು ಗುರುತಾಗಿದೆ. ಅದರ ಫಲಗಳು ಧನಾತ್ಮಕವಾಗಿ ಇರುತ್ತವೆ. ಮನೆ ಕ್ರಮಶಿಕ್ಷಣದ ಹಾಗೆಯೇ ಸಭೆಯ ಕ್ರಮಶಿಕ್ಷಣವು ಕೂಡ ಒಬ್ಬ ವ್ಯಕ್ತಿಯ ಕ್ಷೇಮದ ನಿಮಿತ್ತವಾಗಿ ಉದ್ದೇಶಿಸಲ್ಪಟ್ಟಿದೆ. ಇಷ್ಟವಿಲ್ಲದೆ ಹೋದರೂ ಸಭೆಯು ತನ್ನ ಸದಸ್ಯರ ಬಗ್ಗೆ ಪೊಲೀಸನಂತೆ ಕೆಲಸ ಮಾಡುತ್ತಾ ಕ್ರಮಶಿಕ್ಷಣವನ್ನು ತಪ್ಪಿಹೋದ ಸಹೋದರರನ್ನು ರಕ್ಷಿಸಿಕೊಳ್ಳುವುದಲ್ಲದೇ ಸಭೆಗೆ ಅಂಟು ರೋಗ ಸೋಂಕದ ಹಾಗೆ ಕ್ರಮಶಿಕ್ಷಣ ಕಾಪಾಡುತ್ತದೆ. ಸದಸ್ಯರ ಮದ್ಯೆ ಗಾಢವಾದ ಪ್ರೀತಿ, ಸಹವಾಸ ಬಾಂಧವ್ಯಗಳಿದ್ದರೆ ಸಭೆಯ ಕ್ರಮಶಿಕ್ಷಣದಿಂದ ಸತ್ಫಲಗಳು ಲಭಿಸುತ್ತವೆ.



# 10. ಹೊಸ ಒಡಂಬಡಿಕೆಯ ಸಭೆಯು ದೈವತ್ವವನ್ನು ಕುರಿತ ಉಪದೇಶದಲ್ಲಿ ದೈವಿಕವಾದದ್ದು

## (The New Testament Church is Divine in Godhead)

ದೈವತ್ವವನ್ನು ಕುರಿತು ಕ್ರೈಸ್ತತ್ವ ಲೋಕದಲ್ಲಿ ಗಲಿಬಿಲಿ ಇದೆ. ಸತ್ಯವು ಸತ್ಯವೇ. ಹಾಗೆಯೇ ದೈವತ್ವವು ದೈವತ್ವವೇ. ದೈವತ್ವವನ್ನು ಕುರಿತು ಪ್ರಮುಖವಾಗಿ ಎರಡು ಸಂಗತಿಗಳು ಸತ್ಯವಾಗಿವೆ.

1) ದೈವತ್ವದಲ್ಲಿ ಮೂವರು ಪ್ರತ್ಯೇಕ ವ್ಯಕ್ತಿಗಳಿದ್ದಾರೆಂದು ಬೈಬಲ್ ಖಂಡಿತವಾಗಿ ಬೋಧಿಸುತ್ತದೆ.

2) ದೈವತ್ವದ ಲಕ್ಷಣಗಳು ಪ್ರತ್ಯೇಕವಾದವುಗಳೆಂದು ಬೈಬಲ್ ಬೋಧಿಸುತ್ತಿದೆ. ದೈವತ್ವದ ಲಕ್ಷಣಗಳು ಬೈಬಲಿನಲ್ಲಿ ಬರೆಯಲ್ಪಟ್ಟಿವೆ.

**ದೈವತ್ವದ ಅರ್ಥವಿವರಣೆ:**

ಕನಿಷ್ಟವಾಗಿ ಎರಡು ಅಧುನಿಕ ಮತಶಾಖೆಯವರು ದೈವತ್ವದಲ್ಲಿ ಮೂವರು ವ್ಯಕ್ತಿಗಳಿಲ್ಲ ಎಂದು ಹೇಳುತ್ತಾರೆ. ಯೆಹೋವ ಸಾಕ್ಷಿಗಳೆಂಬ ಅವರು ಯೇಸು ದೇವರೇ ಅಲ್ಲ ಎನ್ನುತ್ತಾರೆ. ಯುನೈಟೆಡ್ ಪೆಂತಕೋಸ್ತು ಮತಶಾಖೆಯವರು ದೈವತ್ವದಲ್ಲೆಲ್ಲಾ ಒಬ್ಬನೇ ವ್ಯಕ್ತಿಯಾಗಿದ್ದಾನೆ ಎಂದು ಭಾವಿಸುತ್ತಾರೆ. ಆತನೇ ಯೇಸು ಕ್ರಿಸ್ತನೆಂದು ಅವರು ಹೇಳುತ್ತಾರೆ. ಈ ಎರಡು ಸಂದರ್ಭದಲ್ಲಿಯೂ ಅವರು ದೈವತ್ವದಲ್ಲಿ ಮೂವರು ವ್ಯಕ್ತಿಗಳು ಇಲ್ಲವೆಂದು ಭಾವಿಸುತ್ತಾರೆ.

ದೈವತ್ವವು (Godhead) ಎನ್ನುವ ಪದ Theos ಎನ್ನುವ ಗ್ರೀಕ್ ಪದದಿಂದ ಉದ್ಭವಿಸಿದೆ. Theos ಎಂದರೆ ದೇವರು ಅಥವಾ ದೈವತ್ವವೆಂದು ಅರ್ಥ. ರೋಮಾ 1:20 ರಲ್ಲಿ ಬಳಸಿದ ದೈವತ್ವವು ದೇವರು ಸೃಷ್ಟಿಕರ್ತನೆಂದು ಆತನ ಶಕ್ತಿಯನ್ನು ನಾವು ಊಹಿಸಬಹುದು ಅದು ಪ್ರಕೃತಿಗೆ ಮಿಗಿಲಾಗಿದದ್ದು ಆಗಿರುವುದರಿಂದ ಸೃಷ್ಟಿಯೆಲ್ಲಾ ದೈವಸಂಕಲ್ಪವೇ. ಅಥೇನ್ ಪಟ್ಟಣದಲ್ಲಿ ಗ್ರೀಕ್ ಪ್ರಜೆಗಳಿಗೆ ಪೌಲನು ಉಪದೇಶ ಮಾಡುತ್ತಾ ದೈವತ್ವವನ್ನು ಕುರಿತು ಹೇಳಿದನು. ಅಲ್ಲಿ ಆ ಪದವು ದೇವರನ್ನು ಕುರಿತು ಬಳಸಲ್ಪಟ್ಟಿದೆ. ಆತನೇ ನಿಜವಾದ ದೇವರು. ದೈವತ್ವ ಎಂಬ ಪದವನ್ನು ಹಿಡಿದು ಅದರಲ್ಲಿ ಎಷ್ಟು ಜನ ವ್ಯಕ್ತಿಗಳಿದ್ದಾರೆ? ಆತನ

ತ್ವತವು ಯಾವುದೋ ತಿಳಿದುಕೊಳ್ಳಬಹುದು. ಇವುಗಳನ್ನು ಕುರಿತು ಬೈಬಲ್ ಬೇರೆಕಡೆ ತಿಳಿಯ ಪಡಿಸುತ್ತದೆ.

### ಒಬ್ಬನೆ ದೇವರು ಮೂವರು ವ್ಯಕ್ತಿಗಳು:

ದೈವತ್ವದಲ್ಲಿರುವ ವ್ಯಕ್ತಿಗಳನ್ನು ಕುರಿತು ಅನೇಕ ಲೇಖನಗಳು ಹೇಳಿರುವುದರಿಂದ ಅದನ್ನು ಯಾರಾದರೂ ಶಂಕಿಸುವುದಾದರೆ ಅದು ಆಶ್ಚರ್ಯ. ಪರ ಲೋಕದಲ್ಲಿರುವ ತಂದೆಯನ್ನು ಕುರಿತು ಭೂಮಿಯ ಮೇಲಿರುವ ಯೇಸು ಕ್ರಿಸ್ತನನ್ನು ಕುರಿತು ಅನೇಕ ಲೇಖನಗಳು ತಿಳಿಯಪಡಿಸುತ್ತಿವೆ. (ಮತ್ತಾಯ 5:16,45,48; 6:1,10,14,26,32; 7:11,21; 10:2223; 12:50; 15:13; 16:17,19; 23:9; ಮಾರ್ಕ 11:23–26; ಲೂಕ 11:2). ಭೂಮಿ ಮೇಲೆ ಸೇವೆ ಮಾಡುತ್ತಾ ಯೇಸು ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಯೇಸುವಿನವನಲ್ಲವೆಂದು ಹೇಳುವನು (ಮತ್ತಾಯ 10:32–33).

### ಪರಲೋಕದಲ್ಲಿರುವ ತಂದೆಗೆ ವ್ಯಕ್ತಿತ್ವದ ಲಕ್ಷಣಗಳಿವೆ:

ಆತನು ಭೌತಿಕ ಮತ್ತು ಆತ್ಮೀಯ ವರವನ್ನು ಕೊಡುವನು (ಮತ್ತಾಯ 5:45; ಎಫೆಸ 1:3). ತಂದೆಯು ದೋಷವಿಲ್ಲದವನಾಗಿದ್ದಾನೆ (ಮತ್ತಾಯ 5:45). ಆತನು ಫಲಕೊಡುವನು (ಮತ್ತಾಯ 6:1,4). ನಮ್ಮ ತಂದೆಯು ನೋಡುವನು, ಗಮನಿಸುವನು, ತಿಳಿದುಕೊಳ್ಳುವನು (ಮತ್ತಾಯ 6:6,8,18, ಲೂಕ 12:30). ಆತನು ಕ್ಷಮಿಸುವನು (ಮತ್ತಾಯ 6:19). ಸಂಗತಿಗಳನ್ನು ಮರೆಮಾಡುವನು (ಮತ್ತಾಯ 11:25). ಒಬ್ಬ ವ್ಯಕ್ತಿಯ ಹಾಗೆಯೇ ಆತನನ್ನು ತಿಳಿದುಕೊಳ್ಳುವೆವು (ಮತ್ತಾಯ 11:26–27). ಆತನಿಗೆ ಒಂದು ಚಿತ್ತವಿದೆ (ಮತ್ತಾಯ 12:50; ಲೂಕ 11:2; ಯೋಹಾನ 5:30). ತಂದೆಯಾದ ದೇವರಿಗೆ ಒಂದು ರಾಜ್ಯವಿದೆ (ಮತ್ತಾಯ 13:43). ಆತನು ಪ್ರಭಾವವನ್ನು ಹೊಂದಿದ್ದಾನೆ (ಮತ್ತಾಯ 26:27; ಮಾರ್ಕ 8:38; ಯೋಹಾನ 1:14) ಆತನು



ಪ್ರಾರ್ಥನೆಗಳನ್ನು ಅಂಗೀಕರಿಸುವನು (ಮತ್ತಾಯ 13:43). ಆತನು ಪ್ರಭಾವವನ್ನು ಹೊಂದಿದ್ದಾನೆ (ಮತ್ತಾಯ 26:27; ಮಾರ್ಕ 8:38; ಯೋಹಾನ1:14) ಆತನು ಪ್ರಾರ್ಥನೆಗಳನ್ನು ಅಂಗೀಕರಿಸುವನು (ಮತ್ತಾಯ 26:39,42,53; ಲೂಕ 11:2;23:34,46, ಯೋಹಾನ 11:46,12:28). ಆತನು ಕರುಣೆಯುಳ್ಳವನು (ಲೂಕ 6:36) ಆತ್ಮಗಳನ್ನು ಸೇರಿಸಿಕೊಳ್ಳುವನು (ಲೂಕ 23:46) ವಾಗ್ದಾನಗಳನ್ನು ಅನುಗ್ರಹಿಸುವನು(ಲೂಕ24:49; ಅ.ಕೃ1:4)

ಆತನಿಗೆ ಹೃದಯ (ಇದೆ) ಇರುವ ಹಾಗೆ ಹೇಳಲ್ಪಟ್ಟಿದೆ (ಯೋಹಾನ 1:18). ಆತನು ಪ್ರೀತಿಸುವನು (ಯೋಹಾನ 3:16,35; 5:20,10:17; 14:23;). ಆತನು ಆರಾಧಿಸಲ್ಪಡುವನು (ಯೋಹಾನ 4:24).ಕೆಲಸ ಮಾಡುವನು (ಯೋಹಾನ 5:17, 19–20, 37). ಆತನು ಜೀವವುಳ್ಳವನು (ಯೋಹಾನ 5:26) .ಕೊಡುವವನು (ಯೋಹಾನ 6:32, 37). ಬೋಧಿಸುವನು (ಯೋಹಾನ 8:28). ಆತನು ಕೈಗಳನ್ನು ಹೊಂದಿದವನು (ಯೋಹಾನ 10:29).

ತಂದೆಗೆ ತನ್ನ ಸ್ವಂತ ಮಗನು, ದತ್ತು ಪುತ್ರರೂ ಕೂಡ ಇರುವವರು (ಮತ್ತಾಯ 8:29, ಲೂಕ 1:32;4:41,22:70; ಯೋಹಾನ3: 16,10:36, ಅ.ಕೃ3:13, ರೋಮಾ 15:6,2 ಕೋರಿಂಥ 6:18, 11:31, ಗಲಾತ್ಯ 14:3, ಎಫೆಸ 1:3, 3:14, ಕೊಲೊಸ್ಸೆ 2:2, ಇಬ್ರಿಯ 1:5,1 ಪೇತ್ರ 1:3,2 ಯೋಹಾನ 1:3, ಪ್ರಕಟನೆ 1:6; 3:5). ಇವೆಲ್ಲವೂ ತಂದೆಯ ವ್ಯಕ್ತಿತ್ವವನ್ನು ಸೂಚಿಸುತ್ತವೆ.

### \ಪವಿತ್ರಾತ್ಮನಿಗೆ ಕೂಡ ವ್ಯಕ್ತಿತ್ವದ ಲಕ್ಷಣಗಳಿವೆ:–

ಆತ್ಮ ಇಳಿಯುವುದು (ಮತ್ತಾಯ 3:16) ನಡೆಸುವನು (ಮತ್ತಾಯ 10:20, ಯೋಹಾನ 16:13, ಅ.ಕೃ1:16, 8:29; 10:19; 13: 2; 21: 11; 28:25, 1ತಿಮೋಥೆ 4:1, ಇಬ್ರಿಯಾ3:7; ಪ್ರಕಟನೆ2:11; 14:13; 22:17) ಆತನು ಬಯಲು ಪಡಿಸುವನು (ಗುಪ್ತ/ರಹಸ್ಯ ವಿಷಯಗಳನ್ನು) (ಲೂಕ 2:26,1 ಕೋರಿಂಥ 2:17) ಆತನು ದೇಹಾಕಾರವಾಗಿ ಕಾಣಿಸುವನು (ಲೂಕ 3:22). ಬೋಧಿಸುವನು (ಲೂಕ 12:12; ಯೋಹಾನ 14:26,1 ಕೋರಿಂಥ 2:13). ಆದರಿಸುವನು (ಯೋಹಾನ 14:16; ಅ.ಕೃ9:31). ನಿವಾಸಿಸುವನು (ಯೋಹಾನ 14:17, ರೋಮಾ 8:9,11; 1 ಕೋರಿಂಥ 2:13). ಆತನು ಸಾಕ್ಷಿ ಕೊಡುವನು (ಯಾಹಾನ 15:28). ಅದುಕೊಳ್ಳುವನು (ಅ.ಕೃ 16:6–7). ವಿಜ್ಞಾಪನೆಮಾಡುವನು

(ರೋಮಾ 8:26). ಪರಿಶುದ್ಧಪಡಿಸುವನು (2ಥೆಸಲೋನಿಕ 2:13). ಒಬ್ಬನಿಗಿಂತ ಹೆಚ್ಚುಜನ ಸೃಷ್ಟಿಯಲ್ಲಿ ಪಾಲುಗಾರರಾಗಿರುವ ಹಾಗೆ ಲೇಖನಗಳು ನಮಗೆ ಬೋಧಿಸುತ್ತಿವೆ (ಎಫೆಸ 3:9). ಆ ಮೇಲೆ ದೇವರು ನಮ್ಮ ಸ್ವರೋಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ ಎಂದುಕೊಂಡನು (ಆದಿ 1:26). ದೈವತ್ವದಲ್ಲಿ ಒಬ್ಬರಿಗಿಂತ ಹೆಚ್ಚು ಜನರಿರುವ ಹಾಗೆ ಒಂದೇ ವಚನದಲ್ಲಿ ಆಥವಾ ಮಾತಿನಲ್ಲಿ ಲೇಖನಗಳು ತಿಳಿಯಪಡಿಸುತ್ತಿವೆ (ಲೂಕ1:35; ಯೋಹಾನ 14:26; 15:26; ಅ.ಕೃ2:33; 10:38; ರೋಮಾ 15:16,302 ಕೋರಿಂಥ 13:14: ಎಫೆಸ 4:4–6, ಇಬ್ರಿಯ 9:14,1 ಪೇತ್ರ 3:18,1 ಯೋಹಾನ 5:7). ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆ,ಮಗ,ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ (ಮತ್ತಾಯ 28:19). ಇಲ್ಲಿ ದೈವತ್ವದೊಳಗೆ ಮೂವರು ವ್ಯಕ್ತಿಗಳನ್ನು ಕುರಿತು ಹೇಳಲ್ಪಟ್ಟಿದೆ.

ಇನ್ನೂ ಉಳಿದ ಲೇಖನ ಭಾಗಗಳೂ ಕೂಡ ತಂದೆ, ಮಗನು, ಪವಿತ್ರಾತ್ಮರನ್ನು ಕುರಿತು ಹೇಳುತ್ತಿವೆ (ಲೂಕ 11:13, ರೋಮಾ 15:30, 1 ಕೋರಿಂಥ 12:3, ಎಫೆಸ 2:22). ಇವೇ ಅಲ್ಲದೆ ತಂದೆ, ಮಗನು ಕುರಿತು ಹೇಳಲ್ಪಟ್ಟ ಅನೇಕ ಲೇಖನಗಳಿವೆ (ಮಾರ್ಕ 5:7, ಯೋಹಾನ 5:18,22–23; 6:46, ರೋಮಾ 15:6, 1ಕೋರಿಂಥ 1:3; 2 ಕೋರಿಂಥ 1:2–3, ಎಫೆಸ 6:23, ಫಿಲಿಪ್ಪಿ 1:2, ಕೊಲೆಸ್ಸೆ 1:2–3; ಪ್ರಕಟನೆ 3:5). ಇಂತಹ ಲೇಖನೆಗಳೆಲ್ಲವೂ ದೈವತ್ವದಲ್ಲಿ ಬಹಳ ವ್ಯಕ್ತಿಗಳಿದ್ದಾರೆಂದು ಬೋಧಿಸುತ್ತಿವೆ. ತಂದೆಯು ಸತ್ತವರನ್ನು ಹೇಗೆ ಎಬ್ಬಿಸುತ್ತಾನೋ ಹಾಗೆಯೇ ಯೇಸು ಕ್ರಿಸ್ತನೂ ಕೂಡ ಎಬ್ಬಿಸುವನು (ಯೋಹಾನ 5:21, ಅ.ಕೃ 2:24; 32,4:10; 5:30; 10:40; 13:33; ರೋಮಾ 6:4; 16:9; 1ಕೋರಿಂಥ 15:15; ಕೊಲೊಸ್ಸೆ 2:12). ಇದೂ ಕೂಡ ದೈವತ್ವದಲ್ಲಿ ಹೆಚ್ಚು ವ್ಯಕ್ತಿಗಳನ್ನು ಕುರಿತು ಸೂಚಿಸುತ್ತಿವೆ (ಯೋಹಾನ5:36–37; 6:44,57 8:16; 10:36, 12:49, ರೋಮಾ 8:3, ಗಲಾತ್ಯ 4:4, 1ಯೋಹಾನ 4:9). ದೈವತ್ವದಲ್ಲಿ ತಂದೆಯು ದೇವರೆಂದು ಸಂಬೋಧಿಸಲ್ಪಟ್ಟಿದ್ದಾರೆ. ಆತನು ತಂದೆಯಾದ ದೇವರೆಂದು ಹೇಳಲ್ಪಟ್ಟಿದ್ದಾರೆ (ಯೋಹಾನ6:27, 45ಗಲತ್ಯ1:1,3; ಎಫೆಸ 1:17; 6:23, ಫಿಲಿಪ್ಪಿ 1:2, 1ಥೆಸಲೋನಿಕ 1:1,2). ಯೇಸು ಕ್ರಿಸ್ತನು ಕೂಡ ದೇವರೆಂದು ಬೈಬಲ್ ಬೋಧಿಸುತ್ತಿದೆ (ಮತ್ತಾಯ 1:23, 1ತಿಮೊಥೆ 3:16).



ದೈವತ್ವದಲ್ಲಿ ಹೆಚ್ಚು ವ್ಯಕ್ತಿಗಳು ಅಂದರೆ ಮೂವರು ವ್ಯಕ್ತಿಗಳಿರುವುದು ಮಾತ್ರವಲ್ಲದೆ, ಅವರೆಲ್ಲರೂ ದೇವರಾಗಿದ್ದಾರೆಂದು ಬೈಬಲ್ ಬೋಧಿಸುತ್ತದೆ. ದೈವತ್ವದಲ್ಲಿ ಯೇಸು ಒಬ್ಬರೇ ಮಾತ್ರ ದೇವರಲ್ಲವೆಂದು ಹೇಳುವ ಲೇಖನ ಭಾಗಗಳು ಅನೇಕವಿವೆ (ಮತ್ತಾಯ 27:46, ಯೋಹಾನ 8:16,18,2829,38,54, 14:1, 28: 16:23,27,32; 17:3; 20:17; ಅ.ಕೃ 2:38; 7:55; 10:38,40, ರೋಮಾ8:17, 34,1 ಕೋರಿಂಥ 8:6; 15:24,28; ಎಫೆಸ 4:426:14:1, 28, ಫಿಲಿಪ್ಪಿ 2:6, ಕೊಲೊಸ್ಸೆ 1:15; 1ತಿಮೊಥೆ 2:5;1 ಪೇತ್ರ 3:22; 2ಯೋಹಾನ 9–11).

ಬೈಬಲ್ ದೈವತ್ವದಲ್ಲಿ ಮೂರು ವ್ಯಕ್ತಿಗಳಿದ್ದಾರೆಂದು ಗಂಭೀರವಾಗಿ ಪ್ರಕಟಿಸುತ್ತಿದೆ. ಮೂವರು ವ್ಯಕ್ತಿಗಳು ಒಂದೇ ದೇವರಾಗಿದ್ದಾರೆಂದು ಲೇಖನಗಳು ಹೇಳುವುದರಲ್ಲಿ ಅವರ ಬಹುತ್ವವನ್ನು ನಿರಾಕರಿಸುತ್ತಿಲ್ಲ. ಮೂವರಲ್ಲಿ ಐಕ್ಯತೆಯಿಂದ ಏಕತ್ವವು ಸಂಭವಿಸಿದೆ. ಆದರೂ ಅವರು ಬೇರೆ ಬೇರೆ ವ್ಯಕ್ತಿಗಳು (ಯೋಹಾನ 14:20; 17:11,21–24:, 1ಕೋರಿಂಥ 8:6; ಪ್ರಕಟನೆ 3:21). ಕೊನೆಯದಾಗಿ ನಮ್ಮ ಪ್ರಾರ್ಥನೆಗಳನ್ನು ಕ್ರಿಸ್ತನ ಮೂಲಕ ತಂದೆಯಾದ ದೇವರಿಗೆ ಮಾಡುವೆವು. ಅದರಲ್ಲಿಯೇ ದೈವತ್ವದಲ್ಲಿ ಬಹುತ್ವವು ವ್ಯಕ್ತವಾಗುತ್ತಿದೆ (ಮತ್ತಾಯ 27:46; ಯೋಹಾನ 15:16; ರೋಮಾ 1:8,7:25; ಎಫೆಸ5: 26, ಕೊಲೆಸ್ಸ 3:17). ಅಮೇರಿಕಾದಲ್ಲಾದರೂ, ಪಶ್ಚಾತ್ಯದೇಶಗಳಲ್ಲಿಯಾದರೂ ನಿಷ್ಪಕ್ಷಪಾತವಾಗಿ ನೋಡಿದರೆ ವಿಗ್ರಹಾರಾಧನೆ ಬಹಳವಾಗಿ ಹಬ್ಬಿದೆಂಬುದನ್ನು ಗಮನಿಸಬಹುದು. ಆಯಾ ಮತಶಾಖೆಗಳು ಲೋಕಕ್ಕೆ ದೇವರನ್ನು ಕುರಿತು ಚಿತ್ರೀಕರಿಸುವ ಅಸಂಬದ್ಧ ಸಂಗತಿಗಳಿಂದ ಇಂತಹದ್ದು ಸಂಭವಿಸಿದೆ. ಪ್ರತಿ ಮತಶಾಖೆ ದೇವರನ್ನು ಕುರಿತು ಬೇರೆಯಾಗಿ ಬೋಧಿಸುತ್ತಾರೆ. ವಿಧ ವಿಧವಾಗಿ ಆರಾಧಿಸಬೇಕೆಂದು ಒಂದೊಂದು ಮತಶಾಖೆ ಒಂದೊಂದು ರೀತಿಯಾಗಿ ಹೇಳುತ್ತಾರೆ. ಈ ಗುಂಪುಗಳ ಮದ್ಯೆ ಪರಲೋಕ, ನರಕಗಳನ್ನು ಕುರಿತು ವಿಧ ವಿಧ ವಾದ ಬೋಧನೆಗಳಿವೆ. ಕೆಲವರು ನರಕವೇ ಇಲ್ಲವೆನ್ನುತ್ತಾರೆ. ದೇವರ ತತ್ವವನ್ನು ಅವರಿಗನುಕೂಲವಾಗಿ ಮಾತಿನಲ್ಲಿ ಪ್ರತಿ ಗುಂಪಿನವರು ಅವರ ದೇವರ ತತ್ವವನ್ನು ಅವರ ದೇವರಿಗನುಕೂಲವಾಗಿ ಬದಲಾಯಿಸಿಕೊಂಡಿದ್ದಾರೆ. ಪರಲೋಕ, ನರಕದ ವಿಷಯವು ಕೂಡ ಅಷ್ಟೇ. ಆಶ್ಚರ್ಯವೇನೆಂದರೆ ಈ ಗುಂಪುಗಳಲ್ಲಿರುವವರೆಲ್ಲಾ ಒಬ್ಬನೇ ದೇವರನ್ನು ಬೈಬಲ್ ತಿಳಿಯ ಪಡಿಸಿರುವ

ದೇವರನ್ನು ಆರಾಧಿಸುತ್ತಿದ್ದೇವೆ ಎನ್ನುತ್ತಾರೆ.

ಬೈಬಲಿನಲ್ಲಿ ನಮಗೆ ಕಾಣುವ ವಿಗ್ರಹಗಳು, ಮನುಷ್ಯರ ಚಮತ್ಕಾರದ ಕಲ್ಪನೆಯಿಂದ ಬದಲಾಯಿಸಿದ ಬಂಗಾರ, ಬೆಳ್ಳಿ, ಕಟ್ಟಿಗೆ, ಕಲ್ಲುಗಳಿಂದಮಾಡಿದ ಗೊಂಬೆಗಳು (ಯೋಹಾನ 44:9–20; ಹಬಕ್ಕೊ 2:18–19).

ಇಂದಿನ ಮನುಷ್ಯರಾದರೆ ತಮ್ಮ ಊಹೆಗಳನ್ನೇ ವಿಗ್ರಹಗಳಾಗಿ ಮಾಡಿಕೊಳ್ಳುತ್ತಿದ್ದಾರೆ. ಇವೆಲ್ಲ ಮತಶಾಖೆಗಳ ಪ್ರಮಾಣ ಪುಸ್ತಕಗಳು, ಆಚಾರಗಳು, ಪಾರಂಪರ್ಯಗಳಿಂದ ಉದ್ಭವಿಸುತ್ತವೆ. ದೇವರೊಂದಿಗೆ ನಡೆಯದವನೊಂದಿಗೆ ನಡೆಯುಲು ದೇವರು ವಿಮುಖಿ (ಅಮೋಸ 3:3). ಇಸ್ರಾಯೇಲರು ವಿಗ್ರಹಾರಾಧನೆ ಮಾಡುವಾಗ ದೇವರು ಹೇಗೆ ಅವರೊಂದಿಗೆ ನಡೆಯಲಿಲ್ಲವೊ, ಹಾಗೆಯೇ ಆಧುನಿಕ ವಿಗ್ರಹಾರಾಧಕರೊಂದಿಗೆ ಕೂಡ ಆತನು ನಡೆಯುವುದಿಲ್ಲ.

ಬೈಬಲ್ ಸೂಚಿಸುವ ದೇವರು ಮತಶಾಖೆಗಳ ದೇವರಲ್ಲ. ದೈವತ್ವದ ಪ್ರತ್ಯೇಕತೆಯನ್ನು ಕ್ರೈಸ್ತರು ಗುರುತಿಸಬೇಕು. ಒಬ್ಬನೇ ಸತ್ಯದೇವರನ್ನು ಕುರಿತು ಸತ್ಯವನ್ನು ವಕ್ರೀಕರಿಸಲು ಯಾವುದಕ್ಕೂ ಅವಕಾಶ ಕೊಡಬಾರದು (ಎಫೆಸ 4:4–6).

ಅನ್ಯರ, ವಿಗ್ರಹಾರಾಧನೆಯನ್ನು ಆತ್ಮೀಯ ವ್ಯಭಿಚಾರವಾಗಿ ದೇವರು ಪರಿಗಣಿಸುತ್ತಿದ್ದಾನೆ (ಯೆರೆಮಿ 3:2,6, ನ್ಯಾಯಸ್ಥಾ 2:17, ಯೆಹೆಜ್ಕೇ 6:9). ಒಬ್ಬನೇ ಒಬ್ಬ ದೇವರಿದ್ದಾನೆ. ಆತನಲ್ಲಿ ನಾವು ಜೀವಿಸುತ್ತಿದ್ದೇವೆ, ಚಲಿಸುತ್ತಿದ್ದೇವೆ, ಇರುತ್ತೇವೆ (ಅ.ಕೃ 17:28,31) ಅಪೊಸ್ತಲನಾದ ಪೌಲನು ಅಥೇನೆಯಲ್ಲಿ ವಿಗ್ರಹಾರಾಧಕರಿಗೆ ಒಬ್ಬನೇ ಸತ್ಯದೇವರನ್ನು ಕುರಿತು ಎಷ್ಟು ಧೈರ್ಯವಾಗಿ ಬೋಧಿಸಿದನೋ ಅಷ್ಟೇ ಧೈರ್ಯದೊಂದಿಗೆ ನಾವು ಕೂಡ ಆ ಸತ್ಯದೇವರನ್ನು ಕುರಿತು ಲೋಕಕ್ಕೆ ತಿಳಿಯ ಪಡಿಸಬೇಕು. ಪ್ರಿಯರಾದ ಮಕ್ಕಳೇ ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ (1ಯೋಹಾನ 5:21).

## ದೈವತ್ವವು ಏನು ಆಗಿದೆ?

ದೇವರ ತತ್ವವು ಬದಲಾವಣೆ ಇಲ್ಲದ್ದು (ಇಬ್ರಿಯಾ 13:8). "ಎಲ್ಲಾ ದಾನಗಳೂ ಕುಂದಿಲ್ಲದ ಎಲ್ಲಾ ವರಗಳು ಮೇಲಣಿಂದ ಸಕಲ ವಿಧವಾದ



ಬೆಳಕಿಗೂ ಮೂಲ ಕಾರಣನಾದವನಿಂದ ಇಳಿದು ಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ" (ಯಾಕೋಬ 1:17). ದೇವರ ತತ್ವದಲ್ಲಿ ಈ ಲಕ್ಷಣಗಳಿರುತ್ತವೆ. ದೈವತ್ವವು ನೀತಿ ಯಥಾರ್ಥತೆಯನ್ನು ಹೊಂದಿರುತ್ತದೆ. ಆತನ ಕೃಪೆ ಅಸಮಾನವಾದದ್ದು. ಪ್ರೀತಿ ಕರುಣೆಯುಳ್ಳದ್ದೂ (ಎಫೆಸ 2:1–5; ರೋಮಾ 5:8). ಆತನ ಕೃಪೆ ಅಸಮಾನವಾದದ್ದು. ಪ್ರೀತಿಸುತ್ತಿರುವ ದೇವರು ಪಕ್ಷಪಾತಿಯಲ್ಲ (ಅ.ಕೃ 19:39, ರೋಮಾ 2:1). ಆತನು ಕೋಪವುಳ್ಳವನು ಅವಿಧೇಯರನ್ನು ಶಿಕ್ಷಿಸಲು ಹಿಂದೆ ಸರಿಯುವುದಿಲ್ಲ (ರೋಮಾ 1:18, ಎಫೆಸ 5:6). ಆತನಲ್ಲಿ ನಂಬಿಗಸ್ತನಾಗಿರುವವರೆಲ್ಲರನ್ನು ಆತನು ಪರಲೋಕಕ್ಕೆ ಸೇರಿಸುವನು (ಮತ್ತಾಯ 25:34,45). ಅನೀತಿವಂತರನ್ನು ನರಕ ಪಾತ್ರರನ್ನಾಗಿಸುತ್ತಾನೆ (ಮತ್ತಾಯ 24:41,46). ದೇವರು ತನ್ನ ಚಿತ್ತವನ್ನು ಮನುಷ್ಯನಿಗೆ ತಿಳಿಯ ಪಡಿಸಿದ್ದಾನೆ (2ತಿಮೊಥೆ 3:16–17,2 ಪೇತ್ರ 1:3). ಅದಕ್ಕೆ ನಾವು ಬದ್ದರಾಗಿರಬೇಕು (ಮತ್ತಾಯ 7:21–23). ಆತನ ವಾಕ್ಯದಿಂದಲೇ ಮನುಷ್ಯರೆಲ್ಲರಿಗೂ ತೀರ್ಪು ನಡೆಯುತ್ತದೆ. (ಪ್ರಕಟನೆ 20:12–15).

## ಮುಕ್ತಾಯ:

ಬೈಬಲ್ ಬೋಧಿಸುವ ದೇವರ ಲಕ್ಷಣಗಳೆಲ್ಲವನ್ನೂ ಹೊಸ ಒಡಂಬಡಿಕೆಯ ಸಭೆ ಬೋಧಿಸುತ್ತಿದೆ. ಆದ್ದರಿಂದ ದೈವತ್ವದಲ್ಲಿ ಮೂವರು ವ್ಯಕ್ತಿಗಳಿದ್ದಾರೆ. ಮೂವರೂ ಸಮಾನರೇ ಎಂದು ದೈವ ಲಕ್ಷಣಗಳೆಲ್ಲವನ್ನೂ ಹೊಂದಿದ್ದಾರೆಂದು, ಏಕವಾಗಿದ್ದಾರೆಂದು ಕ್ರಿಸ್ತನ ಸಭೆ ಬೋಧಿಸುತ್ತಿದೆ. ಮತಶಾಖೆಗಳಿಗೆ ಭಿನ್ನವಾಗಿ ದೇವರು ಬದಲಾವಣೆ ಇಲ್ಲದವನೆಂದು ವ್ಯಕ್ತಿಗಳ ಲಕ್ಷಣಗಳುಳ್ಳ ಮೂವರು ವ್ಯಕ್ತಿಗಳಾಗೀ ಒಬ್ಬನೇ ದೇವರಿದ್ದಾನೆಂದು ಬೈಬಲ್ ಬೋಧಿಸುತ್ತಿದೆ. ನಾವೆಲ್ಲರೂ ನಿತ್ಯತ್ವದಲ್ಲಿ ಪ್ರವೇಶಿಸುತ್ತೇವೆವು. ಅದು ಪರಲೋಕವಾ? ನರಕವಾ? ನಾವೇ ನಿರ್ಧಾರ ಮಾಡಿಕೊಳ್ಳಬೇಕು.

# 11. ಹೊಸ ಒಡಂಬಡಿಕೆಯ ಸಭೆಯು ಸಹವಾಸದಲ್ಲಿ ದೈವಿಕವಾದದ್ದು

**(The New Testament Church is Divine in Fellowship)**

ಆತ್ಮೀಯ ವಿಷಯವಾದ ಸಂಬಂಧಗಳಲ್ಲಿ ಮನುಷ್ಯರು ಬಯಸುವುದು ಬೈಬಲ್ ಮಾತ್ರವೇ ಬೈಬಲ್ ಹೇಳುವ ಸಹವಾಸದಿಂದಲೇ, ನಾವು ನಡೆದು ಕೊಳ್ಳಬೇಕು. ಕಪಟ ಸಹವಾಸದ ಕಡೆ ಹೋಗಬಾರದು.

**ಬೈಬಲ್ ಸಹವಾಸವು ದೇವರೊಂದಿಗೂ, ಆತನ ಸಹವಾಸ ಹೊಂದಿರುವವರೊಂದಿಗೂ ಇರಬೇಕು.** "ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ, ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂತದ್ದು" (1ಯೋಹಾನ 1:3). ದೇವರನ್ನು ತಿಳಿದುಕೊಳ್ಳಲು ಆರಂಭಿಸಿದ ನಂತರ ಆತನೊಂದಿಗಿರುವ ಸಂಬಂಧವನ್ನು ಕ್ರಮವಾಗಿ ಹೆಚ್ಚಿಸಿಕೊಳ್ಳುತ್ತಾ ಆತನು ಹೇಳಿದ್ದನ್ನು ಗ್ರಹಿಸಿಕೊಂಡು ಅನುಸರಿಸುವುದರಲ್ಲಿ ಸಹವಾಸವು ಅಭಿವೃದ್ಧಿಯಾಗುತ್ತದೆ. ಬೈಬಲ್ ಬೋಧನೆಯನ್ನು ಅನುಸರಿಸುವುದರಿಂದ ದೇವರೊಂದಿಗೆ ಸಹವಾಸ ಏರ್ಪಡುತ್ತದೆ. ಬೈಬಲ್ ಹೇಳುವ ಉಪದೇಶವು ನಿಜವಾದ ಸಹವಾಸ, ನಿಜವಾದ ಐಕ್ಯತೆ ಎಂಬಿವುಗಳು ಬಿಡಿಸಲಾರದ ಸಂಗತಿಗಳು.

### ಬೈಬಲ್ ಸಹವಾಸದ ಅವಶ್ಯಕತೆ:–

ಆತ್ಮ ಪರವಶರಾಗಿ ಅಪೊಸ್ತಲರು ನಡೆಸಿದ ಹಾಗೆ ಪ್ರಾರಂಭದ ಸಭೆಯು ಅಪೊಸ್ತಲರ ಬೋಧನೆಯನ್ನು (ಹೊಸ ಒಡಂಬಡಿಕೆ) ಅನುಸರಿಸಿ, ಒಂದಕ್ಕೊಂದು ದೇವರೊಂದಿಗೆ ಸಹವಾಸ ಹೊಂದಿದ್ದರು. ಇವರು ಅಪೊಸ್ತಲರ ಬೋಧನೆಯನ್ನು ಕೇಳುವವುದರಲ್ಲಿಯೂ ಸಹೋದರರ ಅನ್ಯೋನ್ಯತೆಯ ಲ್ಲಿಯೂ, ರೊಟ್ಟಿ ಮುರಿಯುವುದರಲ್ಲಿಯೂ ನಿರತರಾಗಿದ್ದರು (ಅ.ಕೃ2:42). ಆದ್ದರಿಂದ ಕ್ರಿಸ್ತನ ಸಭೆಯು ಬೈಬಲ್ ಸಂಬಂಧವಾದ ಸಹವಾಸವನ್ನು ಅಪೇಕ್ಷಿಸಿ ಮುಂದುವರೆಸುವುದು ಅವಶ್ಯಕ. ದೇವರು ಸ್ಪಷ್ಟವಾಗಿ ಬಯಸುವುದು ಸಾಧ್ಯವೇ ಕ್ರೈಸ್ತವ ಸಹವಾಸವನ್ನು ಕುರಿತು ಬೈಬಲ್ ಹೇಳುತ್ತದೆ. ಈ ಸಹವಾಸವನ್ನು ಜಾರಿಯಲ್ಲಿತರುವುದು ಸಾಧ್ಯವೆ.



ಸುವಾರ್ತೆ ಬೋಧನೆಯನ್ನು ಬದಲಾಯಿಸಲು ಮಾಡುವ ಯಾವ ಪ್ರಯತ್ನವಾದರೂ ಸಹವಾಸಕ್ಕೆ ಅಡ್ಡಿಯನ್ನುಂಟು ಮಾಡುವುದು. ಇದು ದೇವರೊಂದಿಗೆ ಮತ್ತು ಇತರರೊಂದಿಗೆ ಅಡ್ಡಿಯನ್ನುಂಡು ಮಾಡುತ್ತದೆ. (ಗಲತ್ಯ 1:6–9; 1ಯೋಹಾನ 1:1–7; 2ಯೋಹಾನ 9–11). ಬೈಬಲ್ ಬೋಧನೆಯನ್ನು ಹೃದಯ ಪೂರ್ವಕವಾಗಿ ಅಂಗೀಕರಿಸುವುದೇ ಸಹವಾಸಕ್ಕೆ ಆಧಾರ. ಅದು ಮಾನಸಿಕವಾಗಿ ವಾಸ್ತವಿಕತೆಯನ್ನು ಅಂಗೀಕರಿಸುವುದು ಮಾತ್ರವಲ್ಲದೆ, ಅವುಗಳನ್ನು ಅನುಸರಿಸಬೇಕು (ಉದಾ:– ಎಫೆಸ 4:4–6ರಲ್ಲಿ ಹೇಳಿರುವ 7 ಒಂದೊಂದು ಸಂಗತಿಗಳು ಅಂಗೀಕರಿಸಿದರೆ ಸಾಲದು, ಅನುಸರಿಸಬೇಕು).

### ಸಹವಾಸ ಮತ್ತು ಕ್ರಮಶಿಕ್ಷಣ ಜೊತೆಯಾಗಿಯೇ ಇರುತ್ತವೆ:

ಮೊದಲನೆಯದಾಗಿ ಸಹವಾಸವು ಶಿಷ್ಯತ್ವದ ಆಜ್ಞೆಯಾಗಿದೆ. "ದಿದು ಮನೆಂಬ ತೋಮನು ಜೊತೆ ಶಿಷ್ಯರಿಗೆ ನಾವು ಸಹ ಹೋಗಿ ಆತನೊಡನೆ ಸಾಯೋಣ ಎಂದು ಹೇಳಿದನು" (ಯೋಹಾನ 11:16). ಅಪೊಸ್ತಲನಾದ ಪೌಲನಿಗೊ, ಪಿಲಿಪ್ಪಿಯಲ್ಲಿರುವ ಸಭೆಗೂ ಸಮಾನ ಶಿಷ್ಯತ್ವದಿಂದಾಗಿ ಸಹವಾಸ ವೇರ್ಪಟ್ಟಿತು. "ನೀವು ಮೊದಲಿನಿಂದ ಇಂದಿನವರೆಗೂ ಸುವಾರ್ತಾ ಪ್ರಚಾರದಲ್ಲಿ ಸಹಕಾರಿಗಳಾಗಿದ್ದೀರೆಂದು ನನ್ನ ದೇವರಿಗೆ ಕೃತಜ್ಞತಾಸ್ತುತಿ ಮಾಡುತೇನೆ"(ಫಿಲಿಪ್ಪಿ 1:5). ಎಂದು ಪೌಲನು ಫಿಲಿಪ್ಪಿ ಸಭೆಗೆ ತಿಳಿಸಿದನು. ಶಿಷ್ಯತ್ವವು ಸಹವಾಸಕ್ಕೆ ಒಂದು ಆಜ್ಞೆ ಎನ್ನುವುದು ಕೂಡ ಸತ್ಯವೇ. ಆದದರಿಂದ ಅನ್ಯರು ಶಿಷ್ಯರಾದಾಗ ಅವರು ದೇವರೊಂದಿಗೂ, ಕ್ರೈಸ್ತರೊಂದಿಗೂ ಸಹವಾಸ ಹೊಂದಿರುತ್ತಾರೆ. "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರು ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ" (ಎಫೆಸ 2:19). "ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೋದ್ಯರೊಂದಿಗೆ ಬಾಧ್ಯರೂ, ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ" (ಎಫೆಸ 3:6).

ಒಬ್ಬನು ನಿಜವಾಗಿ ಕ್ರಿಸ್ತನ ಶಿಷ್ಯನು, ಕ್ರೈಸ್ತವನಾಗದಿದ್ದರೆ ಅವನು ದೇವರೊ ೦ದಿಗೂ, ಆತನ ಸಹವಾಸ ಹೊಂದಿರುವವರೊಂದಿಗೂ ಸಹವಾಸ ಹೊಂದಿರು ವುದಿಲ್ಲ. ಸುವಾರ್ತೆ ವಿಷಯದಲ್ಲಿ ಪಾಲುಗಾರರಾಗುವುದರಿಂದ ಈ ಸಹವಾಸವು ಪ್ರತಿಫಲವಾಗಿರುತ್ತದೆ (ಫಿಲಿಪ್ಪಿ 1:5). ಸುವಾರ್ತೆಯಿಂದಗಿ ಬೈಬಲ್

ಸಂಬಂಧವಾದ ಸಹವಾಸ ಸಾಧ್ಯವಾಗುತ್ತದೆ.

### ದೇವರೊಂದಿಗೆ ಸೇರಿ ಕೆಲಸಮಾಡುವುದು:

ಸಹವಾಸವೆಂದರೆ ಸಹೋದರರು ಸೇರಿ ಊಟ ಮಾಡುವುದೇ ಎಂಬ ಭಾವನೆಯನ್ನು ಇಂದು ನಾವು ಅಂದು ಕೊಂಡಿದ್ದೇವೆ. ಆದರೆ ಬೈಬಲ್‌ನೊಂದಿಗೆ ಹೋಲಿಸಿ ನೋಡಿದರೆ ಈ ರೀತಿಯಾದ ಸಹವಾಸವನ್ನು ಕುರಿತು ಹೇಳುವ ಲೇಖನೆಗಳು ಸ್ವಲ್ಪವೇ (ಉದಾ: ಅ.ಕೃ 2:16). ಅನೇಕ ಲೇಖನೆಗಳು ದೇವರೊಂದಿಗೆ ಸೇರಿ ಕೆಲಸ ಮಾಡುವುದನ್ನು ಕುರಿತು ಹೇಳುತ್ತವೆ. ಈ ಸಂದರ್ಭದಿಂದಲೇ ಪೌಲನು ತಿಮೊಥೆಯನ್ನು "ನನ್ನ ಜೊತೆ ಕೆಲಸದವನು" ಎಂದು ಹೇಳಿದ್ದಾನೆ (ರೋಮಾ 16:3–16, ಕೊಲೆಸ್ಸೆ 4:10–15).

ಸಹವಾಸದಲ್ಲಿ ಸತ್ಯದ ವಿಷಯವಾಗಿ ಜೊತೆ ಕೆಲಸದವರಾಗಿರಬೇಕು (3ಯೋಹಾನ 8:). ಸಹವಾಸದಲ್ಲಿರುವ ಪ್ರಾರಂಭದಲ್ಲಿ (ಆದಿಯಲ್ಲಿ) ಕ್ರೈಸ್ತರಾದ ಎಪಫ್ರ, ತುಖಿಕನನ್ನು ಜೊತೆಯ ದಾಸರೆಂದು ಕರೆಯಲ್ಪಟ್ಟರು (ಕೊಲೊಸ್ಸೆ 1:7;4:7). ಎಫ್ರೋದಿತನನ್ನು ಜೊತೆ ಕೆಲಸದವನೂ, ಸಹಭಟನೆಂದು ಹೇಳಿದನು ಪಿಲಿಪ್ಪಿ (2:25).

### ಸಹವಾಸವು ಮತ್ತು ಆರಾಧನೆ:

ಆರಾಧನೆಗೆ ಮಾತ್ರವೇ ಸೀಮಿತವಾಗಿದ್ದರೂ ಕ್ರೈಸ್ತರು ದೇವರನ್ನು ಆರಾಧಿಸುವಾಗ ಸಹವಾಸವನ್ನು ಅನುಭವಿಸುತ್ತಾರೆ. ಸಹವಾಸವು ಎನ್ನುವ ಪದ 'ಕೋಯಿನೋನಿಯಾ' ಎನ್ನುವ ಗ್ರೀಕ್ ಪದದಿಂದ ಉದ್ಭವಿಸಿದೆ. ಈ ಪದವು ಕರ್ತನ ಭೋಜನಕ್ಕೆ ಅನ್ವಯಿಸುತ್ತದೆ. "ನಾವು ದೇವರಿಗೆ ಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನ ಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರ ರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ" (1ಕೋರಿಂಥ 10:16). ಪೌಲನು ಪಾಲುಗಾರರಾಗುವುದು (ಅಂದರೆ ಸಹವಾಸ) ಎನ್ನುವ ಪದವು 1ಕೋರಿಂಥ 10:20ರಲ್ಲಿ ಪುನಃ ಬಳಸಲ್ಪಟ್ಟಿದೆ. ಆರಾಧನೆಯಲ್ಲಿ ದೇವರಿಗೂ ಮಾನವನಿಗೂ ಮತ್ತು ಮನುಷ್ಯ ಮನುಷ್ಯರ ಮಧ್ಯ ಸಹವಾಸ ಏರ್ಪಡುತ್ತದೆ. ಆರಾಧನೆಯಲ್ಲಿ ಕೂಡುವುದರಿಂದ ಈ ಸಹವಾಸ ಏರ್ಪಡುತ್ತದೆ. ಗ್ರೀಕ್‌ನಲ್ಲಿ ಸಹವಾಸ ಎನ್ನುವ ಪದ ಹಂಚಿಕೊಳ್ಳುವುದು, ಪಾಲು



ತೆಗೆದುಕೊಳ್ಳುವುದು ಎಂದು ಅನುವಾದಿಸಲ್ಪಟ್ಟಿದೆ (ಗಲಾತ್ಯ 6:6, ಫಿಲಿಪ್ಪಿ 4:14–15; (1ತಿಮೊಥೆ 6:18; ಇಬ್ರಿಯ 13:16). 2ಕೋರಿಂಥ 8:4ರಲ್ಲಿ ಕೊಡುವುದು ಸಹವಾಸವೆಂದು ಕೂಡ ಹೇಳಲ್ಪಟ್ಟಿದೆ.

### ಸಹವಾಸವನ್ನು ಹೊಂದಿ ಇರುವವುಗಳು ಮತ್ತು ಹೊಂದಿರದೇ ಇರಬೇಕಾದವುಗಳು:

ದೇವರ ಮಕ್ಕಳು ಕೆಲವರೊಂದಿಗೆ ಸಹವಾಸ ಮಾಡುವುದು ಬಹಿಷ್ಕರಿಲ್ಪಟ್ಟಿದೆ. ಇದನ್ನು ಎರಡು ಲೇಖನ ಭಾಗಗಳು ವಿವರಿಸುತ್ತವೆ "ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? (2ಕೋರಿಂಥ 6:14). "ಕತ್ತಲೆಗೆ ಸಂಭಂದವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೇ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ" (ಎಫೆಸ 5:11).

ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಎಂದಾಗ ಏನೂ ಇಲ್ಲ ಎಂದು ಉತ್ತರ ಬರುತ್ತದೆಯಲ್ಲವೇ? ಜೊತೆ ಎಂದರೆ ಸಹವಾಸ (2ಕೋರಿಂಥ 6:14). ಒಬ್ಬನು ಸತ್ಯಕ್ಕೂ ಇನ್ನೊಬ್ಬನು ಅಸತ್ಯಕ್ಕೂ ದಾಸರಾಗಿದ್ದಾಗ ಅವರಿಗೆ ಯಾವ ವಿಧವಾದ ಸಹವಾಸವೂ ಏರ್ಪಡುತ್ತದೆ?. ಅಷ್ಟೇ ಅಲ್ಲ "ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ (1ಕೋರಿಂಥ 15:33). ಸಹವಾಸವೆಂದಾಗ "ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆ (ಸಹವಾಸ) (ಫಿಲಿಪ್ಪ 2:1). ತಂದೆಯೊಂದಿಗೆ ಸಹವಾಸ (1ಯೋಹಾನ 1:3). ಒಂದಕ್ಕೊಂದು ಸಹವಾಸ (1ಯೋಹಾನ 1:7). ಸುವಾರ್ತೆಯಲ್ಲಿ ಸಹವಾಸ (ಫಿಲಿಪ್ಪ1:5). ಸತ್ಯವನ್ನು ಅನುಸರಿಸುತ್ತಾ ಬೆಳಕಿನಲ್ಲಿ ನಡೆಯುವವರಿಗೆ ಸಹವಾಸವು ಬಚ್ಚಿಡಲ್ಪಟ್ಟಿದೆ (1ಯೋಹಾನ 1:6–7). ಇಂತವರು ಮಾತ್ರವೇ ಕ್ರಿಸ್ತನ ರಕ್ತದಿಂದ ಶುದ್ಧಿ ಮಾಡಲ್ಪಡುತ್ತಾರೆ.

### ಮುಕ್ತಾಯ:

ಕಪಟ ಸಹವಾಸದಿಂದ ನಿತ್ಯತ್ವದಲ್ಲಿ ಆದರಣೆಯೇನೂ ಲಭಿಸುವುದಿಲ್ಲ. ಆದರಿಂದಾಗಿ ಬೈಬಲ್ ಅದನ್ನು ಸವಿಸ್ತಾರವಾಗಿ ತಿಳಿಸುತ್ತಿರುವುದರಿಂದ ಅದನ್ನು

ಕುರಿತು ನಾವು ಅಜ್ಞಾನಿಗಳು ಆಗಬಾರದು. ಬೈಬಲ್ ಸಹವಾಸವು ದೇವರೊಂದಿಗೂ ಆತನೊಂದಿಗೆ ಸಹವಾಸ ಹೊಂದಿರುವವರೊಂದಿಗೂ ಇರಬೇಕು. ಬೈಬಲ್ ಬೋಧನೆ ನಿಜವಾದ ಸಹವಾಸ, ನಿಜವಾದ ಐಕ್ಯತೆಗಳು ಬಿಡಿಸಲಾರದಂತವುಗಳು.

ತದನಂತರ ದೇವರು ಒಪ್ಪಿಕೊಳ್ಳೂವ ಸಹವಾಸವು ತಪ್ಪದೇ ಹೊಂದಿರಬೇಕು. ಲೇಖನಾರ್ಥವಲ್ಲದ ಸಹವಾಸ ಹೊಂದಿರಬೇಕೆಂದು ದೇವರ ಜನರು ಬಯಸಬಾರದು. ಶಿಷ್ಯತ್ವಕ್ಕೆ ಸಹವಾಸವು ಎಷ್ಟು ಮುಖ್ಯವೋ? ಸಹವಾಸಕ್ಕೆ ಶಿಷ್ಯತ್ವವು ಅಷ್ಟೇ ಮುಖ್ಯ. ಬೈಬಲ್ ಬೋಧನೆಯನ್ನು ಅನುಸರಿಸು ವುದರಿಂದ ಯಥಾರ್ಥವಾದ ಸಹವಾಸವು ಸಾಧ್ಯವಾಗುತ್ತದೆ. ಅದು ಸುವಾರ್ತೆ ಯಲ್ಲಿ ಪಾಲುಗಾರರಾಗುವದರಿಂದಲೂ ಶ್ರಮೆಗಳಲ್ಲಿ ಪಾಲುಗಾರರಾ ಗುವುದರಿಂ ದಲೂ, ಸತ್ಯಾರಾಧನೆಯಲ್ಲಿ ಪಾಲುಹೊಂದುವುದರ ಮೂಲಕ ವಾಗಿಯೂ ಸಾಧ್ಯವಾಗುತ್ತದೆ.



## 12. ಹೊಸ ಒಡಂಬಡಿಕೆಯ ಸಭೆಯು ಆತ್ಮದಲ್ಲಿ ದೈವೀಕವಾದದ್ದು
### (The New Testament Church is Divine in Spirit)

ಕ್ರೈಸ್ತತ್ವದಲ್ಲಿ ಇಂದು ಪವಿತ್ರಾತ್ಮ ನನ್ನು ಕುರಿತು ಆತನ ಕೆಲಸವನ್ನು ಕುರಿತು ಹೆಚ್ಚಾಗಿ ಹೇಳಲ್ಪಡುತ್ತಿದೆ. ಪರಿಶುದ್ಧಾತ್ಮನ ಮೂಲಕ ನಡೆಸಲ್ಪಡುತ್ತಿದ್ದೇವೆಂದು ಹೇಳಿಕೊಳ್ಳುವ ಅನೇಕ ಮತಶಾಖೆಗಳವರು ಭಿನ್ನವಾದ ಬೋಧನೆಯನ್ನು ಮಾಡುತ್ತಿದ್ದಾರೆ. ಇದು ದುರದೃಷ್ಟಕರವಾದ ಸಂಗತಿ. ಆದರೆ ಪವಿತ್ರಾತ್ಮನು ಕುರಿತು ಬೈಬಲ್ ಏನು ಹೇಳುತ್ತಿದೇ? ಮತ್ತು ಮೊದಲನೇಯ ಶತಮಾನದಲ್ಲಿ ಸಭೆಯೊಂದಿಗೂ, ಪ್ರಸ್ತುತ ಇರುವ ಸಭೆಗಳಲ್ಲಿಯೂ ಪವಿತ್ರಾತ್ಮನ ಕೆಲಸದಲ್ಲಿ ಏನಾದರೂ ವ್ಯತ್ಯಾಸವು ಇದೆಯಾ? ಪವಿತ್ರಾತ್ಮನ ದೀಕ್ಷಾಸ್ನಾನದ ಪ್ರಯೋಜನವೇನು? ಅಪೊಸ್ತಲರಲ್ಲದೆ ಇತರರು ಮಾಡಿದ ಅದ್ಭುತಗಳ ಸ್ಥಾವರ ಎಲ್ಲಿ? ಪವಿತ್ರಾತ್ಮನಿಗೂ ಅದ್ಭುತಗಳಿಗೂ ಪ್ರತ್ಯಕ್ಷ ಸಂಬಂಧವಿರುವ ಹಾಗೆ ಈ ಪ್ರಶ್ನೆಗಳು ತಿಳಿಸುತ್ತವೆ. ಕೆಳಗಿನ ಸಂಗತಿಗಳು ಇದನ್ನು ತಿಳಿಸುತ್ತವೆ.

ದೇವರನ್ನು ಕುರಿತು ಬೈಬಲ್ ಮೊದಲನೆಯ ವಚನದಲ್ಲಿಯೇ ಹೇಳಲ್ಪಟ್ಟಿದೆ.(ಆದಿ1:2). ಆದರೆ ಪವಿತ್ರಾತ್ಮನು ಮಾನವನೊಂದಿಗೆ ನೇರವಾಗಿ ಎಲ್ಲಾಕಾಲ ಕೆಲಸ ಮಾಡಿಲ್ಲ. ಹಳೆ ಒಡಂಬಡಿಕೆ ಬರೆಯುವುದು ಮುಗಿಸಲ್ಪಟ್ಟ ಅನೇಕ ನೂರು ವರ್ಷಗಳವರೆಗೆ ನಿಜವಾಗಿ ಸ್ನಾನಿಕನಾದ ಯೋಹಾನನು ಕ್ರಿಸ್ತನ ಜನನದ ವರೆಗೂ ದೇವರು ಮೌನವಾಗಿದ್ದರು (ಲೂಕ 1:5–17,26–33). ಆ ಕಾಲದಲ್ಲಿ ಆತನು ತಿಳಿಸಿದ ಮಾಡಿದ ಹೊಸ ಸಂಗತಿ ಏನೂ ಇಲ್ಲ.

ದೇವರು ಅದ್ಭುತರೀತಿಯಾಗಿ ಮನುಷ್ಯನೊಂದಿಗೆ ಸಹ ಅಂತಹ ಕ್ರಿಯೆ ನಡೆಸುತ್ತಿಲ್ಲವೆಂಬುದು ವಾಸ್ತವ. ಮಾನವನ ಚರಿತ್ರೆಯ ಆರು ಸಾವಿರ ವರುಷಗಳ ಕಾಲದಲ್ಲಿ ದೇವರು ಅದ್ಭುತರೀತಿಯಾಗಿ ಕ್ರಿಯೆಮಾಡಿದ ಸಂಘಟನೆಗಳು ಕಡಿಮೆಯೇ ಇವೆ. ಆತನು ಅದ್ಭುತರೀತಿಯಾಗಿ ಸಮಸ್ತವನ್ನು ಸೃಷ್ಟಿಸಿದ ನಂತರ, ಸಮಸ್ತವೂ ಆತನ ಪ್ರಕೃತಿ ಸೂತ್ರದ ಪ್ರಕಾರ ಅಭಿವೃದ್ಧಿ ಹೊಂದುವ ಹಾಗೆ ಆತನು ನಿಯಮಿಸಿದನು. ಹಳೆ ಒಡಂಬಡಿಕೆಯಲ್ಲಿ ಸತತವಾಗಿ ಆತನ ತೀರ್ಪುಗಳನ್ನು ತಿಳಿಸುವ ಹಾಗೆ ಕಾಣಿಸಿದರೂ ಅವು ಮಾತ್ರವೇ ಅನುದಿನದ ಸಂಘಟನೆಗಳಲ್ಲ.

ಮೇಲೆ ಹೇಳಿದ ರೀತಿಯಾಗಿ ಒಡಂಬಡಿಕೆಗಳ ಮಧ್ಯಕಾಲದಲ್ಲಿ ದೇವರು ಮೌನವಾಗಿದ್ದನು. ಮೊದಲನೆಯ ಶತಮಾನದಲ್ಲಿ ಸುವಾರ್ತೆಯ ದಾಖಲೆಗಳಲ್ಲಿ ಪವಿತ್ರಾತ್ಮನ ಕೆಲಸ ಪುನಃ ಕಾಣಿಸುತ್ತಿದ್ದರೂ ಪವಿತ್ರಾತ್ಮನ ಅದ್ಭುತ ವರಗಳು

ಕ್ರಿಯೆಗಳು ನಿಂತು ಹೋಗುವವೆಂದು ಪ್ರವಾದನೆಗಳು ತಿಳಿಯಪಡಿಸುತ್ತವೆ (1ಕೋರಿಂಥ 13:8–13; ಎಫೆಸ4:11–14). ಆದ್ದದರಿಂದ ಪವಿತ್ರಾತ್ಮನು ಇಂದು ಅದ್ಭುತರೀತಿಯಾಗಿ ಕೆಲಸ ಮಾಡುವುದಿಲ್ಲವೆಂದು ಪ್ರತಿ ಬೈಬಲ್ ವಿಧ್ಯಾರ್ಥಿ ತಿಳಿದಿರುವ ಸಂಗತಿಯೇ.

ಮೊದಲನೆಯ ಶತಮಾನದ ಕ್ರಿಸ್ತನ ಸಭೆಯು ಸುವಾರ್ತೆಯನ್ನು ಅದ್ಭುತ ರೀತಿಯಾಗಿ ಹೊಂದುತ್ತಾ, ಅದು ನಿರ್ಧರಿಸಲ್ಪಡುತ್ತಿದೆ ಎನ್ನುವ ಸಂಗತಿ ತಿಳಿದು ಕೊಂಡಿದೆ. ಆದ್ದರಿಂದ ಅದು ಆತ್ಮದಲ್ಲಿ ದೈವಿಕವಾದದ್ದು (2ಪೇತ್ರ 1:21;ಮಾರ್ಕ 16:20). ನಂತರದ ಕಾಲದಲ್ಲಿರುವ ಕ್ರಿಸ್ತನ ಸಭೆಯು ಇಂದಿನ ಕ್ರಿಸ್ತನ ಸಭೆಯೂ ಕೂಡ ಸುವಾರ್ತೆಯು ಅದ್ಭುತ ರೀತಿಯಾಗಿ ತಿಳಿಯ ಪಡಿಸಲಾಗಿದೆಂದು ಗ್ರಹಿಸಿ, ಹಾಗೆ ಬೋಧಿಸುವುದರಲ್ಲಿ ಆತ್ಮದಲ್ಲಿ ದೈವಿಕವಾದದ್ದು. ಸುವಾರ್ತೆ ಅದ್ಭುತ ರೀತಿಯಾಗಿ ಅನುಗ್ರಹಿಸಲ್ಪಟ್ಟು ಸ್ಥಿರಪಡಿಸಲ್ಪಟ್ಟಿದೆಯೆಂದು ಇಂದಿನ ಸಭೆ ನಂಬುತ್ತದೆ. ಸುವಾರ್ತೆಯನ್ನು ಸಾರಲು ಪವಿತ್ರಾತ್ಮನು ಅಂದು ಕೆಲಸಮಾಡಿದನು. ಆತನು ಇಂದು ಹಾಗೆ ಕೆಲಸ ಮಾಡುತ್ತಿಲ್ಲ. ಪ್ರತ್ಯೇಕವಾಗಿ ಕೊಡಲ್ಪಡುತ್ತಿದ್ದ ಕಾಲ ಸಂಪೂರ್ಣವಾಯಿತು, ಅದರ ಸ್ಥಾನದಲ್ಲಿ ಸ್ಥಿರಪಡಿ ಸಲ್ಪಟ್ಟು ಲಿಖಿತ ರೂಪದಲ್ಲಿ ಈಗ ಬೈಬಲ್ ಇದೆ (1ಕೋರಿಂಥ 13:8–13, ಯಾಕೋಬ 1:25). ಸಭೆಯಲ್ಲಿ ಪವಿತ್ರಾತ್ಮನ ಅದ್ಭುತ ಕ್ರಿಯೆಗಳು ಸಂಪೂರ್ಣ ವಾಗಿವೆ. ಪವಿತ್ರಾತ್ಮನ ದೀಕ್ಷಾಸ್ನಾನ ಪರಿಮಿತವಾದ ಪ್ರಯೋಜನವಾಗಿದೆ.

### ಪವಿತ್ರಾತ್ಮನ ದೀಕ್ಷಾಸ್ನಾನ:

ಪವಿತ್ರಾ ತ್ಮನ ದೀಕ್ಷಾಸ್ನಾನವನ್ನು ಯೇಸು ಅಪೊಸ್ತಲರಿಗೆ ಮಾತ್ರ ವಾಗ್ದಾನ ಮಾಡಿದನು. ಯೋಹಾನ ಸುವಾರ್ತೆ 14ರಿಂದ 16ರ ವರೆಗೂ ಇರುವ ಅಧ್ಯಾಯಗಳು ಇದನ್ನು ವಿವರಿಸುತ್ತವೆ. ಅಲ್ಲಿ ಯೇಸು ಹೇಳಿದ ಕೆಲವು ಸಾಮಾನ್ಯ ಸಂಗತಿಗಳು ಇಂದು ಕ್ರೈಸ್ತರಿಗೆ ಅನ್ವಯಿಸುತ್ತವೆ(ಉದಾ: ಯೇಸು ತನ್ನವರಿಗೋಸ್ಕರ ಪುನಃ ಬರುತ್ತಾನೆ, ವಿಧೇಯತೆ ಮೂಲಕ ನಿಜವಾದ ಪ್ರೀತಿ ವ್ಯಕ್ತವಾಗುತ್ತದೆ (ಯೋಹಾನ 14:1–3,14:15,21,23–24; ಕ್ರಿಸ್ತನ ಶಿಷ್ಯರು ಫಲಕೊಡಬೇಕು. 15:1–6). ಈ ಸಂಗತಿಗಳು ಉಳಿದ ಸುವಾರ್ತೆಗಳಲ್ಲಿ ಕೂಡ ಬೋಧಿಸಲ್ಪಟ್ಟಿವೆ. ಆದರೆ ಪವಿತ್ರಾತ್ಮನ ದೀಕ್ಷಾಸ್ನಾವನ್ನು ಯೇಸು ತನ್ನ ಅಪೊಸ್ತಲರಿಗೆ ಮಾತ್ರವೇ ವಾಗ್ದಾನ ಮಾಡಿದನು ಅ.ಕೃ1:4–5 ಇದನ್ನು ವಿವರಿಸುತ್ತದೆ. ಪವಿತ್ರಾತ್ಮನ ದೀಕ್ಷಾಸ್ನಾನದಲ್ಲಿ ಅದ್ಭುತ ವರಗಳು ಕೂಡ ಸೇರಿಕೊಂಡಿವೆ (ಅ.ಕೃ 2:1–4). ಅಪೊಸ್ತಲರೇ ಪವಿತ್ರಾತ್ಮನ ದೀಕ್ಷಾಸ್ನಾನ



ಹೊಂದಿದ ಹಾಗೆ ಅ.ಕೃ 1:26 ಹೇಳುತ್ತದೆ.

ಅಪೊಸ್ತಲರು ಅದ್ಭುತಗಳನ್ನು ಮಾಡುವುದಕ್ಕೂ ಹೊಸ ಹೊಂದುವುದಕ್ಕೂ, ಅದನ್ನು ದೃಡೀಕರಿಸುವುಕ್ಕೂ ಹೊಸ ಒಡಂಬಡಿಕೆ ಸಭೆಯಲ್ಲಿ ಪವಿತ್ರಾತ್ಮನು ಪಾತ್ರ ವಹಿಸಿದನು. ಪವಿತ್ರಾತ್ಮನು ಎಲ್ಲಿಯೂ ಯಾರನ್ನು ರಕ್ಷಿಸಿದಂತೆ ಲೇಖನಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ.

### ಇತರೆ ಅದ್ಭುತ ಶಕ್ತಿ:

ಈ ಅದ್ಭುತ ಶಕ್ತಿ ಪವಿತ್ರಾತ್ಮನ ದೀಕ್ಷಾಸ್ನಾನದ ಮೂಲಕ ಹೊಂದಿದಂತದ್ದು. ಪ್ರಾರಂಭದ ಹಂತದಲ್ಲಿರುವ ಸಭೆಯಲ್ಲಿ ಕೆಲವರ ಮೇಲೆ ಅಪೋಸ್ತಲರು ಕೈಗಳನ್ನಿಡುವುದರ ಮೂಲಕ ಅವರೂ ಕೂಡ ಅದ್ಭುತಗಳನ್ನು ಮಾಡಿದರು. ಕೊರ್ನೇಲ್ಯನು ಆತನ ಮನೆಯವರೂ ಈ ನಿಯಮದಿಂದ ಬೇರೆಯಾಗಿ ಕಾಣಿಸುತ್ತಾರೆ (ಅ.ಕೃ 10–11ಅಧ್ಯಾಯಗಳು).

ಅವರು ಅನ್ಯ ಜನಾಂಗದೊಳಗಿಂದ ಕ್ರೈಸ್ತವರಾದವರಲ್ಲಿ ಮೊದಲನೆಯ ವರು. ಪವಿತ್ರಾತ್ಮನ ದೀಕ್ಷಾಸ್ನಾನ ಅದ್ಭುತ ಶಕ್ತಿ, ಯೋವೇಲನ ಪ್ರವಾದನೆಯಲ್ಲಿದೆ. "ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು. ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು. ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು; ಇದಲ್ಲದೆ ಆ ದಿನಗಳಲ್ಲಿ ದಾಸ ದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು (ಯೋವೇಲನು 2:28–29).

### ಅದ್ಭುತ ವರಗಳ ಪ್ರಯೋಜನ ಮತ್ತು ಅವುಗಳ ಅಂತ್ಯ:

ಅಪೊಸ್ತಲರು, ಉಳಿದವರೂ ಪ್ರಾರಂಭದ ಸಭೆಯಲ್ಲಿ/ಆದಿ ಸಭೆಯಲ್ಲಿ ಮಾಡಿದ ಅದ್ಬುತಗಳ ಪ್ರಯೋಜನವು ಮಾರ್ಕ 16:20 ರಲ್ಲಿ ಬರೆಯಲ್ಪಟ್ಟಿದೆ "ಇತ್ತಲಾಗಿ ಅವರು ಹೊರಟು ಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರಿದರು. ಮತ್ತು ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕ ಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು" (ಮಾರ್ಕ 16:20). ಸುವಾರ್ತೆ ವಾಕ್ಯವು ಒಂದುಸಾರಿ ಸ್ಥಿರಪಡಿಸಲ್ಪಟ್ಟಂತೆ (ಇಬ್ರಿಯ 2:3) ಬರೆಯಲ್ಪಟ್ಟ ನಂತರ (ಯೋಹಾನ 20:30–31). ಪ್ರವಾದನೆಗಳು ನಿಂತುಹೋದವು (1ಕೋರಿಂಥ 13:8–13; ಯಾಕೋಬ 1:25; ಎಫೆಸ 4:11–14). ಅದ್ಭುತ ರೀತಿಯಾಗಿ ಮಾಡುವ ಪವಿತ್ರಾತ್ಮನ ಕಾರ್ಯ ನಿಂತು ಹೊಯಿತು.

ರೋಗಿಗಳನ್ನು ಸ್ವಸ್ಥಮಾಡಲು ಅನ್ಯಭಾಷೆಗಳನ್ನು ಮಾತನಾಡಲು ಇನ್ನಿತರ

ಕ್ರಿಯೆಗಳಿಗೆ ಮಾತ್ರ ಅದ್ಭುತಗಳು ಪ್ರಯೋಜನವಲ್ಲ, ವಾಕ್ಯವನ್ನು ಸ್ಥಿರಪಡಿಸುವುದೇ ಅದರ ಪ್ರಯೋಜನ. ಕೊರಿಂಥದಲ್ಲಿರುವ ಸಭೆಯು ಅದ್ಭುತವರಗಳನ್ನು ಕುರಿತು ಹೆಚ್ಚಿಸಿಕೊಂಡಿತು. ಅವರ ತಪ್ಪನ್ನು ಅಪೊಸ್ತಲನಾದ ಪೌಲನು ಸರಿ ಮಾಡಿದನು (1ಕೊರಿಂಥ'12–14ಅಧ್ಯಾಯಗಳು).

**ಮುಕ್ತಾಯ:**

ಪವಿತ್ರಾತ್ಮನು ಇಂದು ಅದ್ಭುತ ರೀತಿಯಾಗಿ ಮನುಷ್ಯರೊಂದಿಗೆ ಸಂಪರ್ಕಿಸುವುದಿಲ್ಲವೆಂಬುದು ಆಶ್ಚರ್ಯವಲ್ಲ. ದೈವತ್ವದಲ್ಲಿ ವ್ಯಕ್ತಿಯಾದ ಪವಿತ್ರಾತ್ಮ ದೈವಿಕ ತೀರ್ಪುಗಳಲ್ಲಿಯೂ ಹೊಸ ಪ್ರವಾದನೆಯಲ್ಲಿಯೂ ಅದ್ಭುತಗಳಲ್ಲಿಯೂ ಕಾಣಿಸಿದರೂ, ಅಂತಹ ಸಂದರ್ಭಗಳು ತುಂಬ ವಿರಳ (ಕಡಿಮೆ) ಅವು ಅನುದಿನ ಸಂಘಟನೆಗಳಲ್ಲ (ಕಾರ್ಯಗಳು).

ಸುವಾರ್ತೆಯನ್ನು ಸಾರಲು ಪವಿತ್ರಾತ್ಮನು ಇಂದು ಯಾರಿಗೂ ಅದ್ಭುತಗಳನ್ನು ಮಾಡುವ ಶಕ್ತಿಕೊಟ್ಟಿಲ್ಲ. ಸುವಾರ್ತೆ ಅದ್ಭುತ ರೀತಿಯಿಂದ ಹೊಂದುತ್ತಾ ಅದನ್ನು ಬೋಧಿಸಿ, ಗ್ರಹಿಸಿದ ಹೊಸ ಒಡಂಬಡಿಕೆಯ ಸಭೆಯು ಆತ್ಮದಲ್ಲಿ ದೈವಿಕವಾದದು. ಒಂದು ಕಾಲದಲ್ಲಿ ಪವಿತ್ರಾತ್ಮನು ಅದ್ಭುತ ರೀತಿಯಿಂದ ಕೆಲಸ ಮಾಡಿದನು ಈಗ ಆ ರೀತಿ ಕೆಲಸ ಮಾಡುತ್ತಿಲ್ಲ.

ಯೋವೆಲ 2:28–29 ತರಹದ ಪ್ರವಾದನೆಗಳು ಅಪೊಸ್ತಲರು ಪವಿತ್ರಾತ್ಮ ದೀಕ್ಷಾಸ್ನಾನ ಹೊಂದುವುದರೊಂದಿಗೆ ನೆರವೇರಿಕೆ ಆರಂಭವಾಯಿತು. ನಂತರದಲ್ಲಿ ಅಪೊಸ್ತಲರು ಕೆಲವರ ಮೇಲೆ ಕೈಗಳನ್ನಿಟ್ಟಾಗ ಅವರು ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಹೊಂದಿದರಿಂದ ಆ ಪ್ರವಾದನೆ ಇನ್ನು ನೆರವೇರಿತು. ಸುವಾರ್ತೆ ವಾಕ್ಯವನ್ನು ಸ್ಥಿರಪಡಿಸಲು ಅದ್ಭುತ ವರಗಳ ಅನುಗ್ರಹಿಸಲ್ಪಟ್ಟವು. ಅದು ಮುಖ್ಯ ಪ್ರಯೋಜನ. ಸುವಾರ್ತೆ ವಾಕ್ಯವು ಸ್ಥಿರ ಪಡಿಸಲ್ಪಟ್ಟಿದೆ. ಆದುದರಿಂದ ಅದ್ಭುತ ವರಗಳು ಅವಶ್ಯಕತೆ ಇಲ್ಲ. ಅಪೊಸ್ತಲರು, ಕೈಗಳನ್ನಿಟ್ಟವರೂ ಮರಣ ಹೊಂದಿದರಿಂದ ಅದ್ಭುತಗಳನ್ನು ಮಾಡುವವರಿಲ್ಲ. ಹೊಸ ಒಡಂಬಡಿಕೆ ಗ್ರಂಥವು ಸಂಪೂರ್ಣವಾಗಿರುವುದರಿಂದ ಇಂದು ಅದ್ಭತಗಳ ಅವಶ್ಯಕತೆ ಇಲ್ಲ.



## 13. ಹೊಸ ಒಡಂಬಡಿಕೆ ಸಭೆಯು ಪ್ರೀತಿಯಲ್ಲಿ ದೈವಿಕವಾದದ್ದು
## (The New Testament Church is Divine in Love)

ಪ್ರೀತಿ ಎನ್ನುವ ವಿಷಯವನ್ನು ನಾವು ಹಲವು ವಿಧಗಳಾಗಿ ಅಧ್ಯಾಯನ ಮಾಡಬಹುದು. ಹೊಸ ಒಡಂಬಡಿಕೆಯ ಸಭೆಯು ಯಾರ ಮೇಲೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಬೇಕು? ಈ ಪ್ರೀತಿ ಯಾವ ರೂಪದಲ್ಲಿ ಪ್ರಕಟಿಸ್ಪಡಬೇಕು? ಇಂಥದ್ದು ವ್ಯಕ್ತ ಪಡಿಸಲು ಕಾರಣಗಳೇನು? ಇಂತಹ ಪ್ರೀತಿಗೆ ದೇವರು ಪ್ರತಿಫಲ ಪ್ರಕಟಿಸುವುದರಿಂದ ಹೊಸ ಒಡಂಬಡಿಕೆಗೆ ಉಂಟಾಗುವವುಗಳನ್ನು ಪರಿಶೀಲಿಸೋಣ.

### ಯಾರಿಗೆ ಪ್ರೀತಿ ತೋರಿಸಬೇಕು?

ನಾವು ಯಾರಿಗೆ ಪ್ರೀತಿ ತೋರಿಸ ಬೇಕೊ ಯೇಸು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾನೆ. "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದೂಂಟು, ಅದು ಯಾವುದೆಂದರೆ "ನಿನ್ನ ನೆರೆಯವನನ್ನು ನಿನ್ನಂತೆಯೇ ಪೀತಿಸಬೇಕು ಎಂಬುದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ, ಪ್ರವಾದನೆ ಗ್ರಂಥಕ್ಕೂ ಆಧಾರವಾಗಿವೆ ಎಂದು ಹೇಳಿದನು" (ಮತ್ತಾಯ 22:37–40).

ತನ್ನ ಜನರು ಎಲ್ಲಾ ವಿಧವಾಗಿಯೂ ಪ್ರೀತಿಯನ್ನು ಪ್ರಕಟಿಸಬೇಕೆಂದು ದೇವರು ಕೋರುತ್ತಿದ್ದಾನೆ. ಸಾಮಾನ್ಯವಾಗಿ ನಾವು ದೇವರನ್ನು ನಮ್ಮ ಸಹೋದರರನ್ನು (ಅಕ್ಕಪಕ್ಕದವರನ್ನು ಪ್ರೀತಿಸ ಬೇಕು). ನಮ್ಮ ಪ್ರೀತಿ ಹಲವು ವಿಧವಾಗಿ ಪ್ರಕಟಿಸಲ್ಪಡದೇ ಇದ್ದರೆ ದೇವರಿಗೆ ಇಷ್ಟವಾಗಿರಲಾರೆವು.

ಮೊದಲನೆಯದಾಗಿ ನಾವು ದೇವರನ್ನು ಪ್ರೀತಿಸಬೇಕು ದೇವರಿಗೆ ಸಲ್ಲಿಸಬೇಕಾದ ಪ್ರೀತಿಯನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಲಾರೆವು (ಮತ್ತಾಯ 6:24). ಕ್ರೈಸ್ತರು ದೇವರಿಗಿಂತ ಹೆಚ್ಚಾಗಿ ತಂದೆ ತಾಯಿಯ ಮೇಲಾಗಲಿ ಮಕ್ಕಳ ಮೇಲಾಗಲಿ (ಮತ್ತಾಯ 10:37), ಹಣವನ್ನಾಗಲಿ (1ತಿಮೊಥೆ 6:10). ಲೋಕವನ್ನಾಗಲಿ (1ಯೋಹಾನ 2:15–17) ತನ್ನ ಪ್ರಾಣವನ್ನಾಗಲಿ (ಯೋಹಾನ 12:25) ಪ್ರೀತಿಸಬಾರದು. ದೇವರ ಪ್ರೀತಿಯಿಂದ

ಯಾವುದೂ ನಮ್ಮನ್ನು ಅಗಲಿಸಲಾರದು ಎಂಬ ಎಚ್ಚರಿಕೆಯನ್ನು ನಾವು ಹೊಂದಿದ್ದೇವೆ (ರೋಮಾ 8:15–39) ದೇವರ ಮೇಲಿರುವ ನಮ್ಮ ಪ್ರೀತಿಯನ್ನು ಕಾಪಾಡಿಕೊಳ್ಳಬೇಕು (ಯೂದ 1:21). ದೇವರನ್ನು ಪ್ರೀತಿಸುವವರನ್ನು ಆತನು ತಿಳಿದುಕೊಳ್ಳುತ್ತಾನೆ (1ಕೊರಿಂಥ 8:3) ಮತ್ತು ಕರ್ತನನ್ನು ಪ್ರೀತಿಸದಿದ್ದವರು ಶಾಪಗ್ರಸ್ಥರಾಗುವರು (1ಕೊರಿಂಥ 6:22).

ದೇವರ ಮನುಷ್ಯನ ಪ್ರೀತಿಯನ್ನು ನೋಡಿ ಆತನು ಮನುಷ್ಯನನ್ನು ಕೂಡ ಪ್ರೀತಿಸುತ್ತಾನೆ "ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರರನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನು ಪ್ರೀತಿಸ ಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ" (1ಯೋಹಾನ 4:20–21).

ನಾವು ನಮ್ಮ ನೆರೆಯವನನ್ನು ಪ್ರೀತಿಸಬೇಕೆಂದು ಅನೇಕ ಲೇಖನೆ ಭಾಗಗಳು ಬೋಧಿಸುತ್ತಿವೆ (ಮತ್ತಾಯ 19:19; ರೋಮಾ 13:910; ಗಲಾತ್ಯ5:14; ಯಾಕೋಬ 2:8). ಎಲ್ಲರನ್ನೂ ಪ್ರೀತಿಸಬೇಕು (1ಥೆಸ 3:12). ಆದರೂ ನಮ್ಮನ್ನು ಪ್ರೀತಿಸದವರನ್ನು ಪ್ರೀತಿಸುವುದೇ ಕ್ರೈಸ್ತರಿಗೂ ಅನ್ಯರಿಗೂ ಇರುವ ವ್ಯತ್ಯಾಸ (ಮತ್ತಾಯ 5:46, ಲೂಕ 6:32). ನಮ್ಮ ನೆರೆಯವರಿಗೂ, ಲೋಕಕ್ಕೂ ನಾವು ತೋರಿಸುವ ಪ್ರೀತಿಯೇ ನಮ್ಮ ಗುರುತಾಗಿರಬೇಕು. "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ ಏನೆಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ.

ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು ಅಂದನು (ಯೋಹಾನ 13:34–35).

ಕ್ರೈಸ್ತರು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಸುವಾರ್ತೆಯು ಬಯಸುತ್ತದೆ (ಯೋಹಾನ 15:12,17; ರೋಮಾ 13:8; 1ಥೆಸ3:12;4:9 1ಪೇತ್ರ1:22;1 ಯೋಹಾನ 3:11,23;4:7; 2ಯೋಹಾನ5). ಕ್ರೈಸ್ತರು ಸಹೋದರ ಪ್ರೀತಿಯನ್ನು ಸ್ಥಿರವಾಗಿರಿಸಬೇಕು (ರೋಮಾ 12:10; 1ಥೆಸ4:9; ಇಬ್ರಿಯಾ 13:1). ಸಹೋದರರನ್ನು ಪ್ರೀತಿಸಬೇಕು (1ಪೇತ್ರ 2:17;3:8; 1ಯೋಹಾನ 3:14).



ಇವೆಲ್ಲವುಗಳೊಂದಿಗೆ ನಮ್ಮ ಕುಟುಂಬವನ್ನು ಕೂಡ ಪ್ರೀತಿಸಬೇಕು (ಎಫೆಸ 5:25–33;ಕೊಲೊಸ್ಸೆ 3:19; ತೀತ 2:4). ವಿವಾಹ ವ್ಯವಸ್ಥೆಯನ್ನು ದೇವರು ಘನವಾಗಿ ಎಣಿಸುತ್ತಾನೆ. ಅದರಲ್ಲಿ ಪ್ರೀತಿಯ ಪ್ರಾಮುಖ್ಯತೆಯನ್ನು ಆತನು ತಿಳಿಸಿದ್ದಾನೆ. ಸಭೆಗೂ, ಸಮಾಜಕ್ಕೂ ಕುಟುಂಬವು ಪ್ರಾಥಮಿಕ ಮೂಲಾಂಶ ವಾಗಿದೆ.

**ಸಭೆಯು ಪ್ರೀತಿಯನ್ನು ಹೇಗೆ ತೋರಿಸಬೇಕು?:**

ಪ್ರೀತಿಗೂ, ವಿಧೇಯತೆಗೂ ಇರುವ ಅವಿನಾಭಾವ ಸಂಬಂಧವನ್ನು ಅಪೊಸ್ತಲನಾದ ಯೋಹಾನನು ತನ್ನ ಲೇಖನಗಳಲ್ಲಿ ತಿಳಿಸಿದ್ದಾನೆ. ದೇವರ ಆಜ್ಞೆಗಳನ್ನು ಪಾಲಿಸದೇ ಒಬ್ಬನು ದೇವರನ್ನು ಪ್ರೀತಿಸುತ್ತಾನೆಂದು ಹೇಳಲಾರನು. "ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ" ಎಂದು ಯೇಸು ಹೇಳಿದ್ದಾನೆ (ಯೋಹಾನ 14:15). "ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಗೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು (ಯೋಹಾನ 14:21).

"ಯೇಸು ಅವನಿಗೆ ಯಾರಾದರೂ ನನ್ನನ್ನು ಪ್ರೀತಿಸುವವರಾದರೆ ನನ್ನ ಮಾತನ್ನು ಕೈಗೊಂಡು ನಡೆಯುವನು. ಅವನನ್ನು ನನ್ನ ತಂದೆಯು ಪ್ರೀತಿಸುವನು. ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು (ಯೋಹಾನ 14:23). "ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಗೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ (ಯೋಹಾನ 15:10). "ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವುದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ (1ಯೋಹಾನ 5:3).ಸಭೆಯು ತನ್ನ ಪ್ರೀತಿಯನ್ನು ಹೇಗೆ ತೋರಿಸಬೇಕು? ಬೈಬಲ್ ವಿಧಕ್ಕಿಂತ ಶ್ರೇಷ್ಠವಾದ ಇನ್ನೊಂದು ಮಾರ್ಗ ಇದೆಯಾ? ಪ್ರೀತಿಯನ್ನು ಪ್ರಕಟಿಸುವುದರ ಮೂಲಕ ಇದರ ವಿಷಯವಾಗಿ ಬೈಬಲ್ ಹೇಳುವುದೆಲ್ಲವೂ ಕ್ರೈಸ್ತರು ಮಾಡಲು ಬಾಧ್ಯರಾಗಿದ್ದಾರೆ. "ನಾವು ದೇವರ ಮಕ್ಕಳನ್ನು ಪ್ರೀಸುತ್ತೇವೆಂಬುದನ್ನು ದೇವರನ್ನು ಪ್ರೀತಿಸಿ ಆತನ

ಆಜ್ಞೆಗಳನ್ನು ಅನುಸರಿಸುವುದರಿಂದಲೇ ತಿಳಿದುಕೊಳ್ಳುತ್ತೇವೆ" (1ಯೋಹಾನ 5:2). ದೇವರ ವಾಕ್ಯವನ್ನು ಅನುಸರಿಸುವುದರ ಮೂಲಕ ಪ್ರೀತಿ ಪರಿಪೂರ್ಣವಾಗುತ್ತದೆ.

### ಸಭೆಯು ಯಾಕೆ ಪ್ರೀತಿಸಬೇಕು?

ಈ ಪ್ರಶ್ನೆಗೆ ಲೇಖನೆಗಳೇ ಸರಿಯಾಗಿ ಉತ್ತರಕೊಡುತ್ತಿವೆ. "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1ಯೋಹಾನ 4:19). ಈ ಸತ್ಯವನ್ನು ಇನ್ನಷ್ಟು ಬಲವಾಗಿ ರೋಮಾ 5:8 ಹೇಳುತ್ತಿದೆ. "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ". ದೇವರ ಪ್ರೀತಿಯ ಆಳವನ್ನು ನಾನು ಗ್ರಹಿಸಿಕೊಳ್ಳಲಾರೆ. "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿ ಕೊಟ್ಟದರಲ್ಲಿಯೇ. ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ. ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿ ಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ" (1ಯೋಹಾನ 4:9–10).

### ಪ್ರೀತಿಗೆ ಪ್ರತಿಫಲ ದೊರಕುವುದೆ?

ಹೌದು. ಪ್ರೀತಿಗೆ ತಕ್ಕ ಪ್ರತಿಫಲ ತಪ್ಪದೇ ದೊರೆಯುತ್ತದೆ. ಈ ಲೋಕದಲ್ಲಿಯೂ, ಬರುವ ಲೋಕದಲ್ಲಿಯೂ ಕೂಡ ಫಲ ಲಭಿಸುತ್ತದೆ. ಆತನನ್ನು ಪ್ರೀತಿಸುವವರ ಮೇಲೆ ದೇವರ ಕಾಯುವಿಕೆ ಇರುತ್ತದೆ. "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸಿವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ. ಎಂದು ನಮಗೆ ಗೊತ್ತದೆ" (ರೋಮಾ 8:28). ಕೊನೆಯದಾಗಿ ನಿತ್ಯಜೀವ ಕಿರೀಟ, ನಿತ್ಯರಾಜ್ಯ ಪ್ರವೇಶದ ಬಹುಮಾನ ಕೊಡಲ್ಪಡುತ್ತದೆ. "ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು, ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು" (ಯಾಕೋಬ 1:12). "ನನ್ನ ಪ್ರಿಯ ಸಹೋದರರೇ, ಕೇಳಿರಿ, ದೇವರು ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ಆದುಕೊಂಡು ಅವರು ನಂಬಿಕೆಯಲ್ಲ ಐಶ್ವರ್ಯವಂತರಾಗಿಯೂ ತನ್ನನ್ನು ಪ್ರೀತಿಸುವವರಿಗೆ ತಾನು ವಾಗ್ದಾನ



ಮಾಡಿದ ರಾಜ್ಯಕ್ಕೆ ಬಾಧ್ಯರಾಗಿಯೂ ಇರಬೇಕೆಂದು ನೇಮಿಸಲಿಲ್ಲವೋ?" (ಯಾಕೋಬ 2:4).

### ಪ್ರೀತಿಯ ಲಕ್ಷಣಗಳು:

ಮನುಷ್ಯರು ಹುಡುಕುವ ಸಂಗತಿಗಳೆಲ್ಲವುಗಳಿಗಿಂತ ಪ್ರೀತಿಯು ಪ್ರಾಧಾನ್ಯತೆಯುಳ್ಳದ್ದು.....! ಪ್ರೀತಿಯು ನಟಿಸುವುದಿಲ್ಲ, ಅದು ಕಪಟವಿಲ್ಲದ್ದು (ರೋಮಾ 12:9; 2ಕೊರಿಂಥ 6:6; 1ಪ್ರೇತ್ರ1:22). ಪ್ರೀತಿಸುವವರಿಗೆ ಸೇವೆ ಮಾಡುವ ಅವಕಾಶವನ್ನು ಪ್ರೀತಿಯು ತೋರಿಸುತ್ತದೆ (ಗಲಾತ್ಯ 5:13). ನಂಬಿಕೆ, ಪ್ರೀತಿ ಎರಡು ಸಾಮಾನ್ಯವಾಗಿ ಒಂದಾಗಿರುತ್ತವೆ (ಎಫೆಸ 6:23; 1ತಮೊಥೆ 1:13). ಪ್ರೀತಿಯು ಇತರರನ್ನು ಸನ್ಮಾನಿಸುವಂತಿರಬೇಕು. ದೇವರು ತನ್ನ ಮಕ್ಕಳಿಗೆ ಪ್ರೀತಿಯುಳ್ಳ ಆತ್ಮವನ್ನೇ ಕೊಡುವನು (2ತಿಮೋತಿ 1:7). ನಿಜವಾದ ಪ್ರೀತಿ ಮಾತಿನಲ್ಲಿ ಅಲ್ಲ, ಕೈಗಳಲ್ಲಿರುತ್ತದೆ (1ಯೋಹಾನ 3:18). ನಿಜವಾದ ಪ್ರೀತಿ ಪ್ರಯಾಸ ಪಟ್ಟು ಕೆಲಸ ಮಾಡುತ್ತದೆ (1ಥೆಸ 1:3; ಇಬ್ರಿಯ 6:10). ಪ್ರೀತಿಯು ಯಾವಾಗಲೂ ಸತ್ಯವನ್ನೇ ಮಾತನಾಡುತ್ತದೆ (ಎಫೆಸ 4:15). ನಾವು ಪ್ರೀತಿಯಲ್ಲಿ ನಡೆದುಕೊಳ್ಳಬೇಕು (ಎಫೆಸ 5:2). ಪ್ರೀತಿಯು ಹೆಚ್ಚುತ್ತಾ ಹೋಗಬೇಕು (ಪಿಲಿಫ್ಪಿ 1:9). ಪ್ರೀತಿಯಿಂದ ಹೊಂದಿಕೆಯಾಗಿರಬೇಕು(ಕೊಲೊಸ್ಸೆ 2:2). ಪ್ರೀತಿಯನ್ನು ಕುರಿತು 1ಕೋರಿಂಥ 13:4–7 ರಲ್ಲಿ ಹೀಗೆ ಹೇಳಲ್ಪಟ್ಟಿದೆ. "ಪ್ರೀತಿಯು ಬಹು ತಾಳ್ಮೆಯುಳ್ಳದ್ದು. ಪ್ರೀತಿ ದಯೆ ತೋರಿಸುವುದು, ಪ್ರೀತಿ ಹೊಟ್ಟೆ ಕಿಚ್ಚು ಪಡುವುದಿಲ್ಲ, ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗಲು ಸಂತೋಷಪಡುತ್ತದೆ, ಎಲ್ಲಾವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ.

### ಪ್ರೀತಿಯ ಪರ್ಯವಸ್ಥಾನ:

ಪ್ರೀತಿಯ ಮೂಲಕ ದೇವರೊಂದಿಗೆ ನಮ್ಮ ಸಂಬಂಧ, ನಂತರ ಪರಲೋಕದೊಳಗೆ ವಿಜಯವಂತವಾಗಿ ಪ್ರವೇಶ ಉಂಟಾಗುತ್ತದೆ. "ನ್ಯಾಯ ತೀರ್ಪಿನ ದಿನದಲ್ಲಿ ನಮಗಿರುವ ಧೈರ್ಯದಲ್ಲಿಯೇ ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂತು ಯಾಕೆಂದರೆ ಕ್ರಿಸ್ತನು ಎಂಥವವಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ. ಪ್ರೀತಿಯು ಇರುವಲ್ಲಿ ಹೆದರಿಕೆ ಇಲ್ಲ, ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವುದು. ಪೂರ್ಣ ಪ್ರೀತಿಯು ಹೆದರಿಕೆಯನ್ನು

ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆಬಂದವನಲ್ಲ" (1ಯೋಹಾನ 4:17–18). ಒಬ್ಬ ಮನುಷ್ಯನು ಸೇರಬೇಕಾದ ಗುರಿಯನ್ನು ಸೇರಲು ಪ್ರೀತಿಯು ಹೆಚ್ಚಾಗಿ ಸಹಾಯ ಮಾಡುತ್ತದೆ. ಪ್ರೀತಿಯು ಹೆಚ್ಚಾಗಲು ನಾವು ಒಬ್ಬರಿಗೊಬ್ಬರು ಪ್ರೇರೇಪಿಸಲ್ಪಡಬೇಕು (ಇಬ್ರಿಯ 10:24).

**ಮುಕ್ತಾಯ:**

ನಾವು ದೇವರನ್ನೂ ನೆರೆಯ ಮನುಷ್ಯನನ್ನೂ ಪ್ರೀತಿಸುವುದು ಪ್ರಾಮುಖ್ಯ. ಜೊತೆ ಕ್ರೈಸ್ತರೊಂದಿಗೆ ಪ್ರೀತಿಯಿಂದಿರಬೇಕು. ಸಭೆಯೂ, ಕ್ರಿಸ್ತನವರು ಪ್ರೀತಿಯಿಂದಾನೇ ಪ್ರಬಲವಾಗುವರು.

ದೇವರ ಆಜ್ಞೆಗಳಿಗೆ ವಿಧೇಯತೆ ತೋರಿಸುವುದೇ ದೇವರ ಪ್ರೀತಿಗೆ ನಾವು ಸ್ಪಂದಿಸಬೇಕಾದ ವಿಧಾನ. ದೇವರು ತನ್ನ ಮಕ್ಕಳಿಗೆ ಪ್ರತಿಫಲ ಕೊಡುವನು. ಬೈಬಲ್ ಸೂಚಿಸುವ ಪ್ರೀತಿಯನ್ನು ಅನುಸರಿಸಿದರೆ ದೇವರು ಬಯಸಿದ ಹಾಗೆ ನಾವು ತಯಾರಾಗಬಹುದು. ಪ್ರೀತಿಯಿಂದ ಇಲ್ಲಿ ಶ್ರೇಷ್ಠ ಜೀವನವನ್ನು ಹೊಂದುವೆವು. ದೇವರು ನಮಗೆ ಪರಲೋಕವನ್ನು ಪ್ರಸಾದಿಸುವನು. ಪ್ರೀತಿಯಿಂದ ಮರಣದ ಮತ್ತು ಪ್ರೀತಿಯ ಭಯ ದೂರವಾಗುತ್ತದೆ. ನಿತ್ಯಜೀವನ ಸುಖವನ್ನು ಪ್ರಸಾದಿಸುವ ಬೈಬಲ್ ಪ್ರೀತಿಯನ್ನು ಯಾರಾದರೂ ಯಾಕೆ ನಿರಾಕರಿಸಬೇಕು?.

# ದೈವಿಕ ಸಭೆ

# THE DIVINE CHURCH



ದೈವಿಕ ಸಭೆ THE DIVINE CHURCH



Copies can be had from :

*Abmedkar Nagara, Sanganakallu, Ballari - 583103.*
*Ph – 9739408727, 8217816550*
*e*-mail : eshwarcoc@gamil.com

Louis Rushmore